ನನ್ನ ಏಳಿಗೆಯ ಶಿಲ್ಪಿ ನಾನೇ.....



# 10ನೇ ತರಗತಿ

# ಸಮಾಜ ವಿಜ್ಞಾನ

# ಸವಿಮಿತ್ರ

## ಉನ್ನತ ಶ್ರೇಣಿಯಲ್ಲಿ "ಉತ್ತೀರ್ಣ"ವಾಗಲು

## ಪರಿಷ್ಕೃತ ಸ್ಕೋರಿಂಗ್ ಪ್ಯಾಕೇಜ್–2020

ವಸಂತಕುಮಾರ(ವಾಸು). ಶ್ಯಾಗೋಟಿ.
ಸರಕಾರಿ ಪ್ರೌಢಶಾಲೆ ಹದಲಿ, ಗದಗ

## -: ಮನದ ಮಾತು :-

ಆತ್ಮೀಯರೇ,

"**ಉತ್ತೀರ್ಣ**" ಈಗ "**ಸವಿಮಿತ್ರ**" ವಾಗಿ ಹೊರಬರುತ್ತಿದೆ. ಈ ಹೊತ್ತಿಗೆ ಕೇವಲ ಪಾಸಿಂಗ್ ಪ್ಯಾಕೇಜ್ ಅಲ್ಲ, ಸ್ಕೋರಿಂಗ್ ಪ್ಯಾಕೇಜ್. ಇದನ್ನು 50–60 ಅಂಕಗಳನ್ನು ಪಡಯಲು ಸಹಕಾರಿಯಾಗುವಂತೆ ರಚಿಸಲಾಗಿದೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಈ ವರ್ಷದಿಂದ ಪ್ರಶ್ನೆಪತ್ರಿಕೆ ಸ್ವರೂಪದಲ್ಲಿ ಬದಲಾವಣೆ ಮಾಡಿ ಥೀಮ್‌ವೈಸ್ ಪ್ರಶ್ನೆಪತ್ರಿಕೆಯನ್ನು ಜಾರಿಗೆ ತಂದಿದ್ದು, ಈ ಥೀಮ್‌ವೈಸ್ ಪ್ರಶ್ನೆಪತ್ರಿಕೆಗೆ ಅನುಗುಣವಾಗಿ 1, 2, 3, ಹಾಗೂ 4 ಅಂಕದ ಪ್ರಶ್ನೋತ್ತರಗಳು ಹಾಗೂ 5 ಅಂಕದ ನಕಾಶೆಗಳನ್ನು ಒಳಗೊಂಡ "**ಸವಿಮಿತ್ರ**"ವನ್ನು ರಚಿಸಲಾಗಿದೆ.

ತಮಗೆಲ್ಲಾ ಗೊತ್ತಿರುವಂತೆ 2 ಅಂಕದ ಪ್ರಶ್ನೆಗಳಿಗೆ 3–4 ಅಂಶಗಳು (ಪಾಯಿಂಟ್), 3 ಅಂಕದ ಪ್ರಶ್ನೆಗಳಿಗೆ 5–6 ಅಂಶಗಳು ಹಾಗೂ 4 ಅಂಕದ ಪ್ರಶ್ನೆಗಳಿಗೆ 8 ಅಂಶಗಳನ್ನು ಬರೆಯಬೇಕು. ಉತ್ತರ ಎಷ್ಟು ಪಾಯಿಂಟ್ ಇದೆ ಎಂಬುದರ ಆಧಾರದ ಮೇಲೆ 2 ಅಥವಾ 3 ಅಥವಾ 4 ಅಂಕದ ಪ್ರಶ್ನೆಗಳನ್ನು ರಚಿಸಲಾಗುತ್ತದೆ. ಆದರೆ ಇಲಾಖೆ ವೇಟೇಜ್ ಬಿಟ್ಟಿಲ್ಲದ ಕಾರಣ ಒಂದು ಅಧ್ಯಾಯದಿಂದ ಯಾವುದೇ ರೀತಿಯ ಪ್ರಶ್ನೆಗಳನ್ನು ಕೇಳುವ ಸಾಧ್ಯತೆ ಇರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂದು ಕೆಲವು ಅಧ್ಯಾಯಗಳ ಮುಂದೆ "2 ಅಥವಾ 3 ಅಂಕದ ಪ್ರಶ್ನೆಗಳು" ಎಂದು ಹಾಕಲಾಗಿದೆ. ಅಂದರೆ ಆ ಅಧ್ಯಾಯದಲ್ಲಿ 2 ಅಥವಾ 3 ಅಂಕದ ಪ್ರಶ್ನೆ ಕೇಳಬಹುದು ಎಂದರ್ಥ.

ಇಲಾಖೆಯ ಮಾದರಿ ಪ್ರಶ್ನೆಪತ್ರಿಕೆಗಳನ್ನು ಗಮನಿಸಿದರೆ, ಪ್ರಶ್ನೆಗಳನ್ನು ಪರೋಕ್ಷವಾಗಿ ಕೇಳುವ ಸಾಧ್ಯತೆಗಳು ಹೆಚ್ಚು. ಆದರೆ "**ಸವಿಮಿತ್ರ**"ದಲ್ಲಿ ನೇರವಾದ ಪ್ರಶ್ನೆಗಳನ್ನು ಮಾತ್ರ ಸೇರಿಸಲಾಗಿದೆ. ಕಾರಣ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಮಕ್ಕನ್ನು ಪರೀಕ್ಷೆಗೆ ಸಿದ್ಧತೆ ನಡೆಸುವಾಗ ಇದರ ಕಡೆ ಗಮನಹರಿಸಲು ತಿಳಿಸಿದೆ.

ಈ "**ಸವಿಮಿತ್ರ**" ಪುಸ್ತಕವು ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಪ್ರಯೋಜನಕಾರಿಯಾಗುವುದೆಂದು ಭಾವಿಸುತ್ತೇನೆ. "**ಸವಿಮಿತ್ರ**"ವನ್ನು ಉಪಯೋಗಿಸಿಕೊಂಡು ಅಧಿಕ ಅಂಕಗಳೊಂದಿಗೆ "**ಉತ್ತೀರ್ಣ**"ರಾಗಿ ಎಂದು ಹಾರೈಸುತ್ತೇನೆ. ಈ ಪುಸ್ತಕ ಹೊರಬರಲು ಪ್ರೇರಣೆಯಾದ ಎಸ್.ಎಸ್. ಎಸ್.ಟಿ.ಎಫ್. ಡಿಜಿಟಲ್ ತಂಡದ ಶಿಕ್ಷಕ ಮಿತ್ರರಿಗೆ, ಸಮಾಜವಿಜ್ಞಾನ ಶಿಕ್ಷಕ ಬಾಂಧವರಿಗೆ, ವಿದ್ಯಾರ್ಥಿ ಮಿತ್ರರಿಗೆ ಹಾಗೂ ಸಲಹೆಗಳನ್ನು ನೀಡಿದ ಮಹದೇವಪ್ಪ ಕುಂದರಗಿ ಅವರಿಗೆ ಧನ್ಯವಾದಗಳು.

**ವಸಂತ(ವಾಸು). ಶ್ಯಾಗೋಟಿ.**

ಸರ್ಕಾರಿ ಪ್ರೌಢಶಾಲೆ ಹದಲಿ. ಗದಗ ಜಿಲ್ಲೆ

**9964031435**

**https://hsmitra.blogspot.com**

# ಒಂದು ಅಂಕದ ಪ್ರಶ್ನೋತ್ತರಗಳು

## 1. ಭಾರತಕ್ಕೆ ಯುರೋಪಿಯನ್ನರ ಆಗಮನ

- ಕಾನ್ಸಟಾಂಟಿನೋಪಲ್ ವಶ – **1453, ಅಟೋಮನ್ ಟರ್ಕರು**
- ವಾಸ್ಕೋಡಿಗಾಮನು ಭಾರತಕ್ಕೆ ಬಂದು ತಲುಪಿದ ಪ್ರದೇಶ **– ಕಲ್ಲಿಕೋಟೆ ಹತ್ತಿರ ಕಾಪ್ಪಡ್, 1498ರಲ್ಲಿ**
- ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು – **ಪೋರ್ಚುಗೀಸರು**
- ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವರು – **ಅಲ್ಮೇಡ್**
- ಇಂಗ್ಲೀಷರಿಗೆ ಸೂರತ್‌ನಲ್ಲಿ ಮೊದಲ ಫ್ಯಾಕ್ಟರಿ ತೆರೆಯಲು ಫರ್ಮಾನ್ ನೀಡಿದವನು – **ಜಹಾಂಗೀರ**
- ಜಹಾಂಗೀರನ ಆಸ್ಥಾನಕ್ಕೆ ಬಂದ ಬ್ರಿಟಿಷರ ರಾಯಭಾರಿ – **ಸರ್ ಥಾಮಸ್ ರೋ**
- **ನೀಲಿ ನೀರಿನ ನೀತಿ** – ಭೂಮಿಯ ಮೇಲಿನ ಅಧಿಪತ್ಯದ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವುದು.
- ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ **– ಆಲ್ಬುಕರ್ಕ್**
- ಭಾರತದಲ್ಲಿ ಫ್ರೆಂಚರಿಗೂ & ಬ್ರಿಟಿಷರಿಗೂ ನಡೆದ ನಿರ್ಣಾಯಕ ಕದನ – **ವಾಂಡಿವಾಷ್**
- **ಡಚ್ಚರು ಸಾಂಬಾರು ದ್ವೀಪಗಳಿಗೆ ಸೀಮಿತಗೊಳ್ಳಲು ಕಾರಣ** ಇಂಗ್ಲಿಷರು ಮತ್ತು ಫ್ರೆಂಚರ ಪೈಪೋಟಿಯನ್ನು ಎದುರಿಸಲಾರದೆ
- ಮೊದಲ ಕಾರ್ನಾಟಿಕ್ ಯುದ್ಧ **'ಏಕ್ಸ್–ಲಾ– ಚಾಪೆಲ್'** ಒಪ್ಪಂದದೊಂದಿಗೆ ಮುಕ್ತಾಯವಾಯಿತು.
- ಎರಡನೆಯ ಕಾರ್ನಾಟಿಕ್ ಯುದ್ಧವು **'ಪಾಂಡಿಚೇರಿ ಒಪ್ಪಂದ'**ದೊಂದಿಗೆ ಮುಕ್ತಾಯವಾಯಿತು.
- **ಡಚ್ಚರು ತಮ್ಮನ್ನು ಸಾಂಬಾರು ದೀಪಗಳಿಗೆ ಸೀಮಿತಗೊಳಿಸಿಕೊಳ್ಳಲು ಕಾರಣ** – ಇಂಗ್ಲೀಷರು ಮತ್ತ ಫ್ರೆಂಚರ ಪೈಪೋಟಿಯನ್ನು ಎದುರಿಸಲಾರದ್ದು.
- ಬಂಗಾಳದಲ್ಲಿ ಮುಕ್ತ ವ್ಯಾಪಾರ ಮಾಡಲು ಪರವಾನಿಗೆ ನೀಡಿದ ಮೊಘಲ್ ದೊರೆ – **ಫರೂಕ್ ಸಿಯಾರ**
- ದಸ್ತಕ್– **ಮೊಗಲ್ ದೊರೆ ಫಾರೂಕ್ ಶಿಯಾರ ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಕಂಪನಿಗೆ ನೀಡಿದ ಪರವಾನಿಗೆ.**
- ಪ್ಲಾಸಿ ಕದನ ನಡೆದಿದ್ದು – **1757ರಲ್ಲಿ, ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರ ಮಧ್ಯ.**
- ಬಂಗಾಳದಲ್ಲಿ ದ್ವಿಪ್ರಭುತ್ವವ ಜಾರಿ – **ರಾಬರ್ಟ ಕ್ಲೈವ್.**

## 2. ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

- ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು **– ಲಾರ್ಡ ವೆಲ್ಲೆಸ್ಲಿ, 1798ರಲ್ಲಿ**
- ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿದ ಮೊದಲ ರಾಜ್ಯ **– ಹೈದರಾಬಾದ್ ಸಂಸ್ಥಾನ**
- ಮೊದಲ ಆಂಗ್ಲೋ–ಮರಾಠ ಯುದ್ಧ ಮುಕ್ತಾಯಗೊಂಡ ಒಪ್ಪಂದ **–ಸಾಲ್‌ಬಾಯ್ ಒಪ್ಪಂದ**
- **ವೆಲ್ಲೆಸ್ಲಿ ರಾಜಿನಾಮೆ ನೀಡಲು ಕಾರಣ** – ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿ ಟೀಕೆಗೆ ಒಳಗಾಗಿ
- ನಿರಂತರ ಮೈತ್ರಿ ಒಪ್ಪಂದ ಇವರ ನಡುವೆ ನಡೆಯಿತು **– ಸಿಖ್ಖರು & ಬ್ರಿಟಿಷರು**
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದವರು **– ಲಾರ್ಡ ಡಾಲಹೌಸಿ, 1848ರಲ್ಲಿ**
- 2ನೇ ಆಂಗ್ಲೋ–ಮರಾಠ ಯುದ್ಧ ದಲ್ಲಿ ಪೇಶ್ವೆ ಬ್ರಿಟಿಷರೊಂದಿಗೆ ಮಾಡಿಕೊಂಡ ಒಪ್ಪಂದ – **ಬೆಸ್ಸೀನ್**
- 1839ರಲ್ಲಿ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಲು ಕಾರಣ – **ರಣಜಿತ್ ಸಿಂಗ್‌ನ ಮರಣ.**
- ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದ – **ಸಹಾಯಕ ಸೈನ್ಯ ಪದ್ಧತಿ**
- ವೆಲ್ಲೆಸ್ಲಿಯ ವಿಸ್ತರಣಾ ನೀತಿಗೆ ಅನುಕೂಲಕರವಾದ ಅಂಶ **– ಮರಾಠ ಮತ್ತು ಮೈಸೂರು ರಾಜ್ಯಗಳು ದುರ್ಬಲಗೊಂಡಿದ್ದು**

## 3. ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

- ನಾಗರೀಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವನು – **ಲಾರ್ಡ್ ಕಾರ್ನ್‌ವಾಲೀಸ**
- ಪ್ರಥಮತಃ ವ್ಯವಸ್ಥಿತವಾದ ಪೋಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದವನು – **ಲಾರ್ಡ್ ಕಾರ್ನ್‌ವಾಲೀಸ**
- 'ಸೂಪರಿಡೆಂಟೆಂಟ್ ಆಫ್ ಪೋಲೀಸ್' (SP) ಹುದ್ದೆಯನ್ನು ಸೃಷ್ಟಿಸಿದವನು – **ಲಾರ್ಡ್ ಕಾರ್ನ್‌ವಾಲೀಸ**
- ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೊಳಿಸಿದವರು **– ಲಾರ್ಡ್ ಕಾರ್ನ್‌ವಾಲೀಸ**
- ಭಾರತೀಯರಿಗೆ ಬ್ರಿಟೀಷ್ ಸೈನ್ಯದಲ್ಲಿ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ **– ಸುಬೇದಾರ್**
- ಮಹಲ್ ಪದದ ಅರ್ಥ – **ತಾಲ್ಲೂಕು**
- ರೈತವಾರಿ ಪದ್ಧತಿಯನ್ನು ಜಾರಿಗೆ ತಂದವ – **ಥಾಮಸ್ ಮನ್ರೋ**
- ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆಯ ನೀಡಿದ ಶಾಸನ – **1909ರ ಭಾರತೀಯ ಪರಿಷತ್ ಕಾಯ್ದೆ**
- 1935ರ ಭಾರತ ಸರ್ಕಾರ ಕಾಯ್ದೆಯು ಭಾರತ ಸಂವಿಧಾನದ ರಚನೆಗೆ 'ಬುನಾದಿ' ಎನ್ನಲು ಕಾರಣ – **ಭಾರತ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನು ಆಧರಿಸಿವೆ.**
- ಕಲ್ಕತ್ತಾದಲ್ಲಿ ಸುಪ್ರಿಂಕೋರ್ಟ್ ಸ್ಥಾಪನೆಗೆ ಅವಕಾಸ ಮಾಡಿಕೊಟ್ಟ ಶಾಸನ – **1773ರ ರೆಗ್ಯುಲೇಟಿಂಗ್ ಕಾಯ್ದೆ**
- ಬನಾರಸ್ ನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವನು – **ಜೊನಾಥನ್ ಡಂಕನ್**
- ಲಾರ್ಡ್ ಕಾರನ್ ವಾಲೀಸನು ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಲು ಕಾರಣ – **ನಾಗರೀಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು**
- ರೈತವಾರಿ ಪದ್ಧತಿಯನ್ನು ಬಾರ ಮಹಲ್ ಪ್ರಾಂತ್ಯದಲ್ಲಿ ಜಾರಿಗೆ ತಂದವರು – **ಅಲೆಕ್ಸಾಂಡರ್ ರೀಡ್**

## 7 ಸ್ವಾತಂತ್ರ್ಯೋತ್ತರ ಭಾರತ

- ಅಗಸ್ಟ 15–1947 ರಂದು ಗಾಂಧೀಜಿಯವರು ಇದ್ದದ್ದು – **ನೌಕಾಲಿ**
- ನೆಹರುರವರಿಗೆ ಜಾತ್ಯಾತೀತ ರಾಜ್ಯದ ನಿರ್ಮಾಣಕ್ಕೆ ಪ್ರೇರಣೆ ನೀಡಿದ್ದು – **ಕೋಮುದಳ್ಳುರಿ**
- ಬಾಂಗ್ಲಾದ ನಿರಾಶ್ರಿತರು ಬಂಗಾಳದಲ್ಲಿ ನೆಲೆಸಲು ಕಾರಣ **– ಅವರಿಗೆ ಬಂಗಾಳಿ ಭಾಷೆ ಮಾತ್ರ ತಿಳಿದಿತ್ತು**
- ಮೈಸೂರು ಸರ್ಕಾರ ಟಿಬೇಟಿಯನ್ನ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಿದ್ದು – **ಬೈಲುಕುಪ್ಪೆಯಲ್ಲಿ, 3000 ಎಕರೆ ಜಮೀನು ನೀಡಿ.**

- ಜಾತ್ಯಾತೀತ ಮತ್ತು ಸಮಾಜವಾದಿ ಪದಗಳನ್ನು ಸಂವಿಧಾನದಲ್ಲಿ ಸೇರಿಸಿದ್ದು – **42 ನೇ ತಿದ್ದುಪಡಿಯ ಮೂಲಕ**
- ಸರ್ದಾರ್ ಪಟೇಲರನ್ನು ಉಕ್ಕಿನ ಮನುಷ್ಯ ಎನ್ನಲು ಕಾರಣ – **ದೇಶೀಯ ಸಂಸ್ಥಾನಗಳ ವಿಲೀನ ಕಾರ್ಯವನ್ನು ನಿರ್ಹಿಸಿದ್ದು.**
- ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷ – **ಫಜಲ್ ಅಲಿ**
- ಫಜಲ್ ಅಲಿ ಆಯೋಗದ ರಚನೆಯ ಉದ್ದೇಶ. **– ರಾಜ್ಯ ಪುನರ್ವಿಂಗಡಣಾ ಕಾನೂನಿನ ರಚನೆ.**
- ರಾಜ್ಯ ಪುನರ್ವಿಂಗಡಣಾ ಕಾಯ್ದೆ ಜಾರಿಗೆ ಬಂದ ವರ್ಷ **–1956**

## 20ನೇ ಶತಮಾನದ ರಾಜಕೀಯ ಆಯಾಮಗಳು

- ಪ್ರಥಮ ಮಹಾಯುದ್ಧ – **1914–1918**
- ಕದನ ಬಾಂಧವ್ಯತ್ರಯ ಕೂಟ – **ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ**
- ಕದನ ಸೌಹಾರ್ದತ್ರಯ – **ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ**
- ಮೊದಲನೆ ಜಾಗತಿಕ ಯುದ್ಧಕ್ಕೆ ತತಕ್ಷಣದ ಕಾರಣ **– ಆಸ್ಟ್ರಿಯಾದ ರಾಜಕುಮಾರ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ**
- ಮೊದಲನೇ ಮಹಾಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದ **– ವರ್ಸೇಲ್ಸ್ ಒಪ್ಪಂದ**
- ರಷ್ಯಾ ಪ್ರಥಮ ಮಹಾ ಯುದ್ಧದಿಂದ ಹಿಂದೆ ಸರಿಯಲು ಕಾರಣ **– ರಷ್ಯಾದಲ್ಲಿ ನಡೆದ ಸಮಾಜವಾದಿ ಕ್ರಾಂತಿ**
- ಪ್ರಥಮ ಮಹಾ ಯುದ್ಧದ ನಂತರ ಸಂಭವನೀಯ ಯುದ್ಧಗಳನ್ನು ತಡೆಯಲು ರಚಿಸಿದ ಸಂಸ್ಥೆ **–ರಾಷ್ಟ್ರಸಂಘ(1919)**
- 19ನೇ ಶತಮಾನದಲ್ಲಿ ರಷ್ಯಾವನ್ನಾಳುತ್ತಿದ್ದ ರಾಜಮನೆತನ **–ಝಾರ್**
- ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದವ **–ಲೆನಿನ್**
- ಲೆನಿನ್ನನ ಜನಪರ ಘೋಷಣೆಗಳು **–ಶಾಂತಿ,ಆಹಾರ & ಭೂಮಿ**
- ರಷ್ಯಾವನ್ನು ಅಮೇರಿಕಾಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡಿದವರು – **ಜೋಸೆಫ್ ಸ್ಟಾಲಿನ್**
- ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದವರು **– ಜೋಸೆಫ್ ಸ್ಟಾಲಿನ್**
- ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಹಿಟ್ಲರ್ ನೇಮಿಸಿದ್ದ ವಿಶೇಷ ಮಂತ್ರಿ – **ಗೋಬೆಲ್ಸ್**
- ಹಿಟ್ಲರ್ ರಚಿಸಿದ ಕ್ರೌರ್ಯ ಪಡೆ – **ಬೂದು ಅಂಗಿ ದಳ**
- ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳು – **ಹೊಲೊಕಾಸ್ಟ್**
- ಹಿಟ್ಲರ ಘೋಷಿಸಿದ ಏಕೈಕ ರಾಜಕೀಯ ಪಕ್ಷ – **ನಾಜಿ ಪಕ್ಷ**
- ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷದ ಸ್ಥಾಪಕ – **ಮುಸೋಲೊನಿ**
- ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಮೊದಲ ಬಾರಿಗೆ ಜಾರಿ ತಂದವ **–ಲೆನಿನ್**
- ದ್ವಿತೀಯ ಮಹಾಯುದ್ಧ – **1939–1945**
- ಎರಡನೇ ಮಹಾ ಯುದ್ಧಕ್ಕೆ ತಕ್ಷಣದ ಕಾರಣ **– ಜರ್ಮನಿ ಪೋಲೆಂಡಿನ ಮೇಲೆ ದಾಳಿ ಮಾಡಿದ್ದು**
- ಎರಡನೇ ಮಹಾ ಯುದ್ಧದಲ್ಲಿ ಅಮೇರಿಕಾ ಪ್ರವೇಶಿಸಲು ಕಾರಣ **–ಜಪಾನ್ ಅಮೇರಿಕಾದ ಪರ್ಲ್ ಹಾರ್ಬರ್ ಮೇಲೆ ದಾಳಿ ಮಾಡಿದ್ದು.**

## 4. ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

- ಮಾನವ ಹಕ್ಕುಗಳನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಂಗೀಕರಿಸಿದ್ದು – **1948ರ ಡಿಸೆಂಬರ್ 10**
- ಡಿಸೆಂಬರ್ 10ರಂದು ಮಾನವ ಹಕ್ಕುಗಳ ದಿನವನ್ನು ಆಚರಿಸಲು ಕಾರಣ – **1948 ಡಿಸೆಂಬರ್ 10ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಮಾನವ ಹಕ್ಕುಗಳು ಅಂಗೀಕರಿಸಿತು.**
- ಭಾರತ ನಿಶ್ಯಸ್ತ್ರೀಕರಣವನ್ನು ಉತ್ತೇಜಿಸಲು ಕಾರಣ – **ಭಾರತ ಶಾಂತಿಪ್ರಿಯ ದೇಶ**
- **ನಿಶ್ಶಸ್ತ್ರೀಕರಣ** – ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ಪ್ರಕ್ರಿಯೆ.

## 2 ದುಡಿಮೆ

- ಶ್ರಮವಿಭಜನೆಯು ಕಡಿಮೆ ಕೌಶಲವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ. – **ಕಾರ್ಲಮಾರ್ಕ್ಸ್**
- ಪ್ಲೇಟೋ ಅವರ ಕೃತಿ **–ದಿ ರಿಪಬ್ಲಿಕ್**
- **ವಿಶೇಷ ಪರಿಣಿತಿ** – ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದಾಗಿದೆ.
- **ದುಡಿಮೆ** – ಒಬ್ಬ ವ್ಯಕ್ತಿಯು ದೈಹಿಕ ಮತ್ತು ಬೌದ್ಧಿಕ ಪರಿಶ್ರಮದಿಂದ ಆದಾಯ ಮತ್ತು ವಸ್ತುರೂಪದ ಪ್ರತಿಫಲ ಪಡೆಯುವುದಾಗಿದೆ.
- **ದುಡಿಮೆಯಲ್ಲಿ ಅಸಮಾನತೆ** – ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆ

## 3 ಸಾಮಾಜಿಕ ಚಳುವಳಿಗಳು

- **ಸಾಮೂಹಿಕ ವರ್ತನೆ** – ಸಮೂಹದಲ್ಲಿರುವಾಗ ವ್ಯಕ್ತಿ ತೋರುವ ವರ್ತನೆಯೇ ಸಾಮೂಹಿಕ ವರ್ತನೆ.
- **ಜನಮಂದೆ** – ಯಾವುದೇ ಪೂರ್ವಯೋಜನೆಯಿಲ್ಲದೇ ಒಂದು ಆಸಕಿಯ ಸುತ್ತ ನೆರೆದಿರುವ ಜನರಾಶಿ.
- **ದೊಂಬಿ ಅಥವಾ ಗಲಭೆ** – ತೀರಾ ಹಿಂಸಾತ್ಮಕ ಮತ್ತು ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆ
- **ಮಹಿಳಾ ಚಳುವಳಿ** – ಮಹಿಳೆಯ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆ
- ಮದ್ಯಪಾನ ನಿಷೇಧ ಚಳುವಳಿಯಲ್ಲಿ ಪ್ರಾಣ ಕಳೆದುಕೊಂಡ ಹೋರಾಟಗಾರ್ತಿ – **ಕುಸುಮಾ ಸೊರಬ**
- ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪಕ – **ಎಂ.ಡಿ.ನಂಜುಂಡಸ್ವಾಮಿ**
- ಕಾರ್ಮಿಕ ಸಂಘಟನೆಯ ಮುಖ್ಯ ಉದ್ದೇಶ **– ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವದು**
- ಭಾರತೀಯ ಕಾರ್ಮಿಕ ಕಾಯಿದೆಯನ್ನು ಜಾರಿ ಮಾಡಿದ ಉದ್ದೇಶ **– ಕಾರ್ಮಿಕರ ಸಾಮಾಜಿಕ ಭದ್ರತೆ ಕಾಪಾಡುವದು.**
- ಆತ್ಮಗೌರವ ಚಳುವಳಿ ಪ್ರಾರಂಭಿಸಿದವರು – **ಪೆರಿಯಾರ್**
- ಕರ್ನಾಟಕದಲ್ಲಿ ಎಪ್ಪತ್ತರ ದಶಕದಲ್ಲಿ ಸಮಾಜ ಪರಿವರ್ತನೆಗೆ ನಾಂದಿ ಹಾಡಿದವರು - **ಡಿ ದೇವರಾಜ ಅರಸು**
- ತಲೆಯ ಮೇಲೆ ಮಲ ಹೊರುವುದನ್ನು ನಿರ್ಮೂಲನೆ ಮಾಡಿದವರು – **ಶ್ರೀ ಬಸವಲಿಂಗಪ್ಪನವರು**

### ಪ್ರಮುಖ ಸಾಮಾಜಿಕ ಚಳುವಳಿಗಳು

**ಚಿಪ್ಕೋ ಚಳವಳಿ**

- **ಎಲ್ಲಿ** – ತೆಹ್ರಿ–ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮ (ಉತ್ತರ ಪ್ರದೇಶ)
- **ಯಾರು** – ರೆನ್ನಿ ಗ್ರಾಮದ ಮಹಿಳೆಯರು
- **ಉದ್ದೇಶ** – ಅರಣ್ಯ ನಾಶವಾಗುತ್ತದೆ & ಪರಿಸರ ಹಾಳಾಗುತ್ತದೆ.

**ಅಪ್ಪಿಕೋ ಚಳವಳಿ**

- **ಎಲ್ಲಿ** - ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ
- **ಯಾರು** –ಸಲ್ಯಾನಿ ಗ್ರಾಮದ ರೈತರು
- **ಉದ್ದೇಶ** – ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಗಿಡಮರ ಬೆಳೆಸುವುದು

**ನರ್ಮದಾ ಆಂದೋಲನ (ಗುಜರಾತ)**

- **ನೇತೃತ್ವ** – ಮೇಧಾ ಪಾಟ್ಕರ್
- **ಉದ್ದೇಶ** – ಅರಣ್ಯ ನಾಶ, ಪರಿಸರ ನಾಶ, ಜೀವ ಸಂಕುಲಗಳಿಗೆ ತೊಂದರೆ ತಡೆಯುವುದು.

**ಮೌನ ಕಣಿವೆ ಆಂದೋಲನ**

- **ಎಲ್ಲಿ** – ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆ
- **ಯಾರು** – ಕೇರಳ ಸಾಹಿತ್ಯ ಪರಿಷತ್ತು ಹಾಗೂ ವನ್ಯಮೃಗ ಆಸಕ್ತರು
- **ಉದ್ದೇಶ** – ಅಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶ

**ಕೈಗಾ ವಿರೋಧಿ ಚಳವಳಿ**

- **ಎಲ್ಲಿ** – ಕಾರವಾರ ಜಿಲ್ಲೆಯ ಕೈಗಾ
- **ನೇತೃತ್ವ** – ಶಿವರಾಮ ಕಾರಂತ
- **ಉದ್ದೇಶ** –ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ

**ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿ**

ಎಲ್ಲಿ – ಮಂಗಳೂರು, ಉಡುಪಿ.

**ಉದ್ದೇಶ** – ತೈಲ ಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶವಾಗುತ್ತದೆ.

## 4 ಸಾಮಾಜಿಕ ಸಮಸ್ಯೆಗಳು

- ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆ – **ಬಾಲ ಕಾರ್ಮಿಕತನ**
- ಆರ್ಥಿಕ ಸಂಪಾದನೆಗಾಗಿ ದುಡಿಮೆ ಮಾಡುವ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು – **ಬಾಲಕಾರ್ಮಿಕರು**
- ಬಾಲ ಕಾರ್ಮಿಕ, ಹದಿಹರೆಯದವರ ದುಡಿಮೆ ನಿಷೇಧ ಮತ್ತು ನಿಯಂತ್ರಣ ಕಾಯ್ದೆ **–1986**
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ ಜಾರಿಯಾದ ವರ್ಷ **–2012**
- **ಹೆಣ್ಣು ಭ್ರೂಣ ಹತ್ಯೆ** – ತಾಯಿಯ ಗರ್ಭದಲ್ಲಿ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುವುದು.
- ಮಕ್ಕಳ ಸಹಾಯವಾಣಿ ಸಂಖ್ಯೆ **–1098**
- ಕಾಣದ ಹಸಿವು – **ಪೋಷಕಾಂಶಗಳ ಅಭಾವ**
- **ಬಾಲ್ಯ ವಿವಾಹ** – ಹುಡುಗಿಗೆ 18 ಮತ್ತು ಹುಡುಗನಿಗೆ 21 ವರ್ಷದ ಒಳಗೆ ಮದುವೆ ಮಾಡುವುದು.
- ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಯಾದ ವರ್ಷ **–2006**
- ಬಾಲ್ಯ ವಿವಾಹ ತಡೆಗಟ್ಟಲು ನೀಡಿರುವ ಸಹಾಯವಾಣಿ **(ಮಕ್ಕಳ ಸಹಾಯವಾಣಿ ) –1098**
- ಮಕ್ಕಳ ದುಡಿಮೆಯನ್ನು ಕಾನೂನು ಬಾಹಿರ ಎಂದು ಘೋಷಿಸುವ ಸಂವಿಧಾನದ ವಿಧಿ **–24ನೇ ವಿಧಿ**

## 3. ಭಾರತದ ವಾಯುಗುಣ

- ಭಾರತದಲ್ಲಿ ಕಂಡುಬರುವ ವಾಯುಗುಣದ ವಿಧ **– ಉಷ್ಣವಲಯದ ಮಾನ್ಸೂನ್ ವಾಯುಗುಣ**
- ಭಾರತದ ವಾಯುಗುಣವು ಹೆಚ್ಚಾಗಿ ಇವುಗಳಿಂದ ಪ್ರಭಾವಕ್ಕೊಳಪಟ್ಟಿದೆ – **ಮಾನ್ಸೂನ್ ಮಾರುತಗಳು**
- ಚಳಿಗಾಲದಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶ ವಿರಲು ಪ್ರಮುಖ ಕಾರಣ – **ಭಾರತದ ಮೇಲೆ ಸೂರ್ಯನ ಓರೆ ಕಿರಣಗಳು ಓರೆಯಾಗಿ ಬೀಳುತ್ತವೆ.**
- ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶ ದಾಖಲಾದ ಸ್ಥಳ **– ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್**
- ಬೇಸಿಗೆ ಕಾಲ ದಲ್ಲಿ ಭಾರತದಲ್ಲಿ ಹೆಚ್ಚು ಉಷ್ಣಾಂಶ ವಿರಲು ಪ್ರಮುಖ ಕಾರಣ – **ಭಾರತದ ಮೇಲೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುತ್ತವೆ.**
- ಭಾರತದಲ್ಲೇ ಅತಿ ಹೆಚ್ಚು ಉಷ್ಣಾಂಶ ದಾಖಲಾದ ಸ್ಥಳ – **ರಾಜಸ್ಥಾನದ ಗಂಗಾನಗರ**
- **ಆಂಧಿಸ್** – ಉತ್ತರ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆ.
- **ಕಾಲಬೈಸಾಕಿ** – ಪಶ್ಚಿಮ ಬಂಗಾಳದಲ್ಲಿ ಬೀಳುವ ಪರಿಸರಣ ಮಳೆ.
- **ಮಾವಿನ ಹೂಯ್ಲು** – ಕೇರಳದಲ್ಲಿ ''''''''''''
- **ಕಾಫಿಯ ಹೂಮಳೆ**– ಕರ್ನಾಟಕ ''''''''''''
- ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳು **–ಅರಬ್ಬಿ ಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆ**
- ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಪಶ್ಚಿಮ ಭಾಗದಷ್ಟು ಮಳೆ ಪಡೆಯುವುದಿಲ್ಲ. ಕಾರಣ – **ಅವು ಮಳೆ ನೆರಳಿನ ಪ್ರದೇಶದಲ್ಲಿವೆ**
- ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುವ ಸ್ಥಳ - **ಮಾಸಿನ್‌ರಾಮ್**
- ಅತಿ ಕಡಿಮೆ ಮಳೆ ಪಡೆಯುವ ಸ್ಥಳ – **ರೂಯ್ಲಿ**
- ನೈರುತ್ಯ ಮಾನ್ಸೂನ್ ಮಾರುತಗಳು ಹಿಂದಿರುಗಲು ಕಾರಣ **ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶ ನಿರ್ಮಾಣವಾಗುವುದು.**
- ನಿರ್ಗಮನ ಮಾನ್ಸೂನ್ ಮಾರುತಗಳ ಕಾಲವನ್ನು ಈಶಾನ್ಯ ಮಾರುತಗಳ ಕಾಲ ಎಂದು ಕರೆಯಲು ಕಾರಣ **– ಇವು ಈಶಾನ್ಯದಿಂದ ನೈರುತ್ಯದ ಕಡೆಗೆ ಬೀಸುತ್ತವೆ.**

## 6 ಭಾರತದ ಜಲಸಂಪನ್ಮೂಲಗಳು

- ಭಾರತದ ಉದ್ದವಾದ ನದಿ – **ಗಂಗಾನದಿ**
- ಗಂಗಾನದಿಯ ಉಗಮ ಸ್ಥಳ – **ಗಂಗೋತ್ರಿ.**
- ಬಿಹಾರಿನ ಕಣ್ಣೀರಿನ ನದಿ – **ಕೋಸಿ**
- ಭಾರತದಲ್ಲಿ ಅತ್ಯಂತ ಎತ್ತರವಾದ ಅಣೆಕಟ್ಟು – **ಭಾಕ್ರಾನಂಗಲ್.**
- ಭಾರತದಲ್ಲಿಯೇ ಅತ್ಯಂತ ಉದ್ದವಾದ ಅಣೆಕಟ್ಟು **–ಹಿರಾಕುಡ್.**
- ಸ್ವತಂತ್ರ ಭಾರತದ ಮೊದಲ ನದಿ ಯೋಜನೆ **–ದಾಮೋದರ**

## 12 ಭಾರತದ ಜನಸಂಖ್ಯೆ

- **ಜನ ಸಂಖ್ಯೆ** – ನಿಗದಿತ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆ.
- **ಜನ ಸಾಂದ್ರತೆ** – ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ ವಾಸಿಸುವ ಸರಾಸರಿ ಜನರ ಸಂಖ್ಯೆ.
- ಅತಿ ಹೆಚ್ಚು ಜನ ಸಂಖ್ಯೆ ಹೊಂದಿದ ದೇಶ – **ಚೀನಾ**
- ಭಾರತದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿದ ರಾಜ್ಯ **–ಉತ್ತರ ಪ್ರದೇಶ**
- ಭಾರತದಲ್ಲೆ ಅತಿ ಕಡಿಮೆ ಜನಸಂಖ್ಯೆ ಹೊಂದಿದ ರಾಜ್ಯ **– ಸಿಕ್ಕಿಂ**
- 2011 ಜನ ಗಣತಿ ಪ್ರಕಾರ ಭಾರತದ ಜನ ಸಾಂದ್ರತೆ **– 382**
- ಭಾರತದಲ್ಲಿ ಹೆಚ್ಚು ಜನಸಾಂದ್ರತೆ ಹೊಂದಿದ ರಾಜ್ಯ **–ಬಿಹಾರ**
- ಭಾರತದಲ್ಲಿ ಅತಿ ಕಡಿಮೆ ಜನ ಸಾಂದ್ರತೆ ಹೊಂದಿದ ರಾಜ್ಯ **–ಅರುಣಾಚಲ ಪ್ರದೇಶ**
- 1901 ರಿಂದ 1921 ರವರೆಗೆ ಜನಸಂಖ್ಯಾ ಬೆಳವಣಿಗೆ ನಿಧಾನಗತಿಯಲ್ಲಿರಲು ಕಾರಣ – **ಅಧಿಕ ಮರಣದರ**

## 1. ಅಭಿವೃದ್ಧಿ

- **ನೈಜ ಅಭಿವೃದ್ಧಿ** – ಜನರ ಕೊಳ್ಳುವ ಶಕ್ತಿಯ ಹೆಚ್ಚಳ.
- **ನೈಜ ರಾಷ್ಟ್ರೀಯ ವರಮಾನ** –ರಾಷ್ಟ್ರೀಯ ವರಮಾನವು ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲ ಸರಕು ಸೇವೆಗಳ ಒಟ್ಟು ಮೌಲ್ಯ

➢ **ನಿರಂತರ ಅಭಿವೃದ್ಧಿ** – ನೈಸರ್ಗಿಕ ಸಂಪನ್ಮೂಲಗಳು ಹಾಗೂ ಪರಿಸರವನ್ನು ಮುಂದಿನ ಪೀಳಿಗೆಯವರಿಗೂ ಸಂರಕ್ಷಿಸಿ ಪ್ರಯೋಜನ ಪಡೆಯುವುದನ್ನು ನಿರಂತರ ಅಭಿವೃದ್ಧಿ ಎನ್ನುವರು.

➢ **ಮಾನವ ಅಭಿವೃದ್ಧಿ ಸೂಚ್ಯಂಕ** – ತಲಾ ವರಮಾನ, ಶಿಕ್ಷಣ, ಹಾಗೂ ನಿರೀಕ್ಷಿತ ಜೀವಿತಾವಧಿ ಸೂಚಿಗಳ ಸರಾಸರಿ

➢ **ನಿರೀಕ್ಷಿತ ಜೀವಿತಾವಧಿ** – ಒಂದು ದೇಶದಲ್ಲಿರುವ ಜನರು ಜೀವಿಸುವ ಸರಾಸರಿ ಆಯಸ್ಸು.

➢ **ಮಾನವ ಅಭಿವೃದ್ಧಿ ಸೂಚಿ** – ನಿರೀಕ್ಷಿತ ಜೀವಿತಾವಧಿ, ಸಾಕ್ಷರತೆಯ ಪ್ರಮಾಣ ಮತ್ತು ತಲವರಮಾನಗಳ ಸರಾಸರಿ.

➢ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರಚಿಸಿದವರು **–ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ**

➢ ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ಯಾವುದು – **ವಿಶ್ವ ಬ್ಯಾಂಕು**

➢ ತಲಾ ವರಮಾನವನ್ನು ಕಂಡು ಹಿಡಿಯುವ ವಿಧಾನ **– ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿ**

➢ ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿರಲು ಕಾರಣ **– ಹೆಣ್ಣು ಭ್ರೂಣ ಹತ್ಯೆ**

➢ ಸ್ವಸಹಾಯ ಸಮೂಹಗಳ ಸ್ಥಾಪನೆಯ ಉದ್ದೇಶ – **ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಮಹಿಳೆಯರ ಸಬಲೀಕರಣ ಸಾಧಿಸುವುದು.**

➢ **ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ. ಏಕೆ?**
ರಾಷ್ಟ್ರೀಯ ವರಮಾನದ ಜೊತೆಗೆ ಜನಸಂಖ್ಯೆಯ ಹೆಚ್ಚಳವಾದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.

➢ **ತಲಾ ವರಮಾನದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಅಷ್ಟೊಂದು ಸಮಂಜಸವಲ್ಲ. ಏಕೆ?**
ತಲಾ ವರಮಾನವು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ.

## 4. ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

➢ **ಕೋಶಿಯ ನೀತಿ** – ಸರ್ಕಾರವು ತನ್ನ ವರಮಾನ, ವೆಚ್ಚ & ಸಾಲಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಅನುಸರಿಸುವ ನೀತಿ

➢ **ಸಾರ್ವಜನಿಕ ಹಣಕಾಸು** –ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆ

➢ **ಮುಂಗಡಪತ್ರ** – ಸರ್ಕಾರದ ಒಂದು ವರ್ಷದ ವರಮಾನ & ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪತ್ರಿಕೆ

➢ **ಉಳಿತಾಯ ಆಯವ್ಯಯ** – ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದು ಉಳಿತಾಯ ಆಯವ್ಯಯ

➢ **ಕೊರತೆಯ ಆಯವ್ಯಯ** – ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಕಡಿಮೆಯಾದರೆ ಅದು ಕೊರತೆಯ ಆಯವ್ಯಯ

➢ **ಕಂದಾಯ ವರಮಾನ** – ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೇರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ವರಮಾನ

➢ **ತೆರಿಗೆ** – ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ

➢ **ಸಾಲೇತರ ಬಂಡವಾಳ** – ಹೂಡಿಕೆ ಹಿಂತೆಗೆತ ಮತ್ತು ಸಾಲ ಮರುಪಾವತಿಯಿಂದ ಸಂಗ್ರವಾಗುವ ಹಣ

➢ **ವಿತ್ತೀಯ ಕೊರತೆ** – ಕಂದಾಯ ವರಮಾನ ಮತ್ತು ಸಾಲೇತರ ಬಂಡವಾಳ ವರಮಾನಕ್ಕಿಂತ ಸರ್ಕಾರದ ಒಟ್ಟು ವೆಚ್ಚದ ಹೆಚ್ಚಳ

➢ **ವಿತ್ತೀಯ ಕೊರತೆ ಸೂತ್ರ** = (ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ)– ಒಟ್ಟು ವೆಚ್ಚ.

➢ ಲೋಕಸಭೆಯಲ್ಲಿ ಆಯವ್ಯಯವನ್ನು ಮಂಡಿಸುವವರು **- ಹಣಕಾಸು ಸಚಿವರು**

➢ ಪತ್ಯಕ್ಷ ತೆರಿಗೆಗೆ ಉದಾಹರಣೆ **–ಸ್ಟಾಂಪ್ ತೆರಿಗೆ, ವರಮಾನ ತೆರಿಗೆ**

➢ ಪರೋಕ್ಷ ತೆರಿಗೆಗೆ ಉದಾಹರಣೆ **–ಅಬಕಾರ ಸುಂಕ, ಸೇವಾ ತೆರಿಗೆ, ಮೌಲ್ಯವರ್ಧಿತ ತೆರಿಗೆ**

➢ ಜಿ.ಎಸ್.ಟಿ.ಜಾರಿಗೆ ಬಂದ ದಿನಾಂಕ – **ಜುಲೈ 1, 2017**

➢ ಜಿ.ಎಸ್.ಟಿ. ವಿಸ್ತಾರ ರೂಪ – **ಸರಕು ಮತ್ತು ಸೇವಾ ತೆರಿಗೆ**

## 4. ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ

➢ **ಟೆಲಿಶಾಪಿಂಗ್** – ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಗ್ರಾಹಕರು ಮನೆಯಲ್ಲಿಯೇ ಕುಳಿತು ವಸ್ತುಗಳನ್ನು ಕೊಳ್ಳುವುದು.

➢ ಮಾರುಕಟ್ಟೆಯ ರಾಜ **–ಗ್ರಾಹಕ**

➢ ವಿಶ್ವಗ್ರಾಹಕರ ಹಕ್ಕುಗಳ ದಿನ **–ಮಾರ್ಚ 15**

➢ ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರು **–ಕೇಂದ್ರ ಸರ್ಕಾರದ ಗ್ರಾಹಕರ ಕಲ್ಯಾಣ ಇಲಾಖೆಯ ಮಂತ್ರಿ**

➢ ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರು **– ರಾಜ್ಯ ಸರ್ಕಾರದ ಗ್ರಾಹಕ ಸಂಬಂಧಿ ಇಲಾಖೆಯ ಮಂತ್ರಿ**

➢ ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಳಿ ಅಧ್ಯಕ್ಷರು **–ಜಿಲ್ಲಾಧಿಕಾರಿ**

➢ ಗ್ರಾಹಕ ರಕ್ಷಣಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಕಟ್ಟಬೇಕಾದ ಶುಲ್ಕ **–ಯಾವುದೇ ಹಣ ಪಾವತಿಸುವಂತಿಲ್ಲ.**

➢ **ಗ್ರಾಹಕ ಸಂರಕ್ಷಣಾ ಮಂಡಳಿಯ ಪ್ರಮುಖ ಕಾರ್ಯ** –ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ಖಾತರಿಪಡಿಸುವುದು

➢ **ಗ್ರಾಹಕ** –ವಸ್ತು ಹಾಗೂ ಸೇವೆಗಳನ್ನು ಹಣಕೊಟ್ಟು ಬಳಸುವವರು.

➢ ಮಾರುಕಟ್ಟೆಯ ರಾಜ – **ಗ್ರಾಹಕ**

➢ **ಗ್ರಾಹಕ ರಕ್ಷಣೆ** – ಗ್ರಾಹಕರನ್ನು ಉತ್ಪಾದಕ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳು

➢ **ಗ್ರಾಹಕರ ಹಕ್ಕುಗಳು** – ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ನೀಡಲಾಗಿರುವ ಹಕ್ಕುಗಳು ಹಾಗೂ ಭರವಸೆಗಳನ್ನು ಗ್ರಾಹಕ ಹಕ್ಕುಗಳೆನ್ನುವರು.

➢ **ಗ್ರಾಹಕ ಆಂದೋಲನದ ಮೂಲ ಆಶಯ** –ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು ಅಥವಾ ಸೇವೆ ದೊರೆಯುವಂತೆ ಮಾಡುವುದು.

➢ ಮಾರ್ಚ್ 15 ಒಂದು ಮಹತ್ವದ ದಿನವಾಗಿದೆ. – **ಮಾರ್ಚ್ 15, 1962ರಂದು ಅಮೇರಿಕದ ಅಧ್ಯಕ್ಷರಾದ ಜಾನ್ ಎಫ್ ಕೆನಡಿ ಅಲ್ಲಿನ ನಾಗರಿಕರಿಗೆ ಸುರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು.**

➢ ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶ – **ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು ಅಥವಾ ಸೇವೆ ದೊರೆಯುವಂತೆ ಮಾಡುವುದು.**

*****************************************************

# 2 ಅಂಕದ ಪ್ರಶ್ನೆಗಳು

## 1. ಭಾರತಕ್ಕೆ ಯುರೋಪಿಯನ್ನರ ಆಗಮನ

1. **ಭಾರತದ ಯಾವ ವಸ್ತುಗಳಿಗೆ ಯೂರೋಪಿನಲ್ಲಿ ಬೇಡಿಕೆಯಿತ್ತು?**

➢ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದವು.

**2. ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?**
- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು.
- ಅಲ್ಲಿಂದ ಇಟಲಿಯ ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು.

**3. ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡಿದ್ದರಿಂದ ಆದ ಪರಿಣಾಮಗಳಾವುವು?**
- ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು.
- ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು.
- ಪರಿಣಾಮವಾಗಿ ವರ್ತಕರಿಗೆ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.
- ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಪ್ರೇರಣೆಯಾಯಿತು.

**4. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.**
- ಯುರೋಪಿನ ರಾಜರು ನಾವಿಕರಿಗೆ ನೀಡಿದ ಪ್ರೋತ್ಸಾಹ
- ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ ಸಿಡಿಮದ್ದು ಮೊದಲಾದವುಗಳು

**5. ಎರಡನೇ ಕಾರ್ನಾಟಿಕ್ ಯುದ್ಧದ ಪರಿಣಾಮಗಳನ್ನು ತಿಳಿಸಿ.**
- 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.
- ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು.
- ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು ತಂದುಕೊಟ್ಟಿತು.
- ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

**6. ಮೂರನೇ ಕಾರ್ನಾಟಿಕ್ ಯುದ್ಧದ ಫಲಿತಾಂಶಗಳೇನು?**
- ಸರ್ ಐರ್ಕೂಟ ಫ್ರೆಂಚರನ್ನು ಸೋಲಿಸಿ ಬುಸ್ಸಿಯನ್ನು ಸೆರೆಹಿಡಿದನು .
- ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು .
- ದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು 'ಪ್ಯಾರಿಸ್ ಒಪ್ಪಂದ' .ಹಿಂತಿರುಗಿಸಲಾಯಿತು
- ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು.
- ಯುರೋಪಿಯನ್ ಪ್ರತಿಸ್ಪರ್ಧಿಗಳನ್ನು ದಮನಮಾಡಿ ಬ್ರಿಟೀಷರು ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

**7. ಮೂರನೆಯ ಕಾರ್ನಾಟಿಕ್ ಯುದ್ಧದ ಪರಿಣಾಮಗಳಾವುವು?**
- ಸರ್ ಐರ್ಕೂಟ ಫ್ರೆಂಚರನ್ನು ಸೋಲಿಸಿ ಬುಸ್ಸಿಯನ್ನು ಸೆರೆಹಿಡಿದನು.
- ಐರ್ಕೂಟನ ಪಾಂಡಿಚೇರಿಗೆ ಮುತ್ತಿಗೆ ಹಾಕಿದಾಗ ಲ್ಯಾಲಿಯು ಶರಣಾದನು.
- ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು.
- 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು.

**8. ಪ್ಲಾಸಿ ಕದನದ ಪರಿಣಾಮಗಳನ್ನು ತಿಳಿಸಿ.**
- ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
- ಮೀರ್ ಜಾಫರ್ ಬಂಗಾಳದ ನವಾಬನಾದನು.
- ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
- ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

**9. ಪ್ಲಾಸಿ ಕದನಕ್ಕೆ ಕಾರಣಗಳನ್ನು ತಿಳಿಸಿ.**
- ಬ್ರಿಟಿಷ್ ನೌಕರರಿಂದ ದಸ್ತಕ್‌ಗಳ ದುರುಪಯೋಗ
- ಅನುಮತಿ ಇಲ್ಲದೆ ಕೋಟೆಯ ದುರಸ್ತಿ
- ಕಪ್ಪುಕೋಣೆ ದುರಂತ

**10. ಬಕ್ಸಾರ್ ಕದನದ ಕಾರಣಗಳನ್ನು ತಿಳಿಸಿ.**
- ಮೀರ್ ಖಾಸಿಂ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು.
- ಪರಿಣಾಮ, ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಹೊಡೆತ ಬಿದ್ದಿತು.
- ಅವರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು.
- ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು.

**11. ಬಕ್ಸಾರ್ ಕದನದ ಪರಿಣಾಮಗಳನ್ನು ತಿಳಿಸಿ.**
- ಎರಡನೇ ಷಾ ಆಲಂ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ನೀಡಿದನು.
- ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.
- ಔದ್‌ನ ನವಾಬ ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
- ಮೀರ್ ಜಾಫರನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು.

**12. 'ದ್ವಿ ಪ್ರಭುತ್ವ' ಪದ್ಧತಿಯನ್ನು ವಿವರಿಸಿ.**
- ರಾಬರ್ಟ್ ಕ್ಲೈವನು 'ದ್ವಿ ಪ್ರಭುತ್ವ' ಪದ್ಧತಿಯನ್ನು ಬಂಗಾಳದಲ್ಲಿ ಜಾರಿಗೆ ತಂದನು.
- ಈ ಪದ್ಧತಿಯಂತೆ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು
- ಬಂಗಾಳದ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

## 2. ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**1. ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಣೆಗಾಗಿ ಅನುಸರಿಸಿದ ಮಾರ್ಗಗಳಾವುವು?**
- ಯುದ್ಧಗಳು
- ಸಹಾಯಕ ಸೈನ್ಯ ಪದ್ಧತಿ
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

**2. ಮೊದಲನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.**
- ಮೊಗಲ್ ಚಕ್ರವರ್ತಿ ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು.
- ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವ ಉಂಟಾಯಿತು.
- ಪೇಶ್ವೆಯ ಸ್ಥಾನಕ್ಕೆ ಏರ್ಪಟ್ಟ ಕಲಹ.

**3. ಮೂರನೇ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣಗಳಾವುವು?**
- ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನಗಳು.
- ಪೇಶ್ವೆ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸಿದ್ದು
- 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿದ್ದು.

**4. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು? ವಿವರಿಸಿ. / ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಭಾರತೀಯ ರಾಜರು ಬ್ರಿಟಿಷ್ ಇಂಡಿಯಾ ಕಂಪನಿಯ ಕೈಗೊಂಬೆ ಆಗಿದ್ದರು. ಸಮರ್ಥಿಸಿ**

- ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಆ ರಾಜ್ಯವೇ ಭರಿಸಬೇಕು.
- ರಾಜ್ಯದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
- ಯಾವುದೇ ರಾಜ್ಯಗಳೊಂದಿಗೆ ಯುದ್ಧ, ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**5. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ರಾಜ್ಯಗಳಾವುವು?**

- ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.
- ಮೈಸೂರು, ತಂಜಾವೂರು, ಮರಾಠ, ಆರ್ಕಾಟ್ ಮೊದಲಾದವು

**6. ಮೂರನೇ ಆಂಗ್ಲೋ-ಮರಾಠ ಯುದ್ಧದ ಪರಿಣಾಮಗಳಾವುವು?**

- ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಲಾಯಿತು
- ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು.
- ಶಿವಾಜಿಯ ವಂಶಸ್ಥ ಪ್ರತಾಪಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿದರು.

**7. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಹೇಗೆ ಸಾಧಿಸಿದನು?**
<u>ಅಥವಾ</u> **ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?**

- 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನ ದತ್ತು ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'.
- ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.
- ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದವು ಬ್ರಿಟೀಷರ ವಶವಾದವು.

## 9. ಸ್ವಾತಂತ್ರ್ಯೋತ್ತರ ಭಾರತ

**1. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**

- ಮತೀಯ ಗಲಭೆಗಳು
- ನಿರಾಶ್ರಿತರ ಸಮಸ್ಯೆ
- ಸಂವಿಧಾನವನ್ನು ರೂಪಿಸಿಕೊಳ್ಳುವ ಸವಾಲು
- ದೇಶಿ ಸಂಸ್ಥಾನಗಳ ವಿಲೀನೀಕರಣ
- ಹೊಸ ಸರ್ಕಾರ ರಚನೆ

**2. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

- ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳಲ್ಲ ನಿರಾಶ್ರಿತರಿಗೆ ನೆಲೆ ಕಲ್ಪಿಸಲಾಗಿದೆ.
- ನಿರಾಶ್ರಿತರಿಗೆ ಅವಶ್ಯಕವಾದ ಅನುಕೂಲಗಳನ್ನು ಕಲ್ಪಿಸಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಸಹಾಯಮಾಡಿದವು.
- ಬಾಂಗ್ಲಾದಿಂದ ಬಂದ ನಿರಾಶ್ರಿತರಿಗೆ ಬಂಗಾಳದಲ್ಲಿ ನೆಲೆ ಕಲ್ಪಿಸಲಾಗಿದೆ.
- ಬೈಲಕುಪ್ಪೆಯಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ 3000 ಎಕರೆ ಜಮೀನನ್ನು ನೀಡಲಾಗಿದೆ.

**3. ವಲ್ಲಭಭಾಯಿ ಪಟೇಲರು 'ಉಕ್ಕಿನ ಮನುಷ್ಯ' ಎಂದು ಖ್ಯಾತರಾಗಿದ್ದಾರೆ. ಸಮರ್ಥಿಸಿ.**

- ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು.
- ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ವಿಲೀನಗೊಳಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು.
- ಆದ್ದರಿಂದ ವಲ್ಲಭಭಾಯಿ ಪಟೇಲರು 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದಾರೆ.

**4. ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.**

- ಸ್ವಾತಂತ್ರ್ಯದ ನಂತರದಲ್ಲಿ ಪಾಂಡಿಚೇರಿ ಫ್ರೆಂಚ್‌ರ ಹಿಡಿತದಲ್ಲಿತ್ತು
- ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ಹೋರಾಟದ ಫಲವಾಗಿ ಭಾರತಕ್ಕೆ ಸೇರ್ಪಡೆಗೊಂಡವು.

**5. ಹೈದರಾಬಾದ್ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಹೇಗೆ ಸೇರಿಸಲಾಯಿತು?**

- ಹೈದರಾಬಾದ್ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು.
- ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು.
- ನಿಜಾಮನ ಕ್ರೂರ ಪಡೆಯಾದ ರಜಾಕರ ಬಗೆಗೆ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು.
- ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ಹೈದರಾಬಾದನ್ನು ಭಾರತದೊಂದಿಗೆ ವಿಲೀನಗೊಳಿಸಲಾಯಿತು.

**6. ಜುನಾಗಡ್ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಹೇಗೆ ವಿಲೀನಗೊಳಿಸಲಾಯಿತು?**

- ನವಾಬನು ಜುನಾಗಢವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದನು.
- ಆಗ ಪ್ರಜೆಗಳು ಆತನ ವಿರುದ್ಧ ದಂಗೆ ಎದ್ದರು.
- ಇದನ್ನು ಎದುರಿಸಲಾಗದೆ ನವಾಬನು ಪಲಾಯನ ಮಾಡಿದನು.
- ದಿವಾನರ ಮನವಿ ಆಧರಿಸಿ 1949ರಲ್ಲಿ ಜುನಾಗಢ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

**7. ಗೋವಾವನ್ನು ಪೋರ್ಚುಗೀಸರಿಂದ ಹೇಗೆ.ಮುಕ್ತಗೊಳಿಸಲಾಯಿತು?**

- ಸ್ವಾತಂತ್ರ್ಯದ ನಂತರವೂ ಗೋವಾ ಪೋರ್ಚುಗೀಸರ ವಸಾಹತುವಾಗಿ ಮುಂದುವರಿದಿತ್ತು
- ಗೋವಾವನ್ನು, ಭಾರತಕ್ಕೆ ಸೇರಿಸಬೇಕೆಂದು ನಿರಂತರವಾದ ಚಳುವಳಿ ನಡೆಯಿತು.
- ಪೋರ್ಚುಗೀಸರು ಸೈನ್ಯವನ್ನು ತರಿಸಿ ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸಿದರು.
- 1961ರಲ್ಲಿ ಭಾರತದ ಸೈನ್ಯ ಮಧ್ಯೆ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.

**8. ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.**

- ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು.
- 1953ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು.
- ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿದ್ದರು.
- ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು.
- 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು.
- ಈ ಕಾನೂನಿನ ಪ್ರಕಾರ ಭಾಷಾವಾರು ಪ್ರಾಂತ್ಯಗಳು.ರಚನೆಯಾದವು

**9. ನೆಹರೂರಂಥ ನಾಯಕರು ಭಾರತವನ್ನು ಇರುವುದು ಜಾತ್ಯತೀತ ರಾಷ್ಟ್ರವನ್ನಾಗಿ ರೂಪಿಸುವ ಬಗ್ಗೆ ಏಕೆ ಯೋಚಿಸಿದರು?**
- 1947ರಲ್ಲಿ ಭಾರತ ಸ್ವಾತಂತ್ರ್ಯವಾದಾಗ ಮತೀಯ ಗಲಭೆಗಳು ನಡೆದವು.
- ಲಕ್ಷಾಂತರ ಜನ ಹಿಂದೂಗಳು ಮತ್ತು ಮುಸ್ಲಿಮರು ಮರಣ ಹೊಂದಿದರು .
- ಕೆಲವೇ ತಿಂಗಳುಗಳಲ್ಲಿ ಐದು ಲಕ್ಷ ಜನರು ಹತ್ಯೆಗೀಡಾದರು.
- ಆಸ್ತಿಪಾಸ್ತಿಗಳು ನಷ್ಟಕ್ಕೆ ಈಡಾದವು.
- ಕೋಮುದಳ್ಳುರಿಯ ಭಯಾನಕ ದೃಶ್ಯಗಳಿಂದ ಭಾರತವನ್ನು ಜಾತ್ಯತೀತ ರಾಷ್ಟ್ರವನ್ನಾಗಿ ರೂಪಿಸುವ ಬಗ್ಗೆ ಯೋಚಿಸಿದರು.

## 20ನೆಯ ಶತಮಾನದ ರಾಜಕೀಯ ಆಯಾಮಗಳು

**1. ಚೀನಾ ಕ್ರಾಂತಿಯ ಪರಿಣಾಮಗಳಾವುವು?**
- ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಿದರು.
- ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ ಸೌಲಭ್ಯಗಳನ್ನು ನೀಡಿದರು.
- ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ತುಂಬಾ ಮಹತ್ವ ನೀಡಿದರು.
- 'ಮುನ್ನಡೆಯ ಮಹಾಜಿಗಿತ' ಯೋಜನೆಯನ್ನು ಜಾರಿಗೆ ತಂದರು
- ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು.

**2. ರಷ್ಯಾದ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ.**
- ಲೆನಿನ್ ಸರಳವಾದ 'ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಗಳನ್ನು ನೀಡಿದರು.
- ಇದಕ್ಕೆ ಕಾರ್ಮಿಕರು ಮತ್ತು ಗ್ರಾಮೀಣ ಬಡವರು ವ್ಯಾಪಕವಾಗಿ ಸ್ಪಂದಿಸಿದರು.
- ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದರು.
- ಎಲ್ಲಾ ರಷ್ಯನ್ನರಿಗೂ ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ನೀಡುವ ನೀತಿಗಳನ್ನು ಜಾರಿ ಮಾಡಿದರು.

**3. ಶೀತಲ ಯುದ್ಧವು ಉಸಿರುಗಟ್ಟಿಸುವಂತಹ ಸ್ಥಿತಿಯನ್ನು ಉಂಟು ಮಾಡಿತು .ಸ್ಪಷ್ಟೀಕರಿಸಿ .**
- ಇದರಿಂದ ಬೃಹತ್ ಯುದ್ಧಾಸ್ತ್ರಗಳ ಕೈಗಾರಿಕೆಗಳು ಬೆಳೆದವು .
- ಅಣ್ವಸ್ತ್ರ ಪೈಪೋಟಿ ಹೆಚ್ಚಿತು .
- ವಿವಿಧ ದೇಶಗಳಲ್ಲಿ ಸೈನಿಕ ನೆಲೆಗಳ ಸ್ಥಾಪನೆಯಾದವು.
- ವ್ಯೋಮ ಸಮರ ಉಂಟಾಯಿತು.
- ವಿವಿಧ ರೂಪಗಳಲ್ಲಿ ಅಗೋಚರ ಯುದ್ಧದ ಆತಂಕಕ್ಕೆ ಒಳಗಾಯಿತು.

**4. ರಷ್ಯಾವನ್ನು ಅಮೆರಿಕಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಜೋಸೆಫ್ ಸ್ಟಾಲಿನ್ನ ಪಾತ್ರವೇನು?**
- ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದನು.
- ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವಸಹಿತ ಉಪಗ್ರಹವನ್ನು ಉಡಾವಣೆ ಮಾಡಿತು.
- ರಷ್ಯಾ ಸಮಾಜವಾದಿ ದೇಶಗಳ ಬಣದ ನಾಯಕತ್ವ ವಹಿಸಿತು.
- ರಷ್ಯಾವನ್ನು ಬಲಿಷ್ಠ ದೇಶವನ್ನಾಗಿಸಿದನು.

## 2. ಭಾರತದ ವಿದೇಶಾಂಗ ನೀತಿ (2/3 ಅಂಕ)

**1. ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ?**
- ಪ್ರತಿಯೊಂದು ರಾಷ್ಟ್ರಕ್ಕೆ ತನ್ನದೇ ಆದ ವಿದೇಶಾಂಗ ನೀತಿ ಅವಶ್ಯಕ.
- ಯಾವುದೇ ಒಂದು ದೇಶ ಒಂಟಿಯಾಗಿರಲು ಸಾಧ್ಯವಿಲ್ಲ.
- ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳಲು ಸಹಾಯಕ
- ರಾಷ್ಟ್ರದ ಆರ್ಥಿಕ ಸಂವರ್ಧನೆಗೆ ಸಹಾಯಕ

**2. ವರ್ಣಭೇದ ನೀತಿಗೆ ಸಂಬಂಧಿಸಿದಂತೆ ಭಾರತದ ನಿಲುವೇನು?**
- ವರ್ಣಭೇದ ನೀತಿಯು ಅಮಾನವೀಯವಾದುದು.
- ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ.
- ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ.
- ಜಗತ್ತಿನಲ್ಲಿ ಯಾವ ರಾಷ್ಟ್ರವೂ ವರ್ಣಭೇದ ನೀತಿ ಅನುಸರಿಸಬಾರದು ಎಂಬ ನೀತಿಯನ್ನು ಹೊಂದಿದೆ.

**3. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?**
- ಭಾರತ ವಸಾಹತುಶಾಹಿತ್ವವನ್ನು ವಿರೋಧಿಸಿ ಸ್ವತಂತ್ರಗೊಂಡಿದೆ.
- ಭಾರತ ಸ್ವಾಭಾವಿಕವಾಗಿ ಅದನ್ನು ವಿರೋಧಿಸುತ್ತದೆ.
- ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ಪ್ರತಿಪಾದಿಸಿತು.

**4. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳಾವುವು?**
- ರಾಷ್ಟ್ರದ ಭದ್ರತೆ.
- ರಾಷ್ಟ್ರದ ಆರ್ಥಿಕ ಸಂವರ್ಧನೆ.
- ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು ಅಥವಾ ಹತ್ತಿಕ್ಕುವುದು.
- ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

**5. ಭಾರತೀಯ ವಿದೇಶಾಂಗ ನೀತಿಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು? / ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳಳಾವುವು?**
- ರಾಷ್ಟ್ರೀಯ ಹಿತಾಸಕ್ತಿಗಳು. * ಭೌಗೋಳಿಕ ಅಂಶಗಳು.
- ರಾಜಕೀಯ ಪರಿಸ್ಥಿತಿ. * ಆರ್ಥಿಕ ವ್ಯವಸ್ಥೆ.
- ಅಂತರರಾಷ್ಟ್ರೀಯ ಪರಿಸರ. * ರಕ್ಷಣಾ ಸಾಮರ್ಥ್ಯ.

**6. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು?**
- ಪಂಚಶೀಲ ತತ್ವಗಳು.
- ಅಲಿಪ್ತ ನೀತಿ.
- ವಸಾಹತುಶಾಹಿತ್ವಕ್ಕೆ ವಿರೋಧ.
- ವರ್ಣಭೇದ ನೀತಿಗೆ ವಿರೋಧ.
- ನಿಶ್ಯಸ್ತ್ರೀಕರಣ.

**7. ಪಂಚಶೀಲ ತತ್ವಗಳಾವುವು?**
- ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
- ಪರಸ್ಪರ ಆಕ್ರಮಣ ಮಾಡದಿರುವುದು.
- ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.
- ಪರಸ್ಪರ ಸಹಕಾರ ಮತ್ತು ಸಮಾನತೆ.
- ಶಾಂತಿಯುತ ಸಹಬಾಳ್ವೆ.

**8. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ?**
- ಮೂರನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ಹಲವು ರಾಷ್ಟ್ರಗಳಲ್ಲಿ ಉಂಟಾಗಿದೆ.
- ಶಸ್ತ್ರಾಸ್ತ್ರಗಳ ಪೈಪೋಟಿಗೆ ಒಳಗಾದ ರಾಷ್ಟ್ರಗಳು ಅಣ್ವಸ್ತ್ರಗಳನ್ನು ಉಪಯೋಗಿಸುವ ಸಂಭವವಿರುತ್ತದೆ.
- ಭಾರತ ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ.
- ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ.

## 3. ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ
### (ಎರಡು/ಮೂರು/ನಾಲ್ಕು ಅಂಕ)

**1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?**
- ಯಾವುದೇ ಒಂದು ರಾಷ್ಟ್ರ ಒಂಟಿಯಾಗಿರಲು ಸಾಧ್ಯವಿಲ್ಲ
- ಒಂದು ರಾಷ್ಟ್ರವು ಬೇರೆ ರಾಷ್ಟ್ರಗಳ ಜೊತೆಗೆ ವ್ಯವಹರಿಸದೆ, ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ.
- ಆದ್ದರಿಂದ ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ.

**2. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧ್ಯವ್ಯ ಹದಗೆಡಲು ಕಾರಣಗಳೇನು?**
- ಟಿಬೆಟ್ ವಿವಾದ.
- 1962ರ ಭಾರತ – ಚೀನಾ ಯುದ್ಧ.
- ಗಡಿ ಸಮಸ್ಯೆ.
- ಚೀನಾ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿರುವುದು.

**3. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಉತ್ತಮ ಭಾಂದವ್ಯ ಹೊಂದಲು ನಡೆದ ಪ್ರಯತ್ನಗಳಾವುವು?**
- ತಾಷ್ಕೆಂಟ್ ಒಪ್ಪಂದ.
- ಸಿಮ್ಲಾ ಒಪ್ಪಂದ.
- ಲಾಹೋರ್ ಬಸ್ ಯಾತ್ರೆ.
- ಆಗ್ರಾ ಶೃಂಗಸಭೆ.

**4. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**
- 1961ರಲ್ಲಿ ಗೋವಾ ವಿಮೋಚನೆಯ ಸಂದರ್ಭದಲ್ಲಿ ಭಾರತಕ್ಕೆ ಬೆಂಬಲ ನೀಡಿತ್ತು.
- 1962ರಲ್ಲಿನ ಚೈನಾ ದಾಳಿಯನ್ನು ಸೋವಿಯತ್ ರಷ್ಯಾ ಖಂಡಿಸಿತ್ತು.
- 1966ರ ಭಾರತ–ಪಾಕಿಸ್ತಾನಗಳ ಮಧ್ಯೆ ತಾಷ್ಕೆಂಟ್ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.
- 1971 ರಲ್ಲಿ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು.
- ಭಾರತದ ಭಿಲಾಯ್ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ರಷ್ಯಾ ಸಹಕರಿಸಿತ್ತು.
- ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**5. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?**
- ಜಮ್ಮು–ಕಾಶ್ಮೀರ
- ಭಯೋತ್ಪಾದನೆ
- ನದಿ ನೀರಿನ ಹಂಚಿಕೆ ಸಮಸ್ಯೆ
- ಮೂರು ಯುದ್ಧಗಳು
- ದ್ವಿಪಕ್ಷೀಯ ಒಪ್ಪಂದಗಳು ನಿರೀಕ್ಷಿತ ಯಶಸ್ಸನ್ನು ಸಾಧಿಸದಿರುವುದು.

**6. ಭಾರತ ಮತ್ತು ಅಮೇರಿಕಾ ದೇಶಗಳ ಪರಸ್ಪರ ಸೌಹಾರ್ದತೆ ಹೇಗಿದೆ ಎಂಬುದನ್ನು ವಿವರಿಸಿ.**
- ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಎರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ.
- ವಿದೇಶೀ ವ್ಯಾಪಾರ ಉತ್ತಮ ಬಾಂಧವ್ಯ ಹೊಂದಿದೆ
- ವಿಜ್ಞಾನ ಮತ್ತು ತಾಂತ್ರಿಕತೆ ಉತ್ತಮ ಬಾಂಧವ್ಯ ಹೊಂದಿದೆ
- ಬಾಹ್ಯಾಕಾಶ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ ಹೊಂದಿದೆ.
- ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ

**7. ಭಾರತ ಮತ್ತು ಅಮೇರಿಕಾಗಳು ಯಾವ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ ಹೊಂದಿವೆ?**
- ವಿದೇಶೀ ವ್ಯಾಪಾರ
- ವಿಜ್ಞಾನ ಮತ್ತು ತಾಂತ್ರಿಕತೆ
- ಬಾಹ್ಯಾಕಾಶ
- ಶಿಕ್ಷಣ
- ಭಯೋತ್ಪಾದನೆಯನ್ನು ಹತ್ತಿಕ್ಕುವುದು

**8. ಭಾರತ ಮತ್ತು ಚೀನಾಗಳ ಸಂಬಂಧವನ್ನು ವಿವರಿಸಿ.**
- ಭಾರತ ಮತ್ತು ಚೀನಾಗಳ ಸಂಬಂಧ ನಾಗರೀಕತೆಗಳ ಕಾಲದಷ್ಟು ಹಳೆಯದು.
- ಭಾರತದ ರಾಜರು ಚೀನಾದ ರಾಜ ವಂಶಗಳೊಂದಿಗೆ ಉತ್ತಮ ವ್ಯಾಪಾರ ಸಂಪರ್ಕಗಳನ್ನು ಹೊಂದಿದ್ದ ಉಲ್ಲೇಖಗಳಿವೆ.
- ಪಂಚಶೀಲ ತತ್ವಗಳ ಮೂಲಕ ಎರಡು ರಾಷ್ಟ್ರಗಳ ಸಂಬಂಧಗಳನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು.
- 1962 ರಲ್ಲಿ ಟಿಬೆಟ್ ವಿವಾಧ ಉಲ್ಬಣಗೊಂಡು ಎರಡು ರಾಷ್ಟ್ರಗಳ ನಡುವೆ ಯುದ್ಧ ನಡೆಯಿತು.
- ಚೀನಾವು ಭಾರತದ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಮತ್ತಷ್ಟು ಕಗ್ಗಂಟಾಗಿಸಿದೆ.
- ಗಡೀ ವಿವಾಧ ಇದ್ದರೂ ಕೂಡ ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ರಾಯಭಾರ ಸಂಬಂಧಗಳು ಮುಂದುವರೆದಿವೆ.
- ಚೀನಾ ಭಾರತದೊಂದಿಗೆ ದೊಡ್ಡ ಮಟ್ಟದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕವನ್ನು ಹೊಂದಿದೆ
- ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ ಬ್ರಿಕ್ಸ್ ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿದೆ.

## 4. ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ
### (ಎರಡು/ಮೂರು ಅಂಕ)

**1. ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?**
- ಮಾನವ ಹಕ್ಕುಗಳ ನಿರಾಕರಣೆ
- ಶಸ್ತ್ರಾಸ್ತ್ರಗಳ ಪೈಪೋಟಿ
- ಆರ್ಥಿಕ ಅಸಮಾನತೆ
- ವರ್ಣಭೇಧ ನೀತಿ
- ಭಯೋತ್ಪಾದಕತೆ

**2. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ**
- ಭಾರತ ನಿರಂತರವಾಗಿ ಸಾರ್ವತ್ರಿಕ ಮಾನವ ಹಕ್ಕುಗಳನ್ನು ಪ್ರತಿಪಾದಿಸುತ್ತಾ ಬಂದಿದೆ.
- ತನ್ನ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
- ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ಮಾನವ ಹಕ್ಕುಗಳನ್ನು ಸಮರ್ಥಿಸುತ್ತಾ ಬಂದಿದೆ.
- ಭಾರತದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ
- ರಾಜ್ಯ ಮಟ್ಟದಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ.

**3. ನಿಶ್ಯಸ್ತ್ರೀಕರಣ ಸಾಧಿಸಲು ಅಮೇರಿಕಾ ಹಾಗೂ ರಷ್ಯಾ ಮಾಡಿಕೊಂಡ ಒಪ್ಪಂದಗಳಾವುವು?**
- ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ

- ಪಾಕ್ಷಿಕ ಪ್ರಯೋಗ ನಿಷೇದ ಒಪ್ಪಂದ
- ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ (ಸಿಟಿಬಿಟಿ)
- ಫಲಿಕೆ ನಿಷೇಧ ಒಪ್ಪಂದ

4. **ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?**

- ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಉಂಟಾಗುತ್ತವೆ.
- ಯುದ್ಧದ ಸಂಭವ ತಲೆದೋರುತ್ತದೆ.
- ಶಸ್ತ್ರಾಸ್ತ್ರಗಳು ಆರ್ಥಿಕವಾಗಿಯೂ ಒಂದು ಅನಗತ್ಯ ನಷ್ಟದಾಯಕ
- ಅಮೆರಿಕಾದ ಅಧ್ಯಕ್ಷ ಐಸನ್ ಹೋವರ್ "ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ; ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ". ಎಂದಿದ್ದಾರೆ

5. **ಆರ್ಥಿಕ ಅಸಮಾನತೆ ನಿವಾರಣೆಗೆ ಭಾರತದ ನಿಲುವೇನು? (ಭಾರತದ ಪ್ರಯತ್ನಗಳಾವುವು?)**

- ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು.
- ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು.
- ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.
- ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

## 03 ಸಾಮಾಜಿಕ ಚಳವಳಿಗಳು

### (ಎರಡು/ಮೂರು ಅಂಕ)

1. **ಜನಮಂದೆಯ ಸ್ವರೂಪವನ್ನು ತಿಳಿಸಿ.**

- ಜನರು ಆಕಸ್ಮಿಕವಾದ ಕಾರಣದಿಂದ ಸೇರಿ ತಾತ್ಕಾಲಿಕವಾಗಿ ನಡೆಸುವ ವರ್ತನೆಯಾಗಿದೆ.
- ಇವು ಮುಂದೆ ಸಾಮಾಜಿಕ ಚಳವಳಿಗಳಾಗಿ ರೂಪುಗೊಳ್ಳಬಹುದು.
- ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ಜನ ನೆರೆದಿರುತ್ತಾರೆ.
- ಜನಮಂದೆ ಸಮಾಜದ ಲೋಪದೋಷಗಳನ್ನು ಸೂಚಿಸುವುದು
- ಸರ್ಕಾರದ ಯೋಜನೆಗಳು, ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಾಧಾನವನ್ನು ಹೊರಹಾಕುತ್ತದೆ.

2. **ದೊಂಬಿಯ ಸ್ವರೂಪವನ್ನು ತಿಳಿಸಿ.**

- ದೊಂಬಿ/ಗಲಭೆಗಳಲ್ಲಿ ತೊಡಗಿರುವವರ ವರ್ತನೆಗೆ ನಿಶ್ಚಿತವಾದ ಗುರಿ ಇರುವುದಿಲ್ಲ
- ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಹಾಳು ಮಾಡುತ್ತವೆ.
- ಸಾಮಾನ್ಯವಾಗಿ ನಗರ, ಪಟ್ಟಣಗಳಲ್ಲಿ ಹೆಚ್ಚು ನಡೆಯುತ್ತವೆ.
- ದೊಂಬಿ/ಗಲಭೆಗಳು ದೀರ್ಘಕಾಲ ನಡೆಯಲಾರವು.

3. **ದೊಂಬಿ/ಗಲಭೆಗಳನ್ನು ಹೇಗೆ ನಿಯಂತ್ರಿಸಬಹುದು?**

- ಅಧಿಕಾರಿಗಳ ಸಮಯಪ್ರಜ್ಞೆ
- ಪೋಲೀಸ್
- ರಕ್ಷಣಾ ಪಡೆ
- ಕಾನೂನು

4. **ಪರಿಸರ ಚಳವಳಿಗಳನ್ನು ಹೆಸರಿಸಿ.**

- ಚಿಪ್ಕೋ ಚಳವಳಿ
- ಅಪ್ಪಿಕೋ ಚಳುವಳಿ
- ನರ್ಮದಾ ಬಚಾವೋ ಆಂದೋಲನ
- ಮೌನ ಕಣಿವೆ ಆಂದೋಲನ
- ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿ
- ಕೈಗಾ ಅಣು ಸ್ಥಾವರ ವಿರೋಧಿ ಚಳವಳಿ

5. **ಚಿಪ್ಕೋ ಚಳವಳಿಯನ್ನು ನಡೆಸಲು ಕಾರಣವೇನು?**

- ಉತ್ತರ ಪ್ರದೇಶದ ತೆಹ್ರಿ-ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ ಮರಗಳನ್ನು ಕಡಿಯಲು ಸರ್ಕಾರ ಅನುಮತಿ ನೀಡಿತ್ತು.
- ಇದರಿಂದ ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಅಲ್ಲಿನ ಮಹಿಳೆಯರೇ ಮರಗಳನ್ನು ತಬ್ಬಿಕೊಂಡು 'ಅಪ್ಪಿಕೋ'(ಚಿಪ್ಕೊ) ಚಳವಳಿಯನ್ನು ಪ್ರಾರಂಭಿಸಿದರು.
- ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.

6. **ಕರ್ನಾಟಕದ ಅಪ್ಪಿಕೋ ಚಳುವಳಿಯನ್ನು ವಿವರಿಸಿ**

- ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು 1983ರಲ್ಲಿ ಅಪ್ಪಿಕೋ ಚಳವಳಿಯನ್ನು ನಡೆಸಿದರು.
- ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಜನರು ಮರಗಳನ್ನು ಅಪ್ಪಿಕೊಂಡು ಪ್ರತಿಭಟಿಸಿದರು.
- ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಪರಿಸರ ಮಹತ್ವದ ಬಗ್ಗೆ ಅರಿವು ಮೂಡಿಸುವುದು ಅಲ್ಲಿನ ರೈತರ ಉದ್ದೇಶವಾಗಿತ್ತು.

7. **ನರ್ಮದಾ ಬಚಾವೋ ಆಂದೋಲನವನ್ನು ವಿವರಿಸಿ.**

- ಗುಜರಾತ್ ರಾಜ್ಯದ ನರ್ಮದಾ ನದಿಗೆ ಕಟ್ಟಲಾದ ಆಣೆಕಟ್ಟು ನಿರ್ಮಾಣದ ವಿರುದ್ಧ ನಡೆಯಿತು.
- ಆಣೆಕಟ್ಟು ನಿರ್ಮಾಣ ಅಲ್ಲಿನ ಸ್ಥಳೀಯ ಜನರನ್ನು ಮತ್ತು ಬುಡಕಟ್ಟು ಜನರನ್ನು ನಿರ್ಗತೀಕರಣಕ್ಕೆ ಒಳಪಡಿಸಿತ್ತು.
- ಮೇಧಾ ಪಾಟ್ಕರ್ ಇದರ ನೇತೃತ್ವ ವಹಿಸಿದ್ದರು.
- ಅರಣ್ಯ ನಾಶ, ಪರಿಸರನಾಶ, ಜೀವ ಸಂಕುಲಗಳಿಗೆ ಸಂರಕ್ಷಣೆ ಆಶಯದಿಂದ ಈ ಚಳುವಳಿ ನಡೆಸಲಾಯಿತು.

8. **ಕರ್ನಾಟಕದ ರೈತ ಚಳವಳಿಯ ಪ್ರಮುಖ ಬೇಡಿಕೆಗಳಾವುವು?**

- ಗ್ರಾಮಗಳ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಬೇಕು
- ಜಪ್ತಿ ಕಾರ್ಯಕ್ರಮಗಳು ನಿಲ್ಲಬೇಕು
- ಸ್ಥಳೀಯ ನೈಸರ್ಗಿಕ ಸಂಪತ್ತಿನಲ್ಲಿ ಸ್ಥಳೀಯ ಗ್ರಾಮಗಳಿಗೆ ಪಾಲು ದೊರೆಯಬೇಕು,
- ಲೆವಿ ಪದ್ಧತಿ ನಿಲ್ಲಬೇಕು

9. **ಮೌನ ಕಣಿವೆ ಆಂದೋಲನವನ್ನು ವಿವರಿಸಿ.**

- ಕೇರಳದ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಅಣೆಕಟ್ಟಿನ ನಿರ್ಮಾಣದ ವಿರುದ್ಧ ನಡೆಯಿತು.
- ಅಣೆಕಟ್ಟಿನ ನಿರ್ಮಾಣದಿಂದ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ.
- ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರು ಚಳವಳಿಯನ್ನು ನಡೆಸಿದರು.
- ಅನೇಕ ಜೀವಸಂಕುಲಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

10. **ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿಗಳಾವುವು?**

- MRPL ವಿರುದ್ಧದ ಚಳವಳಿ
- ನಂದಿಕೂರು ಉಷ್ಣ ಸ್ಥಾವರ ಸ್ಥಾಪನೆಯ ವಿರುದ್ಧ ಚಳುವಳಿ
- ಮಂಗಳೂರು ವಿಶೇಷ ಆರ್ಥಿಕ ವಲಯ ವಿರುದ್ಧದ ಚಳುವಳಿ

**11. ಕೈಗಾ ಅಣು ಸ್ಥಾವರ ವಿರೋಧಿ ಚಳವಳಿಯನ್ನು ವಿವರಿಸಿ.**
- ಕಾರವಾರ ಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವುದರ ವಿರುದ್ಧ ನಡೆಯಿತು.
- ಶಿವರಾಮ ಕಾರಂತರ ನಾಯಕತ್ವದಲ್ಲಿ ಪ್ರಾರಂಭಿಸಲಾಯಿತು.
- ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಜೀವ ಪ್ರಭೇದಗಳ ಮೇಲೆ ಹಾನಿಯಾಗುತ್ತದೆ,
- ಆದ್ದರಿಂದ ಇದನ್ನು ಸ್ಥಾಪನೆ ಮಾಡಬಾರದು ಎಂದು ಕೈಗಾ ವಿರೋಧಿ ಚಳವಳಿಯನ್ನು ನಡೆಸಲಾಯಿತು.

**12. ಮದ್ಯಪಾನ ನಿಷೇಧ ಚಳವಳಿಯನ್ನು(ಮಹಿಳಾ ಚಳವಳಿ) ವಿವರಿಸಿ**
- ಮಹಿಳೆಯರು ರೂಪಿಸಿದ ಚಳವಳಿಗಳಲ್ಲಿ ಪಾನ ನಿಷೇಧ ಚಳವಳಿ ಪ್ರಮುಖವಾದುದು.
- ಮದ್ಯಪಾನ ನಿಷೇಧವು ಸ್ವಾತಂತ್ರ್ಯ ಚಳವಳಿಯ ಭಾಗ.
- ಕರ್ನಾಟಕದಲ್ಲಿ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಮದ್ಯಪಾನ ನಿಷೇಧ ಚಳವಳಿ ಪ್ರಾರಂಭವಾದವು.
- ಕುಸುಮಾ ಸೊರಬ ಅವರ ಜೊತೆಗೆ ಹಲವರು ಈ ಚಳವಳಿಯಲ್ಲಿ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ.
- ಹಾಸನ, ಕೋಲಾರ, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿಯೂ ಮದ್ಯಪಾನ ನಿಷೇಧ ಚಳವಳಿ ನಡೆಸಿದ್ದಾರೆ.

**13. ಡಿ. ದೇವರಾಜ ಅರಸು ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು. ಸಮರ್ಥಿಸಿ.**
- ಸಾಮಾಜಿಕ ದುರ್ಬಲರ ವಿಮೋಚನೆಗೆ ಪೂರಕವಾದ ಶಾಸನಗಳನ್ನು ಜಾರಿಗೆ ತರುವ ಪ್ರಯತ್ನ ನಡೆಸಿದರು.
- ಗೇಣಿದಾರರನ್ನು ಭೂಮಾಲಿಕರ ಹಿಡಿತದಿಂದ ಬಿಡುಗಡೆ
- ಜೀತಪದ್ಧತಿ ರದ್ಧತಿ ನಿರ್ಮೂಲನೆ
- ಮಲ ಹೊರುವ ಅಮಾನವೀಯ ರೂಢಿಯ ನಿರ್ಮೂಲನೆ
- ಅನೇಕ ಕಾರ್ಯಕ್ರಮವನ್ನು ಜಾರಿಗೊಳಿಸಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು

## 04 ಸಾಮಾಜಿಕ ಸಮಸ್ಯೆಗಳು
### (ಎರಡು/ಮೂರು ಅಂಕ)

**1. ಮಕ್ಕಳ ದುಡಿಮೆ ಅಥವಾ ಬಾಲಕಾರ್ಮಿಕತೆಗೆ ಕಾರಣಗಳಾವುವು?**
- ಮಕ್ಕಳ ಹಕ್ಕುಗಳನ್ನು ಗೌರವಿಸಲು, ರಕ್ಷಣೆ ಮಾಡಲು ಅಗತ್ಯವಾಗಿ ಬೇಕಾದ ಸಾಮಾಜಿಕ ಪರಿಸರವಿಲ್ಲದಿರುವುದು,
- ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ
- ಮಾಲೀಕರ ವರ್ಗದ ಸ್ವಾರ್ಥ
- ವಲಸೆ, ಪೋಷಕರ ದುಶ್ಚಟಗಳು
- ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗದಿರುವುದು,
- ಕುಟುಂಬದ ಆರ್ಥಿಕ ಸ್ಥಿತಿ

**2. ಮಕ್ಕಳ ದುಡಿಮೆಯ ದುಷ್ಪರಿಣಾಮಗಳಾವುವು?**
- ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಪರಿಣಾಮಗಳನ್ನು ಉಂಟುಮಾಡುತ್ತದೆ.
- ಬಾಲಕಾರ್ಮಿಕ ಮಕ್ಕಳು ಯುವಕರಾದಾಗ ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಒಳಗಾಗುತ್ತಾರೆ.
- ಶಿಕ್ಷಣದಿಂದ ವಂಚಿತರಾಗಿ ಅನರಕ್ಷರಸ್ಥರಾಗುತ್ತಾರೆ.
- ಮಕ್ಕಳು ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾತ್ತಿರುತ್ತಾರೆ.
- ಮಕ್ಕಳ ಮಾರಾಟ, ಸಮಾಜ ವಿರೋಧಿ ಚಟುವಟಿಕೆಗೆ ಅವಕಾಶ ಮಾಡಿಕೊಡುತ್ತವೆ.

**3. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಯಾವ ಕ್ರಮಗಳನ್ನು ಸೂಚಿಸುವಿರಿ?**
- 18 ವರ್ಷದ ತನಕ ನಿರಂತರ ಶಾಲಾ ಶಿಕ್ಷಣವನ್ನು ಪೂರೈಸುವುದು
- ಎಲ್ಲಾ ಸಂದರ್ಭಗಳಲ್ಲಿ ಲಿಂಗ ಸಮಾನತೆಯನ್ನು ಕಾಪಾಡುವುದು ಮತ್ತು ತರುವುದು.
- ಅಸಹಾಯಕ ಕುಟುಂಬಗಳು ಬದುಕಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದು.
- ಬಾಲ್ಯವಿವಾಹ, ಮಕ್ಕಳ ಮಾರಾಟ ತಡೆ ಕುರಿತು ಅರಿವು ಹೆಚ್ಚಿಸುವುದು.
- ಮಕ್ಕಳ ರಕ್ಷಣಾತ್ಮಕ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.

**4. ಹೆಣ್ಣು ಭ್ರೂಣಹತ್ಯೆಯನ್ನು ಹತ್ತಿಕ್ಕಲು ಕ್ರಮಗಳಾವುವು?**
- ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು
- ಸಮಾನತೆಯ ಮನೋಧರ್ಮಕ್ಕೆ ಮಹತ್ವ ಕೊಡಬೇಕಾಗುತ್ತದೆ.
- ಹೆಣ್ಣು ಭ್ರೂಣಹತ್ಯೆಯನ್ನು ತಡೆಯಲು 1994ರಲ್ಲಿ ಕಾನೂನನ್ನು ಜಾರಿಗೆ ತರಲಾಗಿದೆ.

**5. ಹೆಣ್ಣು ಭ್ರೂಣಹತ್ಯೆಗೆ ಕಾರಣಗಳಾವುವು?**
- ಮಗಳ ಮದುವೆ ಖರ್ಚು
- ವರದಕ್ಷಿಣೆ
- ಲೈಂಗಿಕ ಶೋಷಣೆ ಮತ್ತು ದೌರ್ಜನ್ಯ
- ಆಸ್ತಿಯ ಹಕ್ಕುದಾರ ಮಗನೇ ಆಗಬೇಕು ಎನ್ನುವ ಮನೋಭಾವ

**6. ಹಸಿವಿನ ಸೂಚಕವನ್ನು ಹೇಗೆ ಕಂಡುಹಿಡಿಯುವರು? / ಹಸಿವಿನ ಸೂಚಕ ಎಂದರೇನು? ವಿವರಿಸಿ.**
- ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡವಾರು ಪ್ರಮಾಣ.
- ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರೆಗಿನ ಮಕ್ಕಳ ಶೇಕಡವಾರು ಪ್ರಮಾಣ.
- 5 ವರ್ಷದವರೆಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ
- ಈ ಮೂರು ಅಂಶಗಳ ಸರಾಸರಿಯಿಂದ ತಿಳಿಯಬಹುದು

**7. ಲಿಂಗತಾರತಮ್ಯದ ಪ್ರಕಾರಗಳು ಯಾವುವು?**
- ಜನನ ಪ್ರಮಾಣದಲ್ಲಿ ಅಸಮಾನತೆ
- ಅವಕಾಶಗಳಲ್ಲಿ ಅಸಮಾನತೆ
- ಒಡೆತನದ ಅಸಮಾನತೆ
- ಕೌಟುಂಬಿಕ ಅಸಮಾನತೆ

**8. ಬಾಲ್ಯವಿವಾಹವನ್ನು ಯಾಕೆ ಮಾಡಬಾರದು?**
- ಬಾಲ್ಯವಿವಾಹ ಕಾನೂನು ಪ್ರಕಾರ ಅಪರಾಧ.
- ಯಾವುದೇ ಹೆಣ್ಣಿಗೆ ದೇಹ, ಮನಸ್ಸು, ಗರ್ಭಕೋಶ, ಒಟ್ಟಾರೆ ಶಾರೀರಿಕ ಸಾಮರ್ಥ್ಯ ಬೆಳೆಯಲು 18 ವರ್ಷ ಬೇಕು.
- ಹೆಣ್ಣು ಗರ್ಭಕೋಶ ಸಮರ್ಥವಾಗಿ ಬೆಳೆಯಲು 18 ವರ್ಷ ಬೇಕು.
- ಚಿಕ್ಕ ವಯಸ್ಸಿನಲ್ಲಿ 'ಗರ್ಭ' ಧರಿಸುವುದರಿಂದ ಹೆರಿಗೆಯ ಸಮಯದಲ್ಲಿ ತಾಯಿ/ಮಗು ಸಾವಿಗೆ ಒಳಗಾಗುವ ಸಾಧ್ಯತೆ ಹೆಚ್ಚು.

**9. ಬಾಲ್ಯವಿವಾಹ ನಡೆದರೆ ಯಾರುಯಾರು ಅಪರಾಧಿಗಳಾಗುತ್ತಾರೆ?**
- ಮದುವೆ ಮಾಡಿದ ಹುಡುಗ / ಹುಡುಗಿಯ ತಂದೆ ತಾಯಿಗಳು ಕುಟುಂಬಸ್ಥರು.
- ಪೂಜಾರಿ, ಅಡುಗೆಯವರು, ಶಾಮಿಯಾನದವರು, ಫೋಟೋಗ್ರಾಫರ್, ವೀಡಿಯೋಗ್ರಾಫರ್
- ಮದುವೆ ಛತ್ರದ ಮುಖ್ಯಸ್ಥರು.
- ಮದುವೆಯಲ್ಲಿ ಭಾಗವಹಿಸಿದ ಎಲ್ಲರೂ.

**10. ಬಾಲ್ಯವಿವಾಹಕ್ಕೆ ಕಾರಣಗಳು ಯಾವುವು?**
- ಬಾಲ್ಯವಿವಾಹಕ್ಕೆ ಪ್ರಮುಖ ಕಾರಣ 'ಲಿಂಗ ತಾರತಮ್ಯ'.
- ಬೇರೆಯವರ ಮನೆಗೆ ಹೋಗುವವಳು ಬೇಗ ಮದುವೆ ಮಾಡಿ ಕಳುಹಿಸಬೇಕು ಎಂಬ ನಂಬಿಕೆ.
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ.
- ಸಮಾಜದ / ಸಮುದಾಯಗಳ / ಸಾರ್ವಜನಿಕ ಅಸಹಕಾರ.
- ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತವಾದ ಅನುಷ್ಠಾನ.

**11. ಬಾಲ್ಯವಿವಾಹದ ದುಷ್ಪರಿಣಾಮಗಳು ಯಾವುವು?**
- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗಿ
- ಅವರು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ.
- ಮಕ್ಕಳ ಮೇಲೆ ದೌರ್ಜನ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಹೆಚ್ಚುತ್ತವೆ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ
- ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ಧಕ್ಕೆ
- ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ.

**12. ಬಾಲ್ಯವಿವಾಹವನ್ನು ಹೇಗೆ ತಡೆಯಬಹುದು?**
- ಮಕ್ಕಳ ಸಹಾಯವಾಣಿ 1098ಗೆ ದೂರು ನೀಡಬಹುದು.
- ದೂರು ನೀಡಿದವರು ಹೆಸರು ಹೇಳದೆಯೂ ಇರಬಹುದು.
- ಯಾವುದೇ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ, ಗ್ರಾಮ ಲೆಕ್ಕಿಗ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ದೂರು ನೀಡಬಹುದು
- ನಗರದಲ್ಲಿ ಪೊಲೀಸ್ ಠಾಣೆಗೆ ದೂರು ನೀಡಬಹುದು.

**13. ಬಾಲ್ಯವಿವಾಹ ತಡೆಯಲು ಯಾವ ಕ್ರಮಗಳನ್ನು ಸೂಚಿಸುವಿರಿ? ಬಾಲ್ಯವಿವಾಹದ ಪರಿಹಾರಗಳನ್ನು ತಿಳಿಸಿ.**
- 18 ವರ್ಷದ ತನಕ ಯಾವ ಮಕ್ಕಳು ಶಾಲೆ / ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು
- ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ
- ಎಲ್ಲೇ ಬಾಲ್ಯವಿವಾಹ ನಡೆದರು ತಪ್ಪದೇ ದೂರು ನೀಡುವುದು, ಖಂಡಿಸುವುದು, ಪ್ರಶ್ನಿಸುವುದು.

**14. ಮಕ್ಕಳ ಸಾಗಾಣಿಕೆಗೆ ಕಾರಣಗಳು ಯಾವುವು?**
- ಬಾಲಕಾರ್ಮಿಕತೆ
- ಬಾಲ್ಯವಿವಾಹ
- ಶಾಲೆಬಿಡುವುದು
- ಬಡತನ
- ಕುಟುಂಬಗಳಲ್ಲಿ ಮಕ್ಕಳ ಬಗ್ಗೆ ಅಸಡ್ಡೆ

**15. ಮಕ್ಕಳ ಸಾಗಾಣಿಕೆಯ ಪರಿಹಾರ ಕ್ರಮಗಳನ್ನು ತಿಳಿಸಿ.**
- ಎಲ್ಲಾ ಶಾಲೆಗಳಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಿ ಅನುಷ್ಠಾನಕ್ಕೆ ತರುವುದು.
- ಎಲ್ಲಾ ಶಾಲೆಗಳಲ್ಲಿ "ಮಕ್ಕಳ ಸುರಕ್ಷತಾ ಸಮಿತಿ" ರಚಿಸಿ ಅನುಷ್ಠಾನಕ್ಕೆ ತರುವುದು.
- ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ "ಮಕ್ಕಳ ಗ್ರಾಮ ಸಭೆ" ಗಳನ್ನು ನಡೆಸಿ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.
- ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ "ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ" ರಚಿಸುವದು.
- "ಮಹಿಳೆಯರ & ಮಕ್ಕಳ ಸಾಗಾಣಿಕೆ & ಮಾರಾಟ ತಡೆ" ಸಮಿತಿ ರಚಿಸುವದು.

**16. ಮಕ್ಕಳ ಸಾಗಾಣಿಕೆಯ ದುಷ್ಪರಿಣಾಮಗಳು ಯಾವುವು?**
- ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕ
- ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ
- ಮಕ್ಕಳ ಸಾವು
- ಗಂಭೀರ ರೋಗದ ಅಪಾಯ/ಹೆಚ್.ಐ.ವಿ/ಲೈಂಗಿಕ ಕಾಯಿಲೆ,
- ಕೊಲೆ, ಮಾದಕ ವ್ಯಸನಗಳಿಗೆ ಬಲಿ,

## 2 ಭಾರತದ ಮೇಲ್ಮೈ ಲಕ್ಷಣಗಳು

**1. ಭಾರತದ ಪ್ರಾಕೃತಿಕ ವಿಭಾಗಗಳಾವುವು?**
- ಉತ್ತರದ ಪರ್ವತಗಳು
- ಉತ್ತರದ ಮೈದಾನಗಳು
- ಪರ್ಯಾಯ ಪ್ರಸ್ಥಭೂಮಿ
- ಕರಾವಳಿ ಮೈದಾನ ಮತ್ತು ದ್ವೀಪಗಳು.

**2. ಉತ್ತರದ ಮೈದಾನ ಪ್ರಾಮುಖ್ಯತೆಯನ್ನು ತಿಳಿಸಿ. (2/3 ಅಂಕ)**
- ಉತ್ತರದ ಮೈದಾನವು ಫಲವತ್ತಾಗಿದೆ
- ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ.
- ಕೃಷಿಗೆ ಉಪಯುಕ್ತವಾಗಿದೆ
- ಇಲ್ಲಿನ ಸಮತಟ್ಟಾದ ಭೂಮಿಯು ರಸ್ತೆ, ರೈಲು ಮಾರ್ಗಗಳ ನಿರ್ಮಾಣಕ್ಕೆ ಯೋಗ್ಯವಾಗಿದೆ.
- ಕೈಗಾರಿಕೀಕರಣ, ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತದೆ.

**3. ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆ ಏನು?**
- ಸಮೃದ್ಧ ಖನಿಜಗಳು ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯದಿಂದ ಕೂಡಿದೆ.
- ನೈಋತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರುತ್ತದೆ.
- ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಪೂರಕವಾಗಿದೆ.
- ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನ.
- ಜಲಶಕ್ತಿ ತಯಾರಿಕೆಗೆ ಉಪಯುಕ್ತ.

**4. ಹಿಮಾಲಯದ ಪ್ರಾಮುಖ್ಯತೆಯನ್ನು ತಿಳಿಸಿ. (2/3 ಅಂಕ)**
- ನೈಸರ್ಗಿಕ ಗಡಿಗಳಾಗಿದ್ದು ಪರಕೀಯರ ದಾಳಿಯನ್ನು ತಡೆಗಟ್ಟುತ್ತವೆ
- ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ನಿಯಂತ್ರಿಸುತ್ತವೆ.
- ಮಳೆ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ನೆರವಾಗುತ್ತವೆ.
- ಇಳಿಜಾರುಗಳಲ್ಲಿ ದಟ್ಟ ಕಾಡುಗಳಿವೆ
- ಖನಿಜಗಳ ಉಗ್ರಾಣಗಳಾಗಿವೆ.
- ಹಲವು ನದಿಗಳ ಉಗಮ ಸ್ಥಾನ, ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತ

**5. ಪಶ್ಚಿಮ ಘಟ್ಟಗಳು ಮತ್ತು ಪೂರ್ವಘಟ್ಟಗಳ ವ್ಯತ್ಯಾಸಗಳಾವುವು?**

| ಪಶ್ಚಿಮ ಘಟ್ಟಗಳು | ಪೂರ್ವಘಟ್ಟಗಳು |
|---|---|
| ➢ ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿವೆ<br>➢ ಎತ್ತರ ಮತ್ತು ನಿರಂತರವಾಗಿವೆ<br>➢ ಅನೇಕ ನದಿಗಳು ಉಗಮವಾಗುತ್ತವೆ | ➢ ಮಹಾನದಿ ಕಣಿವೆಯಿಂದ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿವೆ<br>➢ ಪಶ್ಚಿಮ ಘಟ್ಟಗಳಷ್ಟು ಎತ್ತರ ಮತ್ತು ನಿರಂತರ ವಾಗಿಲ್ಲ<br>➢ ನದಿ ಕಣಿವೆಗಳಿಂದ ಪ್ರತ್ಯೇಕಗೊಂಡಿವೆ |

**6. ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಗಳ ವ್ಯತ್ಯಾಸ ತಿಳಿಸಿ**

| ಪೂರ್ವ ಕರಾವಳಿ | ಪಶ್ಚಿಮ ಕರಾವಳಿ |
|---|---|
| ➤ ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡುಬರುತ್ತದೆ. | ➤ ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ನೆಲೆಸಿದೆ. |
| ➤ ಇದು ಕಛ್‌ನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. | ➤ ಸುವರ್ಣರೇಖಾ ನದಿಯಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. |
| ➤ ಇದು ಕಿರಿದಾಗಿದೆ. | ➤ ಪಶ್ಚಿಮ ಕರಾವಳಿಗಿಂತ ಅಗಲವಾಗಿದೆ. |
| ➤ ಕೊಂಕಣ ತೀರ, ಕರ್ನಾಟಕ ತೀರ ಮತ್ತು ಮಲಬಾರ್ ತೀರಗಳೆಂದು ವಿಂಗಡಿಸಲಾಗಿದೆ. | ➤ ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರಗಳೆಂದು ವಿಂಗಡಿಸಲಾಗಿದೆ. |

**7. ಭಾರತದ ಕರಾವಳಿ ಮೈದಾನಗಳ ಪ್ರಾಮುಖ್ಯತೆ ತಿಳಿಸಿ.**

➤ ನೈಸರ್ಗಿಕ ಬಂದರುಗಳಿಗೆ ಪೂರಕವಾಗಿವೆ.
➤ ಮೀನುಗಾರಿಕೆಗೆ ಪೂರಕ
➤ ಹಡಗು ನಿರ್ಮಾಣ ಕೈಗಾರಿಕೆಗಳು ಕಂಡು ಬರುತ್ತವೆ.
➤ ಕೃಷಿ ಮತ್ತು ಉಪ್ಪು ಉತ್ಪಾದನೆಗೆ ನೆರವಾಗುತ್ತವೆ.
➤ ಆಕರ್ಷಕ ಬೀಚ್‌ಗಳಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತವೆ

## 3 ಭಾರತದ ವಾಯುಗುಣ

**1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾವುವು?**

➤ ಸ್ಥಾನ
➤ ಜಲರಾಶಿಗಳು
➤ ಮೇಲ್ಮೈ ಲಕ್ಷಣ
➤ ಮಾನ್ಸೂನ್ ಮಾರುತಗಳು.

**2. ಭಾರತದ ವಾಯುಗುಣದ ಋತುಕಾಲಗಳಾವುವು?**

➤ ಚಳಿಗಾಲ
➤ ಬೇಸಿಗೆ ಕಾಲ
➤ ಮಳೆಗಾಲ
➤ ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ

**3. ನೈಋತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯಗಳನ್ನು ವಿವರಿಸಿ.**

➤ ಬೇಸಿಗೆಯ ಅಂತ್ಯದಲ್ಲಿ ಉಷ್ಣಾಂಶವು ಹೆಚ್ಚಾಗಿ ಭಾರತದಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುತ್ತದೆ.
➤ ಹಿಂದೂ ಸಾಗರದಲ್ಲಿ ಅಧಿಕ ಒತ್ತಡವಿರುತ್ತದೆ.
➤ ಆದ್ದರಿಂದ ತೇವಾಂಶಭರಿತ ಮಾರುತಗಳು ನೈಋತ್ಯದಿಂದ ಭಾರತದೆಡೆಗೆ ಬೀಸುತ್ತವೆ.
➤ ಇವು ದೇಶದ ವಿವಿಧ ಭಾಗಗಳಿಗೆ ಮಳೆಯನ್ನು ತರುತ್ತವೆ.

**4. ಭಾರತದ ಪಶ್ಚಿಮದ ಕಡೆಗೆ ಹೋದಂತೆ ಮಳೆಯ ಪ್ರಮಾಣವು ಕಡಿಮೆಯಾಗುತ್ತದೆ. ಏಕೆ?**

➤ ಮಾನ್ಸೂನ್ ಮಾರುತಗಳ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆಯನ್ನು ಸುರಿಸುತ್ತವೆ.
➤ ಮಳೆಯ ಪ್ರಮಾಣವು ಪಶ್ಚಿಮ ಘಟ್ಟಗಳ ಪೂರ್ವಭಾಗಗಳಿಗೆ ಹೋದಂತೆ ಕಡಿಮೆಯಾಗುತ್ತದೆ.
➤ ಹೀಗಾಗಿ ಆ ಭಾಗ ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ.

**5. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲವನ್ನು ವಿವರಿಸಿ.**

➤ ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಷ್ಣಾಂಶವು ಕಡಿಮೆಯಾಗಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣಗೊಳ್ಳುವುದು.
➤ ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುವುದು.
➤ ಪರಿಣಾಮವಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.
➤ ಅವು ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುವವು.
➤ ಹೀಗಾಗಿ ಈ ಅವಧಿಯನ್ನು "ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ" ಎಂದು ಕರೆಯಲಾಗಿದೆ.

**6. ಭಾರತದಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಗಳಾವುವು?**

➤ ಕಛ್‌ನ ಪಶ್ಚಿಮ ಭಾಗ
➤ ರಾಜಸ್ತಾನದ ಥಾರ್ ಮರುಭೂಮಿ
➤ ಪಶ್ಚಿಮದ ಪಂಜಾಬು, ಹರಿಯಾಣ ಮತ್ತು ಗುಜರಾತ್
➤ ಉತ್ತರ ಜಾಸ್ಕರ್ ಶ್ರೇಣಿ
➤ ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು

**7. ಭಾರತದಲ್ಲಿ ಅಧಿಕ ಮಳೆ ಬೀಳುವ ಪ್ರದೇಶಗಳಾವುವು?**

➤ ಪಶ್ಚಿಮ ಘಟ್ಟಗಳ ಕಿರಿದಾದ ವಲಯ
➤ ಜಮ್ಮುವಿನಿಂದ ಹಿಮಾಚಲ ಪ್ರದೇಶ
➤ ಬಿಹಾರ ಮತ್ತು ಪಶ್ಚಿಮಬಂಗಾಳ
➤ ಈಶಾನ್ಯ ಭಾರತ.
➤ ಪಶ್ಚಿಮ ಸಮುದ್ರ ತೀರ ಪ್ರದೇಶ.

## 6 ಭಾರತದ ಜಲಸಂಪನ್ಮೂಲಗಳು

**1. ಜಲಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ತಿಳಿಸಿ**

➤ ಮಾನವನಿಗೆ ಕುಡಿಯಲು, ಗೃಹಬಳಕೆಗೆ
➤ ವ್ಯವಸಾಯ
➤ ವಿದ್ಯುಚ್ಛಕ್ತಿ ತಯಾರಿಕೆ
➤ ಕೈಗಾರಿಕೆ
➤ ನೌಕಾಯಾನ
➤ ಮೀನುಗಾರಿಕೆ

**2. ಉತ್ತರ ಭಾರತದ ನದಿಗಳನ್ನು ಕುರಿತು ವಿವರಿಸಿ.**

➤ "ಹಿಮಾಲಯದ ನದಿಗಳು" ಎಂತಲೂ ಕರೆಯಲಾಗಿದೆ.
➤ ಸಿಂಧೂ, ಗಂಗ ಮತ್ತು ಬ್ರಹ್ಮಪುತ್ರಗಳು
➤ ವರ್ಷಪೂರ್ತಿ ತುಂಬಿ ಹರಿಯುತ್ತವೆ.

**3. ದಕ್ಷಿಣ ಭಾರತದ ನದಿಗಳನ್ನು ಕುರಿತು ವಿವರಿಸಿ**

➤ 'ಪರ್ಯಾಯ ಪ್ರಸ್ಥಭೂಮಿ ನದಿಗಳು'ಎಂತಲೂ ಕರೆಯುತ್ತಾರೆ.
➤ ಅವುಗಳಲ್ಲಿ ಬಹಳಷ್ಟು ಪಶ್ಚಿಮ ಘಟ್ಟಗಳಲ್ಲಿ ಉಗಮ ಹೊಂದುವವು.
➤ ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದಾ, ತಾಪಿ
➤ ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ

**4. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳು (ಎರಡು/ಮೂರು ಅಂಕ)**

➤ ನೀರಾವರಿ ಪೂರೈಕೆ.
➤ ಪ್ರವಾಹಗಳ ನಿಯಂತ್ರಣ.
➤ ಜಲ ವಿದ್ಯುತ್ ತಯಾರಿಕೆ.
➤ ಒಳನಾಡಿನ ನೌಕಾಯಾನ.
➤ ಮನರಂಜನೆ ಸೌಲಭ್ಯ.
➤ ಗೃಹಬಳಕೆ ಮತ್ತು ಕೈಗಾರಿಕೆಗಳಿಗೆ ನೀರು ಪೂರೈಕೆ.

5. **ಭಾರತದ ಪ್ರಮುಖ ನದಿಗಳನ್ನು ವರ್ಗೀಕರಿಸಿ.**

**ಎ) ಪೂರ್ವಕ್ಕೆ ಹರಿಯುವ ನದಿಗಳು**

- ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ

**ಬಿ) ಪಶ್ಚಿಮಕ್ಕೆ ಹರಿಯುವ ನದಿಗಳು**

- ನರ್ಮದ, ತಾಪಿ

6. **ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ?**

- ಕೃಷಿಗೆ ನಿರಂತರವಾದ ನೀರಿನ ಸರಬರಾಜು ಅತ್ಯಗತ್ಯ.
- ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ.
- ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ.
- ಹೀಗಾಗಿ ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ.

7. **ಭಾರತದ ಪ್ರಮುಖ ನೀರಾವರಿ ವಿಧಗಳನ್ನು ತಿಳಿಸಿ.**

- ಬಾವಿ ನೀರಾವರಿ
- ಕಾಲುವೆ ನೀರಾವರಿ
- ಕೆರೆ ನೀರಾವರಿ,
- ಹನಿ ನೀರಾವರಿ ಮತ್ತು ಸಿಂಪಡಣೆ ನೀರಾವರಿ

8. **ಪ್ರವಾಹಕಾಲುವೆ ಹಾಗೂ ಸಾರ್ವಕಾಲಿಕ ಕಾಲುವೆಗಳ ವ್ಯತ್ಯಾಸಗಳಾವುವು?**

| **ಪ್ರವಾಹ ಕಾಲುವೆ** | **ಸಾರ್ವಕಾಲಿಕ ಕಾಲುವೆ** |
|---|---|
| ➢ ನೇರವಾಗಿ ನದಿಯಿಂದ ಕಾಲುವೆ ತೋಡಿ ಕೃಷಿಗೆ ನೀರು ಪೂರೈಸುವುದೇ ಪ್ರವಾಹ ಕಾಲುವೆ.<br>➢ ನದಿಗಳು ತುಂಬಿ ಹರಿಯುವಾಗ ಮಾತ್ರ ನೀರಾವರಿ ಸಾಧ್ಯ | ➢ ನದಿಗಳಿಗೆ ಅಣೆಕಟ್ಟೆಗಳನ್ನು ನಿರ್ಮಿಸಿ, ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ಅದನ್ನು ಕಾಲುವೆ ಮೂಲಕ ನೀರು ಪೂರೈಸುವುದೇ ಸಾರ್ವಕಾಲಿಕ ಕಾಲುವೆ<br>➢ ಎಲ್ಲಾ ಕಾಲದಲ್ಲಿ ನೀರನ್ನೊದಗಿಸಬಹುದು. |

9. **ಭಾರತದಲ್ಲಿ ಹೆಚ್ಚು ಬಾವಿ ನೀರಾವರಿ ವಿಧಾನವನ್ನು ಹೊಂದಿದೆ. ಏಕೆ? / ಬಾವಿ ನೀರಾವರಿಯ ಪ್ರಾಮುಖ್ಯತೆ ತಿಳಿಸಿ.**

- ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ.
- ಕಡಿಮೆ ವೆಚ್ಚದಲ್ಲಿ ಸುಲಭವಾಗಿ ಬಾವಿ ತೋಡಬಹುದು.
- ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ.
- ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯವಾಗಬಲ್ಲದು.

## 7. ಭಾರತದ ಭೂ ಸಂಪನ್ಮೂಲಗಳು

1. **ಸಾಂದ್ರ ಬೇಸಾಯವನ್ನು ವಿವರಿಸಿ.**

- ವರ್ಷವಿಡೀ ಸಾಗುವಳಿಗಾಗಿ ಭೂಮಿ ಬಳಕೆ ಮಾಡಿಕೊಳ್ಳಲಾಗುವುದು.
- ವರ್ಷದಲ್ಲಿ ಎರಡು ಅಥವಾ ಮೂರು ಬೆಳೆಗಳನ್ನು ಬೆಳೆಯುವರು
- ಚಿಕ್ಕ ಭೂ ಹಿಡುವಳಿಯಿಂದಲೇ ಹೆಚ್ಚು ಉತ್ಪಾದನೆಗಾಗಿ ಪ್ರಯತ್ನಿಸಲಾಗುವುದು.
- ಫಲವತ್ತಾದ ಮತ್ತು ನೀರಾವರಿ ಸೌಲಭ್ಯವಿರುವ ಭಾಗಗಳಲ್ಲಿ ಸರ್ವೆ ಸಾಮಾನ್ಯ.

2. **ಭಾರತದಲ್ಲಿ ರೂಢಿಯಲ್ಲಿರುವ ಬೆಳೆ ಋತುಗಳನ್ನು ಹೆಸರಿಸಿ.**

- ಮುಂಗಾರು ಬೆಳೆ ಋತು.
- ಹಿಂಗಾರು ಬೆಳೆ ಋತು.

3. **ಭಾರತೀಯ ಹವಾಮಾನ ಋತುಗಳು ಮತ್ತು ಕೃಷಿಯ ಋತುಗಳು ಪರಸ್ಪರ ಸಂಬಂಧ ಹೊಂದಿವೆ. ಸ್ಪಷ್ಟೀಕರಿಸಿ.**

- ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು.
- ಚಳಿಗಾಲದಲ್ಲಿ ಬಿತ್ತನೆ ಮಾಡಿ ಫೆಬ್ರುವರಿಮಾರ್ಚ್ ತಿಂಗಳಲ್ಲಿ ಬೆಳೆ – ಕಟಾವು ಮಾಡುವುದನ್ನು'ಹಿಂಗಾರು ಬೆಳೆ ಋತು' ಎನ್ನುವರು.
- ಹಿಂಗಾರು ಮತ್ತು ಮುಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಮಾಡುವ ಬೇಸಾಯವನ್ನು ಜೇಡ್ ಬೇಸಾಯ ಎನ್ನುವರು
- ಹೀಗೆ, ಭಾರತೀಯ ಹವಾಮಾನ ಋತುಗಳು ಮತ್ತು ಕೃಷಿಯ ಋತುಗಳು ಪರಸ್ಪರ ಸಂಬಂಧ ಹೊಂದಿವೆ.

4. **ಭಾರತದ ಆರ್ಥಿಕ ಅಭಿವೃದ್ಧಿಗೆ ತೋಟಗಾರಿಕೆ ಹೇಗೆ ಸಹಾಯ ಮಾಡುತ್ತದೆ? (ತೋಟಗಾರಿಕೆಯ ಮಹತ್ವ)**

- ಸಮರ್ಪಕ ಭೂಬಳಕೆ ಸಹಾಯಕವಾಗಿದೆ.
- ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಒದಗಿಸುತ್ತದೆ.
- ಭಾರತದ ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಲು ಉತ್ತೇಜನ ನೀಡುತ್ತದೆ.
- ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ.
- ಆಹಾರ ಭದ್ರತೆಗೆ ನೆರವಾಗುತ್ತದೆ.

5. **ದೇಶದ ಕೃಷಿಯ ಮೇಲೆ ಪುಷ್ಪ ಕೃಷಿಯು ಮಹತ್ವದ ಪಾತ್ರವಹಿಸುತ್ತದೆ. ಸಮರ್ಥಿಸಿ**

- ಇದು ರೈತರ ಆದಾಯ ಗಳಿಕೆಗೆ ಸಹಾಯಕವಾಗಿದೆ
- ಉದ್ಯೋಗಾವಕಾಶ ಒದಗಿಸುತ್ತದೆ
- ಮಹಿಳೆಯರಿಗೆ ವೃತ್ತಿ ಅವಕಾಶ ಕಲ್ಪಿಸುತ್ತದೆ
- ದೇಶದ ರಫ್ತು ವ್ಯಾಪಾರದ ವೃದ್ಧಿಗೆ ನೆರವಾಗುತ್ತದೆ.

## 8 ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

1. **ಖನಿಜಗಳ ಪ್ರಾಮುಖ್ಯತೆಯನ್ನು ತಿಳಿಸಿ. / ದೇಶದ ಅಭಿವೃದ್ಧಿಯಲ್ಲಿ ಖನಿಜ ಸಂಪನ್ಮೂಲಗಳ ಪಾತ್ರವೇನು?**

- ದೇಶದ ಸಮೃದ್ಧಿಯಲ್ಲಿ ಇವುಗಳ ಪಾತ್ರ ಮಹತ್ವದ್ದು.
- ಕೈಗಾರಿಕೆ, ನಿರ್ಮಾಣ ಕಾರ್ಯಕ್ಕೆ ಅಗತ್ಯ
- ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿಗೆ ಪೂರಕ
- ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಗೆ ಹೆಚ್ಚು ಉಪಯುಕ್ತ.
- ಕೆಲವು ಖನಿಜಗಳು ಆರ್ಥಿಕ ಮೌಲ್ಯ ಹೊಂದಿರುತ್ತವೆ.

2. **ಭಾರತದಲ್ಲಿ ಸಿಗುವ ಪ್ರಮುಖ ಖನಿಜಗಳು ಯಾವುವು?**

- ಕಬ್ಬಿಣದ ಅದಿರು
- ಮ್ಯಾಂಗನೀಸ್ ಅದಿರು
- ಬಾಕ್ಸೈಟ್
- ಅಬ್ರಕ

3. **ಭಾರತವು ಪರಮಾಣುಶಕ್ತಿಯನ್ನು ಉತ್ಪಾದಿಸುವ ಯೋಜನೆಗಳನ್ನು ಏಕೆ ಹಮ್ಮಿಕೊಂಡಿದೆ?**

- ಭಾರತದಲ್ಲಿ ವಿದ್ಯುಚ್ಛಕ್ತಿಗಾಗಿ ಬೇಡಿಕೆಯು ಹೆಚ್ಚಾಗಿದೆ.
- ಈ ಬೇಡಿಕೆಯನ್ನು ಪೂರೈಸುವಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ.
- ಭಾರತದಲ್ಲಿ ಅಪಾರವಾದ ಪರಮಾಣು ಖನಿಜಗಳಿವೆ
- ಭಾರತದಲ್ಲಿ ಅಗತ್ಯವಾಗಿ ಪರಮಾಣು ತಂತ್ರಜ್ಞಾನ ಲಭ್ಯವಿದೆ.

ಸವಿಮಿತ್ರ

**4. ಪ್ರಸ್ತುತ ದಿನಗಳಲ್ಲಿ ಜಲವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿ ಅತ್ಯಾವಶ್ಯಕ. ಸಮರ್ಥಿಸಿ.**

- ನವೀಕರಿಸಬಲ್ಲ, ಸುಲಭವಾದ ಬೆಲೆಗೆ ದೊರೆಯುವ ಸಂಪನ್ಮೂಲವಾಗಿದೆ.
- ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಗಿಂತ ಅಧಿಕ ಶಕ್ತಿ ನೀಡುವುದು.
- ಭಾರತವು ಸಾಕಷ್ಟು ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕಾನಿಲಗಳನ್ನು ಹೊಂದಿಲ್ಲ
- ದೇಶದಲ್ಲಿ ಜಲವಿದ್ಯುಚ್ಛಕ್ತಿ ಅಭಿವೃದ್ಧಿಗೆ ಅಗತ್ಯವಾದ ಅಂಶಗಳು ಪೂರಕವಾಗಿವೆ.
- ಆದ್ದರಿಂದ ಪ್ರಸ್ತುತ ದಿನಗಳಲ್ಲಿ ಜಲವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿ ಅತ್ಯಾವಶ್ಯಕ.

**5. ಮ್ಯಾಂಗನೀಸ್ ಅದಿರಿನ ಉಪಯೋಗಗಳನ್ನು ತಿಳಿಸಿ**

- ಮ್ಯಾಂಗನೀಸ್ ಅತ್ಯಂತ ಪ್ರಮುಖವಾದ ಮಿಶ್ರಲೋಹ ಖನಿಜ.
- ಇದನ್ನು ಹೆಚ್ಚಾಗಿ ಉಕ್ಕು ತಯಾರಿಸಲು ಉಪಯೋಗಿಸಲಾಗುವುದು.
- ಬ್ಯಾಟರಿ, ಬಣ್ಣ, ಗಾಜು, ಪಿಂಗಾಣಿ ವಸ್ತು ಮತ್ತು ಕ್ಯಾಲಿಕೊ ಪ್ರಿಂಟಿಂಗ್‌ಗಾಗಿ ಬಳಸಲಾಗುವುದು.

**6. ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದೆ. ಸಮರ್ಥಿಸಿ / ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಏನು?**

- ಭಾರತದಲ್ಲಿ ಅಪರಿಮಿತವಾದ ಅಸಂಪ್ರದಾಯಿಕ ಶಕ್ತಿ ಮೂಲಗಳು ದೊರೆಯುತ್ತವೆ.
- ಇವು ನವೀಕರಿಸಬಲ್ಲ ಮೂಲಗಳಾಗಿವೆ
- ಮಾಲಿನ್ಯ ಮುಕ್ತವಾದವು ಮತ್ತು ಪರಿಸರ ಸ್ನೇಹಿಗಳಾಗಿವೆ.
- ಸುಲಭವಾಗಿ ಸರಬರಾಜು ಮಾಡಬಹುದು.
- ದೇಶದ ವಿದ್ಯುತ್ ಅಭಾವವನ್ನು ನೀಗಿಸಬಹುದು.

**7. ಅಭ್ರಕದ ಉಪಯೋಗಗಳನ್ನು ತಿಳಿಸಿ**

- ಶಾಖ ನಿರೋಧಕ ಗುಣ ಹೊಂದಿದೆ.
- ವಿದ್ಯುದುಪಕರಣ ಉದ್ಯಮದಲ್ಲಿ ಬಳಸುವರು
- ಟೆಲಿಫೋನ್ ಉದ್ಯಮದಲ್ಲಿ ಬಳಸುವರು
- ವಿಮಾನ ತಯಾರಿಕೆಗೆ ಬಳಸುವರು
- ಸ್ವಚಾಲನಾ ವಾಹನ ಕೈಗಾರಿಕೆಯಲ್ಲಿ ಬಳಸುವರು

**8. ಒಂದು ದೇಶದ ಆರ್ಥಿಕಾಭಿವೃದ್ಧಿಗೆ ಶಕ್ತಿ ಸಂಪನ್ಮೂಲಗಳು ಅತ್ಯಗತ್ಯ. ಹೇಗೆ? / ಶಕ್ತಿ ಸಂಪನ್ಮೂಲಗಳ ಮಹತ್ವವೇನು?**

- ಒಂದು ದೇಶದ ಆರ್ಥಿಕಾಭಿವೃದ್ಧಿಗೆ ಅತ್ಯಗತ್ಯ.
- ಜನರ ಜೀವನ ಮಟ್ಟದ ಸುಧಾರಣೆಗೆ ಸಹಾಯಕ.
- ಕೈಗಾರಿಕೆ, ಕೃಷಿ, ವಾಣಿಜ್ಯೋದ್ಯಮ ಪ್ರಗತಿ ಪೂರಕ
- ಸಾರಿಗೆ–ಸಂಪರ್ಕ ಮೊದಲಾದವುಗಳ ಪ್ರಗತಿಯಲ್ಲಿ ಪಾತ್ರ ಮುಖ್ಯವಾದುದು.

**9. ಕಲ್ಲಿದ್ದಲಿನ ಪ್ರಾಮುಖ್ಯತೆ ಏನು? / ಕಲ್ಲಿದ್ದಲನ್ನು 'ಕಪ್ಪು ಬಂಗಾರ' ಎನ್ನುವರು. ಸಮರ್ಥಿಸಿ.**

- ಕಲ್ಲಿದ್ದಲು ಭಾರತದ ಪ್ರಮುಖ ಶಕ್ತಿ ಸಂಪನ್ಮೂಲವಾಗಿದೆ.
- ಕಲ್ಲಿದ್ದಲಿನಿಂದ ಅನೇಕ ಉಪವಸ್ತುಗಳೂ ದೊರೆಯುತ್ತದೆ.
- ವಿವಿಧ ಕೈಗಾರಿಕೆಗಳ ಕಚ್ಚಾ ವಸ್ತುಗಳಾಗಿ ಬಳಕೆ ಮಾಡಲಾಗುವುದು.
- ಉದಾ: ಬಣ್ಣ, ಪ್ಲಾಸ್ಟಿಕ್, ಕೃತಕನಾರು, ಕೃತಕ ರಬ್ಬರ್

**10. ಪೆಟ್ರೋಲಿಯಂನ್ನು 'ದ್ರವ ಚಿನ್ನ' ಎಂದು ಕರೆಯುವರು. ಸಮರ್ಥಿಸಿ**

- ಇದೊಂದು ಅತಿ ಪ್ರಮುಖ ಇಂಧನ
- ಹೆಚ್ಚಾಗಿ ಸಾರಿಗೆಯಲ್ಲಿ ಬಳಸಲಾಗುತ್ತದೆ.
- ಹಲವು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವುದು.
- ಉದಾ: ಕೃತಕ ರಬ್ಬರ್, ಔಷಧಿ, ರಸಗೊಬ್ಬರ, ಬಣ್ಣ ತಯಾರಿಕೆ
- ವಾಣಿಜ್ಯ ದೃಷ್ಟಿಯಲ್ಲಿ ಮುಖ್ಯ ಶಕ್ತಿಯ ಮೂಲ

**11. ಕರ್ನಾಟಕ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳಾವುವು?**

- ಶಿವನಸಮುದ್ರ, ಶರಾವತಿ, ಲಿಂಗನಮಕ್ಕಿ, ಆಲಮಟ್ಟಿ, ಕಾಳಿ ಮತ್ತು ಭದ್ರ ಮುಂತಾದವು.

**12. ಭಾರತದಲ್ಲಿ ವಿದ್ಯುತ್ ಅಭಾವಕ್ಕೆ ಪ್ರಮುಖ ಕಾರಣಗಳಾವುವು?**

- ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪದ ಲಭ್ಯತೆ
- ಕಡಿಮೆ ದರ್ಜೆಯ ಕಲ್ಲಿದ್ದಲು.
- ಅಕಾಲಿಕ ಮಳೆ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ.
- ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಕಡಿಮೆ ಬಳಕೆ.

**13. ಭಾರತದಲ್ಲಿ ವಿದ್ಯುಚ್ಛಕ್ತಿ ಅಭಾವದ ಪರಿಹಾರಕ್ಕೆ ಯಾವ ಕ್ರಮಗಳನ್ನು ಸೂಚಿಸುವಿರಿ?**

- ದೇಶದಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳ ಉತ್ಪಾದನೆಯನ್ನು ಹೆಚ್ಚಿಸುವುದು.
- ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಬಳಸುವುದು.
- ಹೆಚ್ಚೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು

## 12. ಭಾರತದ ಜನಸಂಖ್ಯೆ

**1. ಜನಸಂಖ್ಯೆಯ ಬೆಳವಣಿಗೆಗೆ ಕಾರಣಗಳೇನು?**

- ಅಧಿಕ ಜನನ ದರ
- ಕಡಿಮೆ ಮರಣ ದರ

**2. 1901 ರಿಂದ 1921 ರವರೆಗೆ ಭಾರತದ ಜನಸಂಖ್ಯಾ ಬೆಳವಣಿಗೆಯು ನಿಧಾನದ ಗತಿಯಲ್ಲಿತ್ತು. ಏಕೆ?**

- ಅಧಿಕ ಮರಣ ದರ
- ಮಾರಣಾಂತಿಕ ಕಾಯಿಲೆ
- ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ ಮರಣ ದರ ಹೆಚ್ಚಾಗಿತ್ತು.

**3. ಅಧಿಕ ಜನನ ದರಕ್ಕೆ ಕಾರಣಗಳೇನು?**

- ಬಾಲ್ಯವಿವಾಹ
- ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು,
- ಬಹುಪತ್ನಿತ್ವ
- ಬಡತನ
- ಅನಕ್ಷರತೆ

**4. ಇತ್ತೀಚೆಗೆ ಭಾರತದಲ್ಲಿ ಮರಣದರದಲ್ಲಿ ಇಳಿಕೆಯಾಗುತ್ತಿದೆ. ಏಕೆ?**

- ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ
- ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ
- ಶಿಶು ಮರಣದಲ್ಲಿ ಕುಸಿತ
- ಶಿಕ್ಷಣದ ಪ್ರಗತಿ

**5. ಭಾರತದ ವಿರಳ ಜನಸಂಖ್ಯೆಯುಳ್ಳ ಪ್ರದೇಶಗಳಾವುವು?**

- ಹಿಮಾಲಯ ಪರ್ವತ ಪ್ರದೇಶ
- ಕೇಂದ್ರದ ಎತ್ತರ ಪ್ರದೇಶ
- ಥಾರ್ ಮರುಭೂಮಿ ಮತ್ತು ದ್ವೀಪಗಳು.

**6. ಜನಸಂಖ್ಯೆ ಬೆಳವಣಿಗೆಯ ಪರಿಣಾಮಗಳಾವುವು? /ಜನಸಂಖ್ಯೆ ಬೆಳವಣಿಗೆಯ ನಿಧಾನ ಗತಿಯ ಆರ್ಥಿಕಾಭಿವೃದ್ಧಿಗೆ ಕಾರಣವಾಗುತ್ತದೆ. ಸಮರ್ಥಿಸಿ**

- ನಿರುದ್ಯೋಗಕ್ಕೆ ಕಾರಣವಾಗುತ್ತದೆ.
- ಆಹಾರದ ಕೊರತೆ ಮತ್ತು ಅಪೌಷ್ಟಿಕತೆ
- ಮೂಲ ಸೌಲಭ್ಯಗಳ ಕೊರತೆ
- ಕಡಿಮೆ ತಲಾದಾಯಕ್ಕೆ ಕಾರಣ
- ನಿಧಾನ ಗತಿಯ ಆರ್ಥಿಕಾಭಿವೃದ್ಧಿ

**7. ಜನಸಂಖ್ಯಾ ಬೆಳೆವಣಿಗೆಯ ನಿಯಂತ್ರಣ ಕ್ರಮಗಳನ್ನು ತಿಳಿಸಿ**

- ಕುಟುಂಬ ಯೋಜನೆ
- ಮಹಿಳಾ ಕಲ್ಯಾಣ ಯೋಜನೆಗಳು
- ಪ್ರಚಾರ ಮತ್ತು ಜಾಹಿರಾತು
- ಜನಸಂಖ್ಯಾ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು

**8. ಅಧಿಕ ಜನಸಾಂದ್ರತೆಗೆ ಕಾರಣಗಳಾವುವು? / ಉತ್ತರದ ಮೈದಾನಗಳು ಅಧಿಕ ಜನಸಾಂದ್ರತೆ ಹೊಂದಿವೆ. ಏಕೆ?**

- ಫಲವತ್ತಾದ ಮಣ್ಣು
- ನೀರಾವರಿ ಸೌಲಭ್ಯ
- ಸಾರಿಗೆ-ಸಂಪರ್ಕಗಳ ಅಭಿವೃದ್ಧಿ.

**9. ಭಾರತದ ಕೆಲವು ಭಾಗಗಳಲ್ಲಿ ಕಡಿಮೆ ಜನ ಸಾಂದ್ರತೆಗೆ ಕಾರಣಗಳನ್ನು ವಿವರಿಸಿ.**

- ಪರ್ವತ
- ಬೆಟ್ಟ ಗುಡ್ಡಗಳ ಭಾಗಗಳು
- ಅರಣ್ಯ ಪ್ರದೇಶ
- ಕನಿಷ್ಠ ಉಷ್ಣಾಂಶವುಳ್ಳ ಅಥವಾ ಅರೆಮರುಭೂಮಿ ವಾಯುಗುಣಗಳು

**10. ಜನಸಂಖ್ಯೆ ಹಂಚಿಕೆಯನ್ನು ನಿಯಂತ್ರಿಸುವ ಅಂಶಗಳು ಯಾವುವು?**

- ಮೇಲ್ಮೈ ಲಕ್ಷಣಗಳು
- ವಾಯುಗುಣ
- ಸಂಪನ್ಮೂಲಗಳು
- ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು
- ನೀರಿನ ಪೂರೈಕೆ

## 1. ಅಭಿವೃದ್ಧಿ

**1. ಆರ್ಥಿಕ ಅಭಿವೃದ್ಧಿಯ ಒಳಗೊಂಡಿರುವ ಮೂರು ಅಂಶಗಳಾವುವು?**

- ಅಭಿವೃದ್ಧಿಯು ಒಂದು ಪ್ರಕ್ರಿಯೆ
- ನೈಜ ರಾಷ್ಟ್ರೀಯ ವರಮಾನದ ಹೆಚ್ಚಳ
- ದೀರ್ಘಾವಧಿ ಹೆಚ್ಚಳ

**2. ಅನಾಭಿವೃದ್ಧಿ ದೇಶಗಳ ಲಕ್ಷಣಗಳಾವುವು?**

- ಒಟ್ಟಾರೆ ಉತ್ಪಾದನೆ ಕಡಿಮೆಯಿರುತ್ತದೆ.
- ಅಧಿಕ ಜನಸಂಖ್ಯೆ
- ತಲಾ ವರಮಾನವು ಕಡಿಮೆ ಇರುತ್ತದೆ.

**3. ತಲಾ ವರಮಾನದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸೂಕ್ತವಲ್ಲ. ಸಮರ್ಥಿಸಿ.**

- ತಲಾವರಮಾನ ಜನರ ನಡುವಿನ ವರಮಾನ ಹಂಚಿಕೆಯನ್ನು ತೋರಿಸುವುದಿಲ್ಲ.
- ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.

**4. ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ. ಏಕೆ?**

- ರಾಷ್ಟ್ರೀಯ ವರಮಾನವು ದೇಶದ ಎಲ್ಲ ಜನರ ಒಟ್ಟು ವರಮಾನವಾಗಿದೆ
- ರಾಷ್ಟ್ರೀಯ ವರಮಾನದ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.
- ಆದ್ದರಿಂದ ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ.

**5. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೇಗೆ ಅಳೆಯಲಾಗುತ್ತಿದೆ?**

- ವ್ಯಕ್ತಿಗಳ ಜೀವಿತಾವಧಿ
- ಸಾಕ್ಷರತೆಯ ಪ್ರಮಾಣ
- ತಲಾ ವರಮಾನ
- ಈ ಮೂರು ಸೂಚಿಗಳ ಸರಾಸರಿಯ ಮೂಲಕ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಅಳೆಯುತ್ತಾರೆ.

**6. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.**

- ಭಾರತದಲ್ಲಿ ನಿರೀಕ್ಷಿತ ಜೀವಿತಾವಧಿ ಕಡಿಮೆಯಿದೆ.
- ಸರಾಸರಿ ಶಾಲಾ ಕಲಿಕೆಯ ಅವಧಿ ಕಡಿಮೆಯಿದೆ.
- ತಲಾ ವರಮಾನ ಕಡಿಮೆಯಿದೆ.
- ಆದ್ದರಿಂದ ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇದೆ.

**7. ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು?**

- ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು
- ಮಹಿಳೆಯರ ಹಿಂಸೆಯನ್ನು ತಡೆಗಟ್ಟಲು ಕಾನೂನುಗಳನ್ನು ಜಾರಿಗೊಳಿಸುವುದು
- ಸಮಾನ ವೇತನ ನೀಡುವುದು
- ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದು

**8. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ.**

- ಹಣ ಉಳಿತಾಯಕ್ಕೆ ಸಹಾಯಕವಾಗಿವೆ.
- ಸ್ವಂತ ವ್ಯವಹಾರ ಆರಂಭಿಸಬಹುದು.
- ಬ್ಯಾಂಕಿನ ಜೊತೆ ವ್ಯವಹರಿಸುವ ಜ್ಞಾನ ಲಭಿಸುತ್ತದೆ.
- ಮಹಿಳೆಯರು ತಮ್ಮ ವರಮಾನ ಹೆಚ್ಚಿಸಿಕೊಳ್ಳಲು ಸಹಾಯಕವಾಗಿವೆ.
- ಇವುಗಳಿಂದ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

## 3. ವ್ಯವಹಾರದ ಜಾಗತೀಕರಣ

**1. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ ?**

- ಸರಕು ಮತ್ತು ಸೇವೆಗಳ ಗಡಿಯಾಚಿನ ಚಲನೆಗೆ ಸಹಾಯಕವಾಗಿದೆ
- ಬಂಡವಾಳದ, ತಾಂತ್ರಿಕತೆಯ ಮತ್ತು ಮಾಹಿತಿಯ ಅಂತರರಾಷ್ಟ್ರೀಯ ಹರಿವು.
- ಇಡೀ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸುತ್ತದೆ.
- ವಿಶ್ವದ ಯಾವುದೇ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಉತ್ಪಾದಿಸುವುದು.

**2. ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು ಯಾವುವು?**
- ಆಧುನಿಕ ಸಂಪರ್ಕಜಾಲ ಹಾಗೂ ಸಂಚಾರ ಸೌಲಭ್ಯಗಳು
- ಅಂತರರಾಷ್ಟ್ರೀಯ ಬಂಡವಾಳ ಮತ್ತು ವ್ಯಾಪಾರವನ್ನು ಪ್ರೋತ್ಸಾಹಿಸುವುದು.
- ಆಮದು ಮತ್ತು ರಫ್ತುಗಳ ಸುಂಕಗಳನ್ನು ನಿರ್ಮೂಲನ ಮಾಡಿ ಮುಕ್ತ ವಲಯಗಳನ್ನು ಸೃಷ್ಟಿಸುವುದು.
- ಕಂಟೈನರ್ ಸೇವೆಯ ಅಳವಡಿಕೆಯಿಂದ ಸಾರಿಗೆ ವೆಚ್ಚವನ್ನು ಕಡಿಮೆ ಮಾಡುವುದು.
- ಬಂಡವಾಳ ಹತೋಟಿಯನ್ನು ಕಡಿಮೆಗೊಳಿಸುವುದು ಅಥವಾ ನಿರ್ಮೂಲ ಮಾಡುವುದು.
- ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹ ದನ ಸೃಷ್ಟಿಸುವುದು.

**3. ಜಾಗತೀಕರಣದ ಮುಖ್ಯ ಲಕ್ಷಣಗಳಾವುವು?**
- ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
- ಬಂಡವಾಳದ ಹೂಡಿಕೆಯನ್ನು ಹೆಚ್ಚಿಸುತ್ತದೆ.
- ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳನ್ನು ಸೃಷ್ಟಿಸುತ್ತದೆ.
- ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.
- ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ.
- ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.

**4. ಜಾಗತೀಕರಣದ ಅನುಕೂಲತೆಗಳು (ಸಕಾರಾತ್ಮಕ ಪರಿಣಾಮಗಳು) ಯಾವುವು?**
- ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ
- ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯ ಮಾಡುತ್ತದೆ.
- ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.
- ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
- ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯ
- ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತದೆ.
- ದೇಶಗಳ ನಡುವೆ ಸಾಮರಸ್ಯ ಉಂಟಾಗಲು ಸಾಧ್ಯವಾಗುತ್ತದೆ.

**5. ಜಾಗತೀಕರಣವು ಪರಿಸರದ ಅವನತಿಗೆ ಹೇಗೆ ಕಾರಣವಾಗಿದೆ. /ಜಾಗತೀಕರಣದಿಂದ ಪರಿಸರದ ಮೇಲಾಗುವ ಪರಿಣಾಮಗಳು.**
- ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುತ್ತವೆ.
- ಕೈಗಾರಿಕಾ ತ್ಯಾಜ್ಯಗಳು ಶೇಖರಣೆಯಾಗಿ ಮಾಲಿನ್ಯವು ಬೆಳೆಯುತ್ತದೆ.
- ನೈಸರ್ಗಿಕ ಸಂಪನ್ಮೂಲಗಳ ಬಳಕೆಯಿಂದ ಮಾಲಿನ್ಯವಾಗುತ್ತದೆ

**6. ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು ಯಾವುವು?**
- ನೀತಿಬಾಹಿರ ಪದ್ಧತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಡಿಗೆ ಬರುವ ಸಾಧ್ಯತೆ ಇದೆ.
- ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗುಲಾಮಿತನ ಹಾಗೂ ಬಾಲಕಾರ್ಮಿಕ ಪದ್ಧತಿಗಳು ಉಂಟಾಗುವ ಸಾಧ್ಯತೆ ಇದೆ.
- ಜಾಗತೀಕರಣವು ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯವಾಗುತ್ತದೆ.
- ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ
- ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.
- ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ.
- ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉತ್ಪಾದನೆ ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ.

**7. ಜಾಗತೀಕರಣದಿಂದ ಸಾಂಪ್ರದಾಯಿಕ ಆಹಾರ ಸೇವನೆಯ ಮೇಲಾದ ಪರಿಣಾಮವೇನು ?**
- ಶ್ರೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡುತ್ತವೆ.
- ಉದಾ : ಕೆ.ಎಫ್.ಸಿ. ಮ್ಯಾಕಡೊನಾಲ್ಡ್
- ಪ್ರಯೋಜನಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗುತ್ತದೆ
- ಜನರ ಆರೋಗ್ಯದ ಅವನತಿ ಉಂಟಾಗಿ ಅನೇಕ ರೋಗಗಳಿಗೆ ಕಾರಣವಾಗುತ್ತದೆ.
- ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.

**8. ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳು ಯಾವುವು?**
- ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು.
- ಮುಕ್ತ ಹಾಗೂ ಸ್ವತಂತ್ರ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು.
- ವಿವಿಧ ದೇಶಗಳ ನಡುವಿನ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.
- ಅಂತರರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವುದು.
- ಹಿಂದುಳಿದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

## 4. ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**1. ಬಳಕೆದಾರರ ಶೋಷಣೆಗೆ ಕಾರಣಗಳು ಯಾವುವು?**
- ಮಧ್ಯವರ್ತಿಗಳ ಹಾವಳಿ
- ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿರುವುದು
- ಗ್ರಾಹಕ ಮತ್ತು ಪೂರೈಕೆದಾರರ ನಡುವೆ ನೇರ ವ್ಯವಹಾರ ಇಲ್ಲದಿರುವುದು
- ಮಧ್ಯವರ್ತಿಗಳೇ ಬೆಲೆಯನ್ನು ನಿರ್ಧರಿಸುವುದು

**2. ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳಾವುವು?**
- ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.
- ಗುಣಮಟ್ಟ, ಅಳತೆ, ತೂಕ, ಬೆಲೆಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರಿಗೆ ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕ ಶಿಕ್ಷಣ ನೀಡಿ ಜನರಲ್ಲಿ ಜಾಗೃತಿ ಮೂಡಿಸುವುದು.

**3. ಗ್ರಾಹಕ ಹಕ್ಕುಗಳಾವುವು?**
- ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು
- ವಸ್ತುಗಳ ಆಯ್ಕೆಯ ಹಕ್ಕು
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು
- ಗ್ರಾಹಕ ಶಿಕ್ಷಣದ ಹಕ್ಕು

4. **ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.**
- ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆ
- ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆ
- ಜಿಲ್ಲಾ ಗ್ರಾಹಕರ ಸಂರಕ್ಷಣಾ ಮಂಡಳಿ

5. **ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು ಯಾವುವು?**
- ದೂರು ಕೊಡುವವನ ಹೆಸರು,ವಿಳಾಸ ಮತ್ತು ದೂರವಾಣಿ ಸಂಖ್ಯೆ
- ದೂರುಕೊಡಬೇಕಾದ ವ್ಯಾಪಾರಿ ಅಥವಾ ಪೂರೈಕೆದಾರನ ಹೆಸರು
- ಯಾವ ವಸ್ತುವಿನಿಂದ ನಷ್ಟವಾಗಿದೆ ಅಥವಾ ಮೋಸವಾಗಿದೆ
- ನಷ್ಟ ಹೊಂದಿರುವ ಮೊಬಲಗು (ಮೊತ್ತ)
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಮತ್ತು ಇದಕ್ಕೆ ಸಂಬಂಧಪಟ್ಟ ರಸೀತಿ ಅಥವಾ ಬಿಲ್ಲು

**************************************************

## 3 ಅಂಕದ ಪ್ರಶ್ನೆಗಳು

### 3. ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

1. **ಬ್ರಿಟಿಷ್‌ರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?**
- ಲಾರ್ಡ್ ಕಾರ್ನ್‌ವಾಲೀಸನು ವ್ಯವಸ್ಥಿತವಾದ ಪೋಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು.
- 'ಸೂಪರಿಡೆಂಟೆಂಟ್ ಆಫ್ ಪೋಲೀಸ್' (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು.
- ಪ್ರತಿ ಜಿಲ್ಲೆಯನ್ನು 'ಠಾಣೆ'ಗಳನ್ನಾಗಿ ವಿಭಜಿಸಲಾಯಿತು.
- ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನಕ್ಕೆ ಒಳಪಡಿಸಲಾಯಿತು.
- ಹಳ್ಳಿಗಳು 'ಚೌಕಿದಾರ'ರ ಅಧೀನದಲ್ಲಿ ಇರುವಂತೆ ಮಾಡಿದನು.
- ಕೊತ್ವಾಲರುಗಳು ಹಳ್ಳಿಗಳಲ್ಲಿ ಅಪರಾಧಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು.
- 1861ರಲ್ಲಿ 'ಪೋಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು.
- ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು.

2. **ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ" ಮಾಡಿತು. ಹೇಗೆ? / ಖಾಯಂ ಜಮೀನ್ದಾರಿ ಪದ್ಧತಿಯನ್ನು ವಿವರಿಸಿ.**
- ಲಾರ್ಡ್ ಕಾರ್ನ್‌ವಾಲೀಸನು ಜಾರಿಗೊಳಿಸಿದನು.
- ಈ ಪದ್ಧತಿಯಲ್ಲಿ ಜಮೀನ್ದಾರನು ಭೂಮಾಲೀಕನಾದನು.
- ಜಮೀನ್ದಾರನು ಪ್ರತಿವರ್ಷವೂ ನಿರ್ದಿಷ್ಟ ಕಂದಾಯದ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು.
- ಭೂಮಾಲೀಕನಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು.
- ಜಮೀನ್ದಾರನು ಸರಕಾರಕ್ಕೆ ಸಲ್ಲಿಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡುತ್ತಿದ್ದರು.
- ಕಂದಾಯವನ್ನು ವಸೂಲಿ ಮಾಡದಿದ್ದರೆ ಸರಕಾರವು ಭೂಮಿಯ ಒಡೆತನವನ್ನು ಕಸಿದುಕೊಳ್ಳುತ್ತಿತ್ತು.
- ಬ್ರಿಟಿಷರು ತಮಗೆ ನೆರವಾಗುವ ಹೊಸ ಜಮೀನ್ದಾರ ವರ್ಗವನ್ನು ಸೃಷ್ಟಿ ಮಾಡಿದರು.
- ರೈತರು, ಕೂಲಿಕಾರ್ಮಿಕರು ಜಮೀನ್ದಾರರಿಂದ ಶೋಷಣೆಗೆ ಒಳಗಾದರು

3. **ರೈತವಾರಿ ಪದ್ಧತಿಯನ್ನು ವಿವರಿಸಿ.**
- ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.
- ಥಾಮಸ್ ಮನ್ರೊ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದನು.
- ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕ ಕಲ್ಪಿಸಲಾಯಿತು.
- ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು.
- ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಸಲ್ಲಿಸಬೇಕಾಯಿತು.
- ಕಂದಾಯವನ್ನು 30ವರ್ಷಗಳ ಅವಧಿಗೆ ನಿರ್ಧರಿಸಲಾಯಿತು.
- ಭೂಕಂದಾಯವನ್ನು ಹೆಚ್ಚಿನ ಮೊತ್ತಕ್ಕೆ ನಿಗದಿಪಡಿಸಿದ್ದರಿಂದ ರೈತರು ಸಂಕಷ್ಟಗಳಿಗೆ ಒಳಗಾದರು.
- ಅತೀವೃಷ್ಟಿ ಅನಾವೃಷ್ಟಿ ಕಾಲದಲ್ಲಿಯೂ ನಿರ್ದಾಕ್ಷಣ್ಯವಾಗಿ ಕಂದಾಯ ವಸೂಲು ಮಾಡಲಾಗುತ್ತಿತ್ತು
- ರೈತರು ಸಾಲದ ಸುಳಿಗೆ ಸಿಲುಕಿದರು.

4. **ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.**
- ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳಿದ್ದವು.
- 'ದಿವಾನಿ ಅದಾಲತ್' ಎಂಬ ನಾಗರೀಕ ನ್ಯಾಯಾಲಯಗಳು
- 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.
- ನಾಗರಿಕ ಪ್ರಕರಣಗಳಿಗೆ ಹಿಂದೂ ಶಾಸ್ತ್ರಗ್ರಂಥಗಳು ಹಾಗೂ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು.
- ಅಪರಾಧ ಪ್ರಕರಣಗಳಿಗೆ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು.
- ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೊಳಿಸಲಾಯಿತು.
- ನಾಗರಿಕ ನ್ಯಾಯಾಲಯಗಳು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.
- ಅಪರಾಧ ನ್ಯಾಯಾಲಯಗಳು 'ಕಾಜಿ'ಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು.

5. **ಬ್ರಿಟಿಷರ ಕಂದಾಯ ನೀತಿಗಳಿಂದುಂಟಾದ ಪರಿಣಾಮಗಳಾವುವು?**
- ರೈತರನ್ನು ಶೋಷಿಸುವ ಹೊಸ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ಜಮೀನ್ದಾರರ ಶೋಷಣೆಯಿಂದ ರೈತರು ಸಂಕಷ್ಟಕ್ಕೆ ಒಳಗಾದರು.
- ಭೂಮಿ ಮಾರಾಟದ ವಸ್ತುವಾಯಿತು.
- ಜಮೀನ್ದಾರರು ಕಂದಾಯವನ್ನು ಸಲ್ಲಿಸಲಾಗದೇ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡಿತು
- ಕೈಗಾರಿಕಾಕರಣದಿಂದ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

6. **ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿ ಮಾಡಿ.**
- ಭಾರತೀಯರು ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯಿತು.
- ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆ ಉಂಟಾಯಿತು.
- ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು.
- ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.

- ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
- ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

7. **ರೆಗ್ಯುಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?**

- ಬಂಗಾಳದ ಪ್ರೆಸಿಡೆನ್ಸಿಯು ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
- ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.
- ಗವರ್ನರ್ ಜನರಲ್ಲನಿಗೆ ಅವುಗಳನ್ನು ನಿಯಂತ್ರಿಸುವ ಅಧಿಕಾರವನ್ನು ನೀಡಿತು.
- ಬಂಗಾಳ ಸರ್ಕಾರದ ಅನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಅಥವಾ ಸಂಧಾನವನ್ನು ನಡೆಸುವಂತಿಲ್ಲ.
- ಕಲ್ಕತ್ತಾದಲ್ಲಿ "ಸುಪ್ರೀಂಕೋರ್ಟ್" ಅನ್ನು ಸ್ಥಾಪಿಸಲಾಯಿತು.
- ಭಾರತದಲ್ಲಿನ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರಲಾಯಿತು.
- ಕಂಪನಿ ನೌಕರರ ಖಾಸಗಿ ವ್ಯಾಪಾರವನ್ನು ನಿಯಂತ್ರಿಸುವುದು.

8. **1833ರ ಚಾರ್ಟರ್ ಕಾಯ್ದೆಯ ನಿಬಂಧನೆಗಳಾವುವು?**

- ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆದನು
- ಭಾರತದ ಎಲ್ಲ ವ್ಯಾಪಾರಿ ಸರಕುಗಳನ್ನು ನಿಯಂತ್ರಿಸುವ ಅಧಿಕಾರವನ್ನು ಗವರ್ನರ್ ಜನರಲ್‌ನು ಪಡೆದನು.
- ಎಲ್ಲ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತೀರ್ಮಾನಿಸುವ ಹಕ್ಕನ್ನು ಹೊಂದಿತ್ತು.
- ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ ಎಂದು ನಿರ್ದೇಶಿಸಿತು.
- ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನನ್ನು ನೇಮಕ ಮಾಡಿಕೊಳ್ಳಬೇಕಾಯಿತು.
- ಬ್ರಿಟಿಷ್ ವ್ಯಾಪರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು.

9. **1935ರ ಭಾರತ ಸರ್ಕಾರದ ಕಾಯ್ದೆ 'ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ. / 1935ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?**

- ಭಾರತದ ಸಂವಿಧಾನ ರಚನೆಗೆ ಬುನಾದಿಯಾಗಿದೆ.
- ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
- ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು ಸ್ಥಾಪಿಸಲಾಯಿತು.
- ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
- ಪ್ರಾಂತ್ಯಗಳಲ್ಲಿ "ದ್ವಿ ಸರಕಾರ" ಪದ್ಧತಿಯನ್ನು ರದ್ದುಗೊಳಿಸಿತು,
- ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
- ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

10. **1919ರ ಭಾರತೀಯ ಪರಿಷತ್ ಕಾಯ್ದೆಯ ನಿಬಂಧನೆಗಳಾವುವು?**

- ಈ ಕಾಯ್ದೆಯನ್ನು ಮಾಂಟೆಗೋ-ಚೆಮ್ಸ್‌ಫರ್ಡ್ ಸುಧಾರಣಾ ಕಾಯ್ದೆ ಎಂದೂ ಕರೆಯುವರು.
- ಪ್ರಾಂತ್ಯಗಳಲ್ಲಿ "ದ್ವಿಸರಕಾರ" ಪದ್ಧತಿಗೆ ಅವಕಾಶ ನೀಡಿತು
- ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಲಾಯಿತು.
- ಭಾರತಕ್ಕೆ ಒಬ್ಬ ಹೈಕಮಿಷನರ್ ನನ್ನು ನೇಮಕ ಮಾಡಲಾಯಿತು.
- ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
- ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.
- "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ವಿಸ್ತರಿಸಲಾಯಿತು.

## 4 ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

1. **ಹೈದರಾಲಿಯು ಹೇಗೆ ಅಧಿಕಾರಕ್ಕೆ ಬಂದನು?**

- ಒಬ್ಬ ಸಾಮಾನ್ಯ ಸೈನಿಕನಾಗಿ ಸೇವೆಗೆ ಸೇರಿ ತನ್ನ ಚಾಣಾಕ್ಷ ರಾಜಕೀಯ ನಡೆಗೆ ಹೆಸರಾಗಿದ್ದನು
- ದೇವನಹಳ್ಳಿ ಮುತ್ತಿಗೆ ಮತ್ತು ಅರ್ಕಾಟಿನ ಸೈನಿಕ ಕಾರ್ಯಾಚರಣೆಯಲ್ಲಿ ಪ್ರವರ್ಧಮಾನಕ್ಕೆ ಬಂದನು.
- ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು.
- ಬಹುಬೇಗನೆ ನವಾಬ್ ಹೈದರಾಲಿಖಾನ್ ಎಂದೂ ಹೆಸರಾದನು.
- ಶಸ್ತ್ರಗಳ ಉಪಯೋಗ ಮತ್ತು ಪ್ರಯೋಗಗಳಲ್ಲಿ ಖ್ಯಾತಿಗಳಿಸಿದನು.
- ಚುರುಕಿನ ಸೈನಿಕ ಕಾರ್ಯಾಚರಣೆಗಳ ಮೂಲಕ ದಳವಾಯಿಗಳ ಬಲ ಕುಂದಿಸಿದನು
- ಅರಸ ಕೃಷ್ಣರಾಜ ಒಡೆಯರವರನ್ನು ಮೂಲೆಗುಂಪಾಗಿಸಿ ಅಧಿಕಾರಕ್ಕೆ ಬಂದನು.

2. **ಎರಡನೆಯ ಆಂಗ್ಲೋ-ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳಾವುವು?**

- ಯುದ್ಧದ ಮಧ್ಯದಲ್ಲಿ ಹೈದರಾಲಿ ಅನಾರೋಗ್ಯದಿಂದ ಮಡಿದನು.
- ಆತನ ಮಗ ಟಿಪ್ಪು ಯುದ್ಧವನ್ನು ಮುನ್ನಡೆಸಿದನು.
- ಹೈದರನ ಮರಣ ಸಂದರ್ಭದಲ್ಲಿ ಮಲಬಾರ್ ಪ್ರಾಂತ್ಯದಲ್ಲಿ ನಡೆದ ಯುದ್ಧದಲ್ಲಿ ಟಿಪ್ಪು ತೊಡಗಿದ್ದನು.
- ಬ್ರಿಟೀಷರು ಬಿದನೂರು ಮತ್ತು ಮಂಗಳೂರನ್ನು ವಶಪಡಿಸಿಕೊಳ್ಳಲು ಹವಣಿಸಿದರು.
- ಟಿಪ್ಪು ಮಂಗಳೂರಿನತ್ತ ಮುನ್ನಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು.
- 'ಮಂಗಳೂರು ಒಪ್ಪಂದ'ದ ಮೂಲಕ ಯುದ್ಧ ಕೊನೆಗೊಂಡಿತು.

3. **ಮೂರನೆಯ ಆಂಗ್ಲೋ-ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳಾವುವು? / ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳು**

- ಬ್ರಿಟೀಷರು ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಿದರು.
- ಶ್ರೀರಂಗಪಟ್ಟಣ ಒಪ್ಪಂದದನ್ವಯ ಮೂರನೆ ಆಂಗ್ಲೋ-ಮೈಸೂರು ಯುದ್ಧ ಕೊನೆಗೊಂಡಿತು.
- ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು
- ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಭರ್ತಿಯಾಗಿ ಕೊಡುವುದು
- ಯುದ್ಧನಷ್ಟ ಭರ್ತಿಗೆ ಗ್ಯಾರಂಟಿಯಾಗಿ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು
- ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆಗೊಳಿಸುವುದು.

4. **ಸುರಪುರ ದಂಗೆಯನ್ನು ವಿವರಿಸಿ. / ವೆಂಕಟಪ್ಪ ನಾಯಕನ ಹೋರಾಟವನ್ನು ವಿವರಿಸಿ**

- ವೆಂಕಟಪ್ಪ ನಾಯಕನನ್ನು ಕರ್ನಾಟಕದಲ್ಲಿ 1857ರ ಕ್ರಾಂತಿಯ ನಾಯಕನೆಂದೂ ಇತಿಹಾಸಕಾರರು ವರ್ಣಿಸಿದ್ದಾರೆ.

- ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂದಿತು.
- ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.
- 1858ರಲ್ಲಿ ಬ್ರಿಟಿಷ್ ಸೈನ್ಯ ಸುರಪುರವನ್ನು ಆಕ್ರಮಿಸಿತು.
- ಬ್ರಿಟಿಷರು ಸುರಪುರ ಕೋಟೆಯನ್ನು ವಶಪಡಿಸಿಕೊಂಡರು.
- ವೆಂಕಟಪ್ಪ ನಾಯಕ ಹೈದರಾಬಾದ್‌ಗೆ ಪಲಾಯನ ಮಾಡಿದನು.
- ಅವನು ತಪ್ಪಿತಸ್ಥನೆಂದು ತೀರ್ಮಾನಿಸಿ ಬ್ರಿಟಿಷರು ಆತನನ್ನು ಸೆರೆಮನೆಗೆ ತಳ್ಳಿದರು.

**5. ಕಿತ್ತೂರಿನ ಬಂಡಾಯವನ್ನು ವಿವರಿಸಿ./ರಾಣಿ ಚೆನ್ನಮ್ಮಳ ಹೋರಾಟ**

- ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಕಾನೂನಿನ ವಿರುದ್ಧ ಕಿತ್ತೂರಿನ ರಾಣಿ ಚೆನ್ನಮ್ಮನ ಹೋರಾಡಿದಳು.
- ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ಪ್ರಾರಂಭಿಸಿದಳು.
- ಥ್ಯಾಕರೆ ದತ್ತು ಮಕ್ಕಳಿಗೆ ಹಕ್ಕನ್ನು ನಿರಾಕರಿಸಿ ಕಿತ್ತೂರನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.
- ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿಮಾಡಿತು.
- ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿ ಕಿತ್ತೂರು ಬ್ರಿಟಿಷರ ವಶವಾಯಿತು
- ಚೆನ್ನಮ್ಮನನ್ನು ಸೆರೆ ಹಿಡಿದು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು.
- ಚೆನ್ನಮ್ಮ ಅಲ್ಲಿಯೇ ಮರಣ ಹೊಂದಿದರು.

**6. ಸಂಗೊಳ್ಳಿ ರಾಯಣ್ಣನ ಹೋರಾಟವನ್ನು ವಿವರಿಸಿ**

- ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು.
- ರಾಯಣ್ಣ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು.
- ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು.
- ಅವನು ಸೈನಿಕರನ್ನು ಸಂಘಟಿಸುತ್ತಾ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು.
- ಆಯಕಟ್ಟಿನ ಸ್ಥಳಗಳಲ್ಲಿ ಗುಪ್ತ ಸಭೆಗಳನ್ನು ನಡೆಸಿ ಯೋಜನೆಗಳನ್ನು ರೂಪಿಸಿಕೊಂಡನು.
- ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದು ಅವನ ಉದ್ದೇಶವಾಗಿತ್ತು.
- ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರು, ದೇಸಾಯಿ ಹಾಗೂ ಅಮಲ್ದಾರ ಕೃಷ್ಣರಾಯ ಒಂದು ಸಂಚನ್ನು ರೂಪಿಸಿದರು.
- ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷರು ಬಂಧಿಸಿ 1831ರಲ್ಲಿ ನಂದಗಡದಲ್ಲಿ ಗಲ್ಲಿಗೇರಿಸಿದರು.

**7. ಬ್ರಿಟಿಷರ ವಿರುದ್ಧ ದೋಂಡಿಯಾ ವಾಘನ ಹೋರಾಟ ವಿವರಿಸಿ.**

- ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬ್ರಿಟಿಷರ ವಿರುದ್ಧ ಬಂಡಾಯದ ಬಾವುಟವನ್ನು ಹಾರಿಸಿದನು.
- ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು.
- ದೋಂಡಿಯಾನ ಶಿವಮೊಗ್ಗ, ಹೊನ್ನಾಳಿ, ಹರಿಹರಗಳ ಮೇಲೆ ಬ್ರಿಟಿಷ್ ಸೈನ್ಯ ಆಕ್ರಮಣ ನಡೆಸಿತು.
- ದೋಂಡಿಯಾ ಶಿಕಾರಿಪುರವನ್ನು ಕಳೆದುಕೊಂಡನು.
- ಹರಿಹರ, ಚಿತ್ರದುರ್ಗ, ಶಿಕಾರಿಪುರ, ಸವಣೂರು, ಕಿತ್ತೂರು ಮುಂತಾದ ಕಡೆ ಬ್ರಿಟಿಷರ ಸೈನ್ಯ ಆತನನ್ನು ಹಿಂಬಾಲಿಸಿತು.
- ಶಿಕಾರಿಪುರದ ಕೋಟೆಯನ್ನು ಪುನಃ ಗೆದ್ದುಕೊಂಡ ದೋಂಡಿಯಾನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಚದುರಿಸಿತು.
- ಬ್ರಿಟಿಷರು ಯಾಪಲಪೆರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಆತನನ್ನು ಹತ್ಯೆಗೈದರು.

**8. ಪುಟ್ಟಬಸಪ್ಪನ ಹೋರಾಟವನ್ನು ವಿವರಿಸಿ.**

- ಪುಟ್ಟಬಸಪ್ಪ 'ಅಮರಸುಳ್ಯ' ಬಂಡಾಯದ ನಾಯಕತ್ವವನ್ನು ವಹಿಸಿಕೊಂಡನು.
- ಬೆಳ್ಳಾರೆಯಲ್ಲಿದ್ದ ಸರ್ಕಾರಿ ಕಛೇರಿಯನ್ನು ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದರು.
- ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನೋರ್ವನ ಹತ್ಯೆಯಿಂದ ಪುಟ್ಟಬಸಪ್ಪನ ಜನಪ್ರಿಯನಾದನು
- ಬಂಟ್ವಾಳದ ಜೈಲು ಮತ್ತು ಖಜಾನೆ ಲೂಟಿ ಮಾಡಿದರು.
- ಇದನ್ನು ಹತ್ತಿಕ್ಕಲು ಬ್ರಿಟಿಷರು ಕಣ್ಣಾನೂರು ಮತ್ತು ಬಾಂಬೆಯ ಸೈನ್ಯವನ್ನು ಅಪೇಕ್ಷಿಸಿದರು.
- ಇದನ್ನು ಅರಿತ ಪುಟ್ಟಬಸಪ್ಪ ಮತ್ತು ಆತನ ಸಂಗಡಿಗರು ಸುಳ್ಯಕ್ಕೆ ಪಲಾಯನ ಮಾಡಿದರು.
- ಬ್ರಿಟಿಷ್ ಸೈನ್ಯ ಆತನನ್ನು ಸೆರೆಹಿಡಿದು ಗಲ್ಲಿಗೇರಿಸಿದರು.

**9. ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.**

- ಬ್ರಿಟಿಷರು ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು.
- ಬೇಡರು ಬೇಟೆಯಾಡಲು ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ.
- ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳಲು ಬ್ರಿಟಿಷರ ವಿರುದ್ಧ ಸಿಡಿದೆದ್ದರು.
- ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು.
- ಇವರ ಬಂಡಾಯವನ್ನು ಹತ್ತಿಕ್ಕಲು ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು.
- ಬಂಡಾಯವೆದ್ದ ಬೇಡರನ್ನು ನಿಷ್ಕಾರುಣ್ಯವಾಗಿ, ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು.
- ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.

## 5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು (2/3 ಅಂಕ)

**1. 'ಬಿಳಿಯನ ಮೇಲಿನ ಹೊರೆ' ಸಿದ್ಧಾಂತವನ್ನು ವಿವರಿಸಿ.**

- ಬ್ರಿಟಿಷರು ತಮ್ಮನ್ನು ನಾಗರಿಕರು ಎಂದು ಚಿತ್ರಿಸಿಕೊಂಡರು.
- ಭಾರತೀಯರನ್ನು ನಾಗರಿಕರನ್ನಾಗಿ ಮಾಡಲು ಭಾರತಕ್ಕೆ ಬಂದಿದ್ದೇವೆ ಎಂದು ಪ್ರಚಾರಪಡಿಸಿದರು
- ಇದೇ 'ಬಿಳಿಯನ ಮೇಲಿನ ಹೊರೆ' ಸಿದ್ಧಾಂತ
- ಈ ಹಿನ್ನೆಲೆಯಲ್ಲಿ ಬ್ರಿಟಿಷರು ತಮ್ಮ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಯೋಜನೆ ಹೊಂದಿದ್ದರು.

**2. ಬ್ರಹ್ಮಸಮಾಜದ ಪ್ರಮುಖ ಅಂಶಗಳಾವುವು?**

- ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು.
- ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು.
- ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು.
- ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸುವುದು.

- ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬಹುದು.

**3. ರಾಜಾ ರಾಮಮೋಹನ್‌ರಾಯರ ಕೊಡುಗೆಗಳನ್ನು ತಿಳಿಸಿ**

- ಕಲ್ಕತ್ತಾದಲ್ಲಿ 'ಆತ್ಮೀಯ ಸಭಾ' ಪ್ರಾರಂಭಿಸಿದರು.
- 1828ರಲ್ಲಿ 'ಬ್ರಹ್ಮಸಮಾಜ'ವನ್ನು ಪ್ರಾರಂಭಿಸಿದರು.
- ಜಾತಿಪದ್ಧತಿ ಮತ್ತು ಮೂಢನಂಬಿಕೆಗಳಿಂದ ಹಿಂದೂ ಧರ್ಮವನ್ನು ಶುದ್ಧಿಗೊಳಿಸುವುದು ಇವರ ಕಾಳಜಿಯಾಗಿತ್ತು.
- ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ ಸತಿಪದ್ಧತಿಯ ಆಚರಣೆಯನ್ನು ನಿಷೇಧಿಸಲಾಯಿತು.
- ಬಂಗಾಳಿ ಭಾಷೆಯಲ್ಲಿ 'ಸಂವಾದ ಕೌಮುದಿ' ಪತ್ರಿಕೆ ಆರಂಭಿಸಿದರು.

**4. ಯುವಬಂಗಾಳಿ ಚಳವಳಿಯನ್ನು ವಿವರಿಸಿ. / ಹೆನ್ರಿ ವಿವಿಯನ್ ಡಿರೇಜಿಯೋ ಅವರ ಸುಧಾರಣೆಗಳಾವುವು?**

- ಇದನ್ನು ಪ್ರಾರಂಭಿಸಿದವರು ಹೆನ್ರಿ ವಿವಿಯನ್ ಡಿರೇಜಿಯೋ.
- ತಮ್ಮ ವಿದ್ಯಾರ್ಥಿಗಳು ಮತ್ತು ಸಹವರ್ತಿಗಳಲ್ಲಿ ವೈಜ್ಞಾನಿಕ ಆಲೋಚನಾ ಕ್ರಮವನ್ನು ತುಂಬುವ ಪ್ರಯತ್ನವನ್ನು ಮಾಡಿದರು.
- ಹೊಸ ಶಿಕ್ಷಣ ಕ್ರಮವನ್ನು ಜಾರಿಗೊಳಿಸಲು ಬೇಕಾದ ಪಠ್ಯಪುಸ್ತಕಗಳನ್ನು ರೂಪಿಸುವಲ್ಲಿ ವಿಶೇಷ ಶ್ರಮವಹಿಸಿದರು.
- ಪ್ರಶ್ನಿಸುವ, ವೈಜ್ಞಾನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಳ್ಳಲು ಬೇಕಾದ ಪಠ್ಯಗಳನ್ನು ತಂದರು.
- ಮಹಿಳಾ ಹಕ್ಕುಗಳ ಪ್ರತಿಪಾದಕರಾಗಿದ್ದರು
- ಜಾತಿಪ್ರೇರಿತ ಶೋಷಣೆಯ ವಿರೋಧಿಯಾಗಿದ್ದರು.

**5. ದಯಾನಂದ ಸರಸ್ವತಿಯವರ ವಿಚಾರಗಳನ್ನು(ಸುಧಾರಣೆಗಳು)ತಿಳಿಸಿ**

- ತಮ್ಮ ಆಲೋಚನಾ ಕ್ರಮವನ್ನು 'ಸತ್ಯಾರ್ಥ ಪ್ರಕಾಶ' ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.
- ಆಧುನಿಕ ಭಾರತದ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ ಎಂದರು
- ಅವರು ಘೋಷಿಸಿದ ವಾಕ್ಯ 'ವೇದಗಳಿಗೆ ಮರಳಿ'
- ವೇದಗಳು ಮಾತ್ರ ಪ್ರಮಾಣೀಕೃತ ಎಂಬುದನ್ನು ಸಾರಿದರು.
- 'ಶುದ್ಧಿ' ಚಳವಳಿಯನ್ನು ಆರಂಭಿಸಿದ್ದರು.

**6. ಆರ್ಯ ಸಮಾಜದ ಉದ್ದೇಶಗಳನ್ನು ತಿಳಿಸಿ**

- ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸುವುದು.
- ಬಹುಪತ್ನಿತ್ವ ಮತ್ತು ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು.
- ಸ್ತ್ರೀ ಮತ್ತು ಪುರುಷರು ಸಮಾನರು.
- ವೇದಗಳು ಮಾತ್ರ ಶ್ರೇಷ್ಠ.
- ಪ್ರಾಚೀನ ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡಬೇಕು.

**7. ಸತ್ಯಶೋಧಕ ಸಮಾಜದ ಸುಧಾರಣೆಗಳಾವುವು? / ಹೊಸ ಸಮಾಜವನ್ನು ನಿರ್ಮಿಸುವ ಪ್ರಯತ್ನಗಳಲ್ಲಿ ಫುಲೆ ದಂಪತಿಗಳ ಪ್ರಯತ್ನ ಮುಖ್ಯವಾದದ್ದು. ಸಮರ್ಥಿಸಿ**

- ಹಿಂದುಳಿದ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವುದಕ್ಕೆ ಪ್ರಯತ್ನಿಸಿದರು.
- ಫುಲೆಯವರು ತಮ್ಮ ಬಾವಿಯಲ್ಲಿ ಅಸ್ಪೃಶ್ಯರು ನೀರು ಸೇದಿಕೊಳ್ಳಲು ಅವಕಾಶವನ್ನು ಕೊಟ್ಟರು
- ಶಾಲೆಗಳನ್ನು ಪ್ರಾರಂಭಿಸಿ ಶೂದ್ರರಿಗೆ ಮತ್ತು ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ನೀಡಿದರು.
- ಸಾವಿತ್ರಿಬಾಯಿ ಫುಲೆಯವರು ಹೆಣ್ಣುಮಕ್ಕಳಿಗೆ ವಸತಿ ನಿಲಯ ಸ್ಥಾಪಿಸಿದರು
- ಸಮಾನತೆಯ ಆಶಯದ ತಳಹದಿಯ ಮೇಲೆ ಹೊಸ ಸಮಾಜವನ್ನು ನಿರ್ಮಿಸುವ ಗುರಿ ಹೊಂದಿದ್ದರು

**8. ಪ್ರಾರ್ಥನಾ ಸಮಾಜದ ಸುಧಾರಣೆಗಳನ್ನು ತಿಳಿಸಿ.**

- ಸ್ತ್ರೀಯರಿಗೆ ಶಿಕ್ಷಣ ನೀಡುವುದು.
- ನಿರ್ಗತಿಕರಿಗೆ ಬದುಕುವ ಆಸರೆಯನ್ನು ಕಲ್ಪಿಸುವುದು.
- ಬಾಲ್ಯವಿವಾಹ ತಡೆಯುವುದು.
- ವಿಧವೆಯರನ್ನು ತಿರಸ್ಕೃತ ಬದುಕಿನಿಂದ ಹೊರತರುವುದು.

**9. ಸರ್ ಸಯ್ಯದ್ ಅಹಮದ್ ಖಾನ್ ರ ಸುಧಾರಣೆಗಳಾವುವು? /ಆಲಿಘರ್ ಸುಧಾರಣಾ ಚಳುವಳಿಯನ್ನು ವಿವರಿಸಿ**

- ಸಂಪ್ರದಾಯ, ಮೌಢ್ಯಗಳು, ಅಜ್ಞಾನ ಮತ್ತು ಅವೈಜ್ಞಾನಿಕ ಮನೋಧರ್ಮದ ವಿರುದ್ಧ ಹೋರಾಡಿದರು.
- ತೆರೆದ ಮನಸ್ಸು ಇಲ್ಲದಿದ್ದರೆ ಸಾಮಾಜಿಕ ಮತ್ತು ಬೌದ್ಧಿಕ ಪ್ರಗತಿ ಸಾಧ್ಯವಿಲ್ಲವೆಂದರು.
- ಪರದಾ ಪದ್ಧತಿಯನ್ನು ವಿರೋಧಿಸಿದರು
- ಮುಸ್ಲಿಂ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು ಎಂದು ಸಾರಿದರು.
- ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸಿದರು
- ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಐಕ್ಯತೆಯನ್ನು ಬಯಸಿದರು.

**10. ಸ್ವಾಮಿ ವಿವೇಕಾನಂದರ ವಿಚಾರಗಳನ್ನು ತಿಳಿಸಿ**

- ಮೊದಲು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು
- ಅವರೇ ಸುಧಾರಣೆಯನ್ನು ಬಯಸುತ್ತಾರೆ.
- ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು.
- ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು.
- ಯಾರ ಆತ್ಮ ಬಡವರಿಗಾಗಿ ಮಿಡಿಯುವುದೋ ಅವನೇ ಮಹಾತ್ಮ.
- ಜಾತೀಯತೆ, ಅಸ್ಪೃಶ್ಯತೆ, ಶೋಷಣೆಯನ್ನು ವಿರೋಧಿಸಿರು.

**11. ಥಿಯೋಸಾಫಿಕಲ್ ಸೊಸೈಟಿಯ ಸುಧಾರಣೆಗಳಾವುವು?**

- ಹಿಂದು ಧರ್ಮಕ್ಕೆ ಸೇರಿದ ಗ್ರಂಥಗಳ ಮೂಲತತ್ವಗಳನ್ನು ಪ್ರಚುರಪಡಿಸಿತು.
- ಭಾರತದ ಧಾರ್ಮಿಕ ಮತ್ತು ದಾರ್ಶನಿಕ ಪರಂಪರೆಗಳನ್ನು ಅಧ್ಯಯನ ಮಾಡಿತು
- ಹಾಗಾಗಿಯೇ ಈ ಸೊಸೈಟಿಯು ನಡೆಸಿದ ಪ್ರಯತ್ನಗಳನ್ನು ಹಿಂದೂ ಧರ್ಮದ ಪುನರುತ್ಥಾನ ಚಳವಳಿ ಎಂದು ಕರೆಯಲಾಗಿದೆ.

**12. ಅನಿ ಬೆಸೆಂಟರ ಕೊಡುಗೆಗಳಾವುವು?**

- 'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದ ಮಾಡಿದರು.
- ಸೆಂಟ್ರಲ್ ಹಿಂದೂ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು.
- 'ನ್ಯೂ ಇಂಡಿಯಾ' ಮತ್ತು 'ಕಾಮನ್ ವೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.
- 1916ರಲ್ಲಿ ' 'ಹೋಂರೂಲ್' ಚಳವಳಿ ಪ್ರಾರಂಭಿಸಿದರು

**13. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.**

- 'ಆತ್ಮಗೌರವ ಚಳವಳಿ'ಯನ್ನು ಆರಂಭಿಸಿದರು
- ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ತಿರಸ್ಕರಿಸಿದರು.
- ತಮಿಳುಭಾಷೆಯನ್ನು ದ್ರಾವಿಡರ ಭಾಷೆಯೆಂದರು.
- ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ವಿರೋಧಿಸಿದರು.
- ಪೆರಿಯಾರ್ 1939ರಲ್ಲಿ ಜಸ್ಟೀಸ್ ಪಕ್ಷದ ಅಧ್ಯಕ್ಷರಾದರು.
- "ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಹುಟ್ಟುಹಾಕಿದರು. '
- ಜಸ್ಟೀಸ್' ಪತ್ರಿಕೆಯನ್ನು ಹುಟ್ಟುಹಾಕಿದರು.

**14. ಶ್ರೀ ನಾರಾಯಣಗುರು ಅವರ ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಸುಧಾರಣೆಗಳನ್ನು ತಿಳಿಸಿ**
- ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ ಇವರ ಉದ್ದೇಶವಾಗಿತ್ತು.
- ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣವೇ ಈ ಸಂಘಟನೆಯ ಉದ್ದೇಶವಾಗಿತ್ತು.
- ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು ಅವರ ಆಶಯ
- ಕೆಳಸಮುದಾಯಗಳ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.
- ವೈಕಂ ಸತ್ಯಾಗ್ರಹವೆಂಬ ದೇವಾಲಯ ಪ್ರವೇಶ ಚಳವಳಿಯನ್ನು ನಡೆಸಿದರು.
- ಗುರುವಾಯೂರು ದೇವಸ್ಥಾನ ಪ್ರವೇಶ ಚಳವಳಿಯನ್ನು ನಡೆಸಿದರು

## 6. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**1. 1857ರ ದಂಗೆಗೆ ರಾಜಕೀಯ ಕಾರಣಗಳು ಯಾವುವು?**
- 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯಿಂದ ಹಲವು ದೇಶೀ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಂಡರು
- ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು.
- ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜಪದವಿಗಳನ್ನು ರದ್ದುಪಡಿಸಿದರು.
- ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಪದಚ್ಯುತಗೊಳಿಸಿದರು.
- ಇವರನ್ನು ಅವಲಂಬಿಸಿದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**2. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು?**
- ಹಲವು ದೇಶೀ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಂಡರು
- ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು.

**3. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು?**
- ಭಾರತದ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.
- ಭಾರತದಲ್ಲಿದ್ದ ಕರಕುಶಲಗಾರರು ನಿರುದ್ಯೋಗಿಗಳಾದರು.
- ಗೃಹಕೈಗಾರಿಕೆಗಳು ನಷ್ಟ ಅನುಭವಿಸಿ ಶಿಥಿಲಗೊಂಡವು.
- ಜಮೀನ್ದಾರರು ಕೃಷಿಕರನ್ನು ಶೋಷಿಸುತ್ತಿದ್ದನು.
- ಕೃಷಿಕರು ಆರ್ಥಿಕಸಂಕಷ್ಟ ಅನುಭವಿಸಿದರು.

**4. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳು ಯಾವುವು?**
- ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು.
- ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು.
- ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು.
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**5. 1857ರ ದಂಗೆಗೆ ಸೈನಿಕ ಕಾರಣಗಳು ಯಾವುವು?**
- ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿ ಗಂಭೀರವಾಗಿತ್ತು.
- ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.
- 'ರಾಯಲ್ ಎನ್‌ಫೀಲ್ಡ್' ಬಂದೂಕುಗಳ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ

**6. ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?**
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು
- 'ರಾಯಲ್ ಎನ್‌ಫೀಲ್ಡ್' ಬಂದೂಕುಗಳ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ.

**7. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?**
- ಸೈನಿಕರಿಗೆ 'ರಾಯಲ್ ಎನ್‌ಫೀಲ್ಡ್' ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು.
- ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು.
- ಹಿಂದುಗಳಿಗೆ ಹಸು ಪವಿತ್ರ ವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.
- ಈ ವದಂತಿಯು ದಂಗೆಗೆ ತಕ್ಷಣದ ಕಾರಣವಾಯಿತು.
- ತುಪಾಕಿಯನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಆದೇಶಿಸಿದಾಗ ತಿರಸ್ಕರಿಸಿ ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು.

**8. ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.**
- ಇದು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ.
- ಇದು ಯೋಜಿತ ದಂಗೆಯಾಗಿರಲಿಲ್ಲ
- ಭಾರತೀಯ ಸೈನಿಕರಲ್ಲಿ ಒಗ್ಗಟ್ಟಿರಲಿಲ್ಲ.
- ದಂಗೆಗೆ ಸೂಕ್ತ ಮಾರ್ಗದರ್ಶನ & ಸಂಘಟನೆಯ ಕೊರತೆ ಇತ್ತು.
- ಸೂಕ್ತ ಸೇನಾ ನಾಯಕತ್ವದ ಕೊರತೆ
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.

**9. 1857ರ ದಂಗೆಯ ಪರಿಣಾಮಗಳು ಯಾವುವು?**
- ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು.
- ಬ್ರಿಟನ್ ಸಾಮ್ರಾಜ್ಞಿಗೆ ಭಾರತದ ಆಡಳಿತವು ವರ್ಗಾವಣೆಗೊಂಡಿತು.
- ಭಾರತದ ವ್ಯವಹಾರವನ್ನು ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
- 1858ರಲ್ಲಿ ಬ್ರಿಟನ್ ರಾಣಿಯು ಒಂದು ಘೋಷಣೆ ಹೊರಡಿಸಿದರು.
- ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು.
- ಭಾರತೀಯರ ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು.

**10. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?**
- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ
- ಕಾನೂನಿನ ಮುಂದೆ ಸಮಾನತೆ.

## 9. ಸ್ವಾತಂತ್ರ್ಯೋತ್ತರ ಭಾರತ

1. **ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**
➢ ಮತೀಯ ಗಲಭೆಗಳು
➢ ನಿರಾಶ್ರಿತರ ಸಮಸ್ಯೆ
➢ ಸಂವಿಧಾನವನ್ನು ರೂಪಿಸಿಕೊಳ್ಳುವ ಸವಾಲು
➢ ದೇಶಿ ಸಂಸ್ಥಾನಗಳ ವಿಲೀನೀಕರಣ
➢ ಹೊಸ ಸರ್ಕಾರ ರಚನೆ
2. **ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**
➢ ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳಲ್ಲ ನಿರಾಶ್ರಿತರಿಗೆ ನೆಲೆ ಕಲ್ಪಿಸಲಾಗಿದೆ.
➢ ನಿರಾಶ್ರಿತರಿಗೆ ಅವಶ್ಯಕವಾದ ಅನುಕೂಲಗಳನ್ನು ಕಲ್ಪಿಸಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಸಹಾಯಮಾಡಿದವು.
➢ ಬಾಂಗ್ಲಾ ನಿರಾಶ್ರಿತರಿಗೆ ಬಂಗಾಳದಲ್ಲಿ ನೆಲೆ ಕಲ್ಪಿಸಲಾಗಿದೆ.
➢ ಬೈಲಕುಪ್ಪೆಯಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ 3000 ಎಕರೆ ಜಮೀನನ್ನು ನೀಡಲಾಗಿದೆ.
3. **ವಲ್ಲಭಭಾಯಿ ಪಟೇಲರು 'ಉಕ್ಕಿನ ಮನುಷ್ಯ' ಎಂದು ಖ್ಯಾತರಾಗಿದ್ದಾರೆ. ಸಮರ್ಥಿಸಿ.**
➢ ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು.
➢ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ವಿಲೀನಗೊಳಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು.
➢ ಆದ್ದರಿಂದ ವಲ್ಲಭಭಾಯಿ ಪಟೇಲರು 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದಾರೆ.
4. **ಹೈದರಾಬಾದ್ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಹೇಗೆ ಸೇರಿಸಲಾಯಿತು?**
➢ ಹೈದರಾಬಾದ್ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು.
➢ ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು.
➢ ನಿಜಾಮನ ಕ್ರೂರ ಪಡೆಯಾದ ರಜಾಕರ ಬಗೆಗೆ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು.
➢ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ಹೈದರಾಬಾದನ್ನು ಭಾರತದೊಂದಿಗೆ ವಿಲೀನಗೊಳಿಸಲಾಯಿತು.
5. **ಜುನಾಗಡ್ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಹೇಗೆ ವಿಲೀನಗೊಳಿಸಲಾಯಿತು?**
➢ ನವಾಬನು ಜುನಾಗಢ್ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದನು.
➢ ಆಗ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು.
➢ ಇದನ್ನು ಎದುರಿಸಲಾಗದೆ ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು.
➢ ದಿವಾನರ ಮನವಿ ಆಧರಿಸಿ 1949ರಲ್ಲಿ ಜುನಾಗಢ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.
6. **ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.**
➢ ಸ್ವಾತಂತ್ರ್ಯದ ನಂತರದಲ್ಲಿ ಪಾಂಡಿಚೇರಿ ಫ್ರೆಂಚ್‌ರ ಹಿಡಿತದಲ್ಲಿತ್ತು
➢ ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ಹೋರಾಟದ ಫಲವಾಗಿ ಭಾರತಕ್ಕೆ ಸೇರ್ಪಡೆಗೊಂಡವು.
7. **ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?**
➢ ಸ್ವಾತಂತ್ರ್ಯದ ನಂತರವೂ ಗೋವಾ ಪೋರ್ಚುಗೀಸರ ವಸಾಹತುವಾಗಿ ಮುಂದುವರಿದಿತ್ತು
➢ ಗೋವಾವನ್ನು ಭಾರತಕ್ಕೆ ಸೇರಿಸಬೇಕೆಂದು ನಿರಂತರವಾದ ಚಳುವಳಿ ನಡೆಯಿತು.
➢ ಪೋರ್ಚುಗೀಸರು ಸೈನ್ಯವನ್ನು ತರಿಸಿ ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸಿದರು.
➢ 1961ರಲ್ಲಿ ಭಾರತದ ಸೈನ್ಯ ಮಧ್ಯೆ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.
8. **ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.**
➢ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು.
➢ 1953ರಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು.
➢ ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು.
➢ ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು.
➢ ಈ ಕಾನೂನಿನ ಪ್ರಕಾರ ಭಾಷಾವಾರು ಪ್ರಾಂತ್ಯಗಳು ರಚನೆಯಾದವು.

## 1. ಸಾಮಾಜಿಕ ಸ್ತರವಿನ್ಯಾಸ

1. **ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?**
➢ ನಮ್ಮ ಮನೋಭಾವನೆಗಳು ಹೆಚ್ಚಾಗಿ ಒಂದು ಮತ್ತೊಂದನ್ನು ಅವಲಂಬಿಸಿರುತ್ತವೆ.
➢ ಒಬ್ಬ ವ್ಯಕ್ತಿಗೆ ಇರುವ ಚಿಂತನೆ ಅಥವಾ ಮನೋಭಾವನೆಯು ಮತ್ತೊಬ್ಬರಿಂದ ಪ್ರಭಾವಿತವಾದ್ದುದಾಗಿರಬಹುದು.
➢ ಒಂದೇ ಕುಟುಂಬದಲ್ಲಿ ಅವನ/ಅವಳ ಮೇಲೆ ಈ ರೀತಿಯ ಪ್ರಭಾವಗಳು ಬೀರಬಹುದು.
➢ ಈ ರೀತಿಯ ಪ್ರಭಾವಗಳು ಸಮುದಾಯದಿಂದ ಅಥವಾ ನೆರೆ-ಹೊರೆಯವರಿಂದ ಒಳಗಾಗಿರಬಹುದು.
➢ ಶಾಲಾ ಭಾಗವಹಿಸುವಿಕೆಯಲ್ಲಿ ಲಿಂಗ ಅಸಮಾನತೆಯನ್ನು ಕಾಣಬಹುದು.
➢ ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಲಿಂಗ ಅಸಮಾನತೆಯನ್ನು ಕಾಣಬಹುದು.
2. **ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳಾವುವು?**
➢ ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕವಾದದ್ದು.
➢ ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು.
➢ ಮಾನವ ಸಮಾಜ ಎಲ್ಲೆಲ್ಲಿದೆಯೋ ಅಲ್ಲೆಲ್ಲ ಇದೆ.
➢ ಸ್ತರವ್ಯವಸ್ಥೆ ಪುರಾತನವಾದದ್ದು
➢ ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ
➢ ಎಲ್ಲಾ ಸಮಾಜಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಅಸ್ತಿತ್ವದಲ್ಲಿದೆ.
3. **ಸಾಮಾಜಿಕ ಸ್ತರವಿನ್ಯಾಸದ ಪ್ರಮುಖ ರೂಪಗಳು ಯಾವುವು?**
➢ ಆದಿವಾಸಿ ಸಮಾಜ
➢ ಗುಲಾಮಗಿರಿ
➢ ಎಸ್ಟೇಟ್ಸ್ ಪದ್ಧತಿ
➢ ವರ್ಣವ್ಯವಸ್ಥೆ
➢ ಜಾತಿವ್ಯವಸ್ಥೆ

4. **ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು. ಚರ್ಚಿಸಿ?**
- ಅಸ್ಪೃಶ್ಯರಿಗೆ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ಕೆಳ ಸ್ಥಾನ ನೀಡಲಾಗಿದೆ.
- ಸವರ್ಣೀಯರ ಕೆರೆ, ಕೊಳ, ಬಾವಿ, ಕಟ್ಟೆ, ಸ್ಮಶಾನವನ್ನು ಬಳಸುವಂತಿರಲಿಲ್ಲ.
- ಅಸ್ಪೃಶ್ಯರನ್ನು ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು.
- ಮೈಲಿಗೆಯ ಕಾರಣ ನೀಡಿ ಕೆಳಜಾತಿ ಜನರಿಗೆ ಶೈಕ್ಷಣಿಕ ಸೌಲಭ್ಯಗಳಿಂದ ಹೊರಗಿಡಲಾಗಿತ್ತು.
- ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ ಮಾಡಲಾಗಿತ್ತು.
- ರಾಜಕೀಯ ಭಾಗವಹಿಸುವಿಕೆ ನಿರಾಕರಣೆ
- ಸಾಂಪ್ರದಾಯಿಕ ಆಡಳಿತ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ.

5. **ಅಸ್ಪೃಶ್ಯತೆ ನಿವಾರಣೆಗೆ ಜಾರಿಗೆ ತಂದ ಕ್ರಮಗಳಾವುವು?**
- ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
- 1955ರಲ್ಲಿ "ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ"ಯನ್ನು ಜಾರಿಗೊಳಿಸಿದೆ.
- 1976ರಲ್ಲಿ ಇದನ್ನು "ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ" ಎಂದು ಮಾರ್ಪಾಡುಗೊಳಿಸಲಾಯಿತು.
- ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.
- ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ.
- ಇವರಿಗೆ ಶೈಕ್ಷಣಿಕ, ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
- 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆಯ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ.

## 2. ದುಡಿಮೆ

1. **ದುಡಿಮೆಯಲ್ಲಿ ತಾರತಮ್ಯತೆಯನ್ನು / ಅಸಮಾನತೆಯನ್ನು ವಿವರಿಸಿ.**
- ಮಹಿಳೆ ಮತ್ತು ಪುರುಷರಿಬ್ಬರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ.
- ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ.
- ಪುರುಷರಿಗೆ ಹೆಚ್ಚಿನ ಸಂಬಳ ನೀಡಿದರೆ ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತಿದೆ.
- ಸರ್ಕಾರಿ ವಲಯದಲ್ಲಿ ಶ್ರೇಣಿಕೃತವಾಗಿ ದುಡಿಮೆಯಲ್ಲಿನ ಅಸಮಾನತೆ ಕಾಣಬಹುದು.
- ಅಸಂಘಟಿತ ವಲಯಗಳಲ್ಲಿ ಹೆಚ್ಚಾಗಿ ಕಾಣುತ್ತದೆ.
- ಕೃಷಿ ವಲಯದಲ್ಲಿ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ.
- ಮಹಿಳೆಯರ ದುಡಿಮೆಯನ್ನು ಮಹತ್ವದ್ದಾಗಿ ಪರಿಗಣಿಸದಿರುವುದಿಲ್ಲ

2. **ಅಸಂಘಟಿತ ವಲಯಗಳ ದುಡಿಮೆಗಾರರ ಸಮಸ್ಯೆಗಳು**
- ಇವರ ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇಲ್ಲದಿರುವುದು.
- ದುಡಿಮೆಯ ಸಮಯ ನಿಗದಿಯಾಗಿರುವುದಿಲ್ಲ.
- ಕಾರ್ಮಿಕರು ದಿನಗೂಲಿ ಆಧಾರದಲ್ಲಿ ದುಡಿಯುತ್ತಿರುತ್ತಾರೆ.
- ಕನಿಷ್ಠ ವೇತನ ಕಾಯಿದೆಗಿಂತಲೂ ಕಡಿಮೆ ಕೂಲಿ ಪಡೆಯುತ್ತಾರೆ.
- ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯಗಳಾಗಲಿ, ವಿಶೇಷ ಭತ್ಯೆಗಳಾಗಲಿ ಇರುವುದಿಲ್ಲ.
- ಇವರ ದುಡಿಮೆಗೆ ರಜೆ ಇರುವುದಿಲ್ಲ.
- ಬಾಲಕಾರ್ಮಿಕ ಪದ್ಧತಿಯನ್ನು ಪೋಷಿಸುತ್ತದೆ.

3. **ಸಂಭಾವನೆ ರಹಿತ ಮತ್ತು ಸಂಭಾವನೆ ಸಹಿತ ದುಡಿಮೆಯ ವ್ಯತ್ಯಾಸಗಳಾವುವು?**

| **ಸಂಭಾವನೆ ರಹಿತ ದುಡಿಮೆ** | **ಸಂಭಾವನೆ ಸಹಿತ ದುಡಿಮೆ** |
|---|---|
| ➢ ಸಂಭಾವನೆ ಇಲ್ಲದೇ ದುಡಿಯುವುದನ್ನು ಸಂಭಾವನೆ ರಹಿತ ದುಡಿಮೆ ಎನ್ನುವರು.<br>➢ ದುಡಿಮೆಗಾರರು ಯಾವುದೇ ರೀತಿಯ ಕೂಲಿ ಅಥವಾ ಸಂಭಾವನೆಯನ್ನು ಪಡೆಯುವುದಿಲ್ಲ<br>➢ ಉದಾ: ಕಲಾಕಾರನೊಬ್ಬನು ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವುದು, ಸ್ಕೌಟ್ಸ್ ಆಂಡ್ ಗೈಡ್ಸ್, ರಾಷ್ಟ್ರೀಯ ಸೇವಾ ಯೋಜನೆ | ➢ ದೈಹಿಕ ಶ್ರಮಕ್ಕೆ ನೀಡುವ ವೇತನವನ್ನು ಸಂಭಾವನೆ ಸಹಿತ ದುಡಿಮೆ ಎನ್ನುವರು.<br>➢ ಘಂಟೆ, ತಿಂಗಳು, ವಾರದ ಆಧಾರದಲ್ಲಿ ವೇತನ ನೀಡಲಾಗುತ್ತದೆ.<br>➢ ಉದಾ: ಹೊಲ–ಗದ್ದೆಗಳಲ್ಲಿ ದುಡಿಮೆ, ಕೈಗಾರಿಕೆಗಳ ದುಡಿಮೆ, ಕಟ್ಟಡ ಕಟ್ಟುವುದು, ಶಿಕ್ಷಕ ದುಡಿಮೆ ಮುಂತಾದವು. |

4. **ಸಂಘಟಿತ ವಲಯಗಳ ದುಡಿಮೆಗಾರರು ಮತ್ತು ಅಸಂಘಟಿತ ವಲಯಗಳ ದುಡಿಮೆಗಾರರ ವ್ಯತ್ಯಾಸ**

| **ಸಂಘಟಿತ ವಲಯಗಳ ದುಡಿಮೆಗಾರರು** | **ಅಸಂಘಟಿತ ವಲಯಗಳ ದುಡಿಮೆಗಾರರು** |
|---|---|
| ➢ ಕಾನೂನಿನ ಚೌಕಟ್ಟಿನೊಳಗೆ ದುಡಿಯುವವರನ್ನು ಸಂಘಟಿತ ವಲಯಗಳ ದುಡಿಮೆಗಾರರು ಎನ್ನುವರು.<br>➢ ನಿಗದಿತ ವೇತನವನ್ನು ಪಡೆಯುತ್ತಾರೆ.<br>➢ ವಾರ್ಷಿಕ ಭತ್ಯೆ, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನವನ್ನು ಪಡೆಯುತ್ತಾರೆ.<br>➢ ಉದಾ : ಶಾಲೆ, ಆಸ್ಪತ್ರೆ, ಕೈಗಾರಿಕೆ, ಬ್ಯಾಂಕು, ಸೈನ್ಯ ಮುಂತಾದವುಗಳಲ್ಲಿ ದುಡಿಯುವವರು. | ➢ ಯಾವುದೇ ಕಾನೂನಿನ ಚೌಕಟ್ಟು ಇಲ್ಲದೇ ಕೆಲಸ ಮಾಡುವವರನ್ನು ಅಸಂಘಟಿತ ವಲಯಗಳ ದುಡಿಮೆಗಾರರು ಎನ್ನುವರು.<br>➢ ಕಡಿಮೆ ವೇತನ ಇರುತ್ತದೆ.<br>➢ ವೈದ್ಯಕೀಯ ಸೌಲಭ್ಯಗಳಾಗಲಿ, ವಿಶೇಷ ಭತ್ಯೆಗಳಾಗಲಿ ಇರುವುದಿಲ್ಲ.<br>➢ ಉದಾ: ಕೃಷಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ವಾಹನ ರಿಪೇರಿ, ಬೀಡಿ ಕಾರ್ಮಿಕರು |

## 9. ಸಾರಿಗೆ ಮತ್ತು ಸಂಪರ್ಕ

1. **ದೇಶದ ಆರ್ಥಿಕಾಭಿವೃದ್ಧಿಯಲ್ಲಿ ರಸ್ತೆ ಸಾರಿಗೆ ಪಾತ್ರವೇನು? / ರಸ್ತೆ ಸಾರಿಗೆ ಪ್ರಾಮುಖ್ಯತೆ ಏನು?**
- ಕೃಷಿಯ ಅಭಿವೃದ್ಧಿಗೆ ನೆರವಾಗುತ್ತದೆ
- ಕೈಗಾರಿಕಾ ಪ್ರಗತಿಗೆ ಉತ್ತೇಜನ
- ದೇಶೀಯ ಮತ್ತು ವಿದೇಶೀ ವ್ಯಾಪಾರದ ವೃದ್ಧಿ
- ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ
- ರಕ್ಷಣಾ ಪಡೆಗೆ ನೆರವಾಗುತ್ತದೆ.

2. **ದೇಶದ ಆರ್ಥಿಕಾಭಿವೃದ್ಧಿಯಲ್ಲಿ ರಸ್ತೆ ಸಾರಿಗೆ ಪಾತ್ರವೇನು?**
- ದೇಶದ ಕೃಷಿ ಮತ್ತು ಗ್ರಾಮೀಣ ಕೈಗಾರಿಕೆಗಳ ಪ್ರಗತಿಗಾಗಿ ರಸ್ತೆಗಳು ಅತ್ಯಾವಶ್ಯಕ.
- ಹಳ್ಳಿಗಳನ್ನು ಸಂಪರ್ಕಿಸಲು ರಸ್ತೆಗಳು ಬಹಳ ಸೂಕ್ತವಾದವು.
- ರಸ್ತೆಗಳನ್ನು ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿಯೂ ನಿರ್ಮಿಸಬಹುದು.
- ಮನೆಮನೆಗೆ ಸೇವೆ ಕಲ್ಪಿಸುತ್ತವೆ.
- ರೈಲು ಸಂಚಾರ, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ.
- ಗಡಿಪ್ರದೇಶಗಳಲ್ಲಿ ರಸ್ತೆಗಳು ಹೆಚ್ಚು ಉಪಯುಕ್ತ.

3. **ನಿರ್ಮಾಣ ಮತ್ತು ನಿರ್ವಹಣೆಗಳನ್ನು ಆಧರಿಸಿ ರಸ್ತೆಗಳನ್ನು ವಿಧಗಳಾವುವು?**
- ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು
- ರಾಷ್ಟ್ರೀಯ ಹೆದ್ದಾರಿಗಳು
- ರಾಜ್ಯ ಹೆದ್ದಾರಿಗಳು
- ಜಿಲ್ಲಾ ರಸ್ತೆಗಳು
- ಗ್ರಾಮೀಣ ರಸ್ತೆಗಳು

4. **ರೈಲು ಸಾರಿಗೆಯ ಪ್ರಾಮುಖ್ಯತೆ ತಿಳಿಸಿ**
- ಭಾರವಾದ ಸರಕುಗಳನ್ನು ಸಾಗಿಸಲು ಉಪಯುಕ್ತ.
- ಅಧಿಕ ಸಂಖ್ಯೆಯ ಪ್ರಯಾಣಿಕರನ್ನು ಸಾಗಿಸಲು ಉಪಯುಕ್ತ.
- ದೂರದ ಸ್ಥಳಗಳಿಗೆ ಸಾಗಿಸಲು ಹೆಚ್ಚು ಉಪಯುಕ್ತವಾದವು.
- ಕೃಷಿ, ಕೈಗಾರಿಕೆ ಮತ್ತು ಆರ್ಥಿಕತೆಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.
- ವ್ಯಾಪಾರ ಮತ್ತು ಪ್ರವಾಸೋದ್ಯಮದ ಬೆಳವಣಿಗೆಗೆ ನೆರವಾಗುವುವು.

5. **ಭಾರತದ ಪ್ರಮುಖ ಬಂದರುಗಳನ್ನು ಹೆಸರಿಸಿ**
- **ಪಶ್ಚಿಮ ತೀರ :** ಕಾಂಡ್ಲ, ಮುಂಬೈ, ಜವಹರಲಾಲ್ ನೆಹರು ಬಂದರು, ಮರ್ಮಗೋವ, ನವ ಮಂಗಳೂರು, ಕೊಚಿ
- **ಪೂರ್ವ ತೀರ:** ತುತಕುಡಿ, ಚೆನ್ನೈ, ವಿಶಾಖಪಟ್ಟಣ, ಪಾರಾದೀಪ್, ಹಾಲ್ದಿಯಾ, ಕೊಲ್ಕತ

6. **ವಾಯು ಸಾರಿಗೆಯ ಪ್ರಾಮುಖ್ಯತೆ ತಿಳಿಸಿ**
- ಇದು ಅತ್ಯಂತ ವೇಗಯುತ ಸಾರಿಗೆ ಮಾಧ್ಯಮ.
- ಪ್ರಯಾಣಿಕರು ಮತ್ತು ಟಪಾಲು ಸಾಗಿಸಲು ಉತ್ತಮ.
- ಸಮರ, ಪ್ರವಾಹ, ಭೂಕಂಪಗಳಂತಹ ತುರ್ತುಪರಿಸ್ಥಿತಿಗೆ ಬಹುಉಪಯುಕ್ತ.

7. **ಸಂಪರ್ಕ ಮಾಧ್ಯಮಗಳ ಪ್ರಾಮುಖ್ಯತೆ ತಿಳಿಸಿ**
- ಸರ್ಕಾರದ ನೀತಿ ನಿಯಮ ಮತ್ತು ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತವೆ
- ನೈಸರ್ಗಿಕ ವಿನಾಶಗಳು, ಹವಾಗುಣ ಮುನ್ಸೂಚನೆಗಳನ್ನು ತಿಳಿಯಲು ಸಹಾಯವಾಗುವುದು.
- ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ಕೃಷಿ ಅಭಿವೃದ್ಧಿಗೆ ನೆರವಾಗುವುದು.
- ಮನರಂಜನೆಗೆ ಸಹಾಯಕವಾಗಿವೆ.
- ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ.
- ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ.

8. **ಭಾರತದ ವಿವಿಧ ಸಂಪರ್ಕ ಮಾಧ್ಯಮಗಳನ್ನು ತಿಳಿಸಿ.**

**ವೈಯಕ್ತಿಕ ಸಂಪರ್ಕ ಮಾಧ್ಯಮ**
- ಅಂಚೆ, ಟೆಲಿಫೋನ್, ಫ್ಯಾಕ್ಸ್, ಈ–ಮೇಲ್, ಅಂತರ್ಜಾಲ

**ಸಮುದಾಯ ಸಂಪರ್ಕ ಮಾಧ್ಯಮ.**
- ವೃತ್ತಪತ್ರಿಕೆ, ನಿಯತಕಾಲಿಕೆಗಳು, ಆಕಾಶವಾಣಿ, ದೂರದರ್ಶನ

9. **ಕೃತಕ ಉಪಗ್ರಹದ ಹಾರಾಟವು ಸಂಪರ್ಕ ಮಾಧ್ಯಮದ ಇತಿಹಾಸದಲ್ಲಿ ಹೊಸ ಶಕೆಯೊಂದನ್ನು ಸೃಷ್ಟಿಸಿದೆ. ಸಮರ್ಥಿಸಿ**
- ಆಕಾಶವಾಣಿ ಮತ್ತು ದೂರದರ್ಶನಗಳ ಪ್ರಸಾರಕ್ಕೆ ಉಪಗ್ರಹ ತಂತ್ರಜ್ಞಾನ ಹೆಚ್ಚು ನೆರವಾಗಿದೆ.
- ಭೌಗೋಳಿಕ ಮಾಹಿತಿ ವ್ಯವಸ್ಥೆ (GIS)
- ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ (GPS)
- ದೂರ ಸಂವೇದಿ (RS) ತಂತ್ರಜ್ಞಾನಗಳು ಪ್ರಗತಿಗೊಂಡಿವೆ.

## 10. ಭಾರತದ ಕೈಗಾರಿಕೆಗಳು

1. **ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರವೇನು ? ಕೈಗಾರಿಕೆಗಳ ಪ್ರಾಮುಖ್ಯತೆಯನ್ನು ತಿಳಿಸಿ**
- ಕೈಗಾರಿಕೆಗಳ ಅಭಿವೃದ್ಧಿಯಿಂದ ಪ್ರಾಥಮಿಕ ಸರಕುಗಳ ಅವಲಂಬನೆ ಕಡಿಮೆಯಾಗುತ್ತದೆ.
- ಕೈಗಾರಿಕೆಗಳ ಅಭಿವೃದ್ಧಿಯಿಂದ ಆಮದು ಕಡಿಮೆಯಾಗುತ್ತದೆ.
- ರಾಷ್ಟ್ರೀಯ ಆದಾಯ ಹೆಚ್ಚಾಗುತ್ತದೆ.
- ತಲಾದಾಯ ಹೆಚ್ಚಾಗುತ್ತದೆ.
- ವಿದೇಶೀ ವಿನಿಮಯ ಗಳಿಕೆಯಲ್ಲಿ ವೃದ್ಧಿಯಾಗುತ್ತದೆ.
- ಉದ್ಯೋಗಾವಕಾಶನ್ನು ಒದಗಿಸುತ್ತದೆ.
- ಜನರ ಜೀವನ ಮಟ್ಟದಲ್ಲಿ ಸುಧಾರಣೆಯಾಗುವುದು.

2. **ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳಾವುವು? / ಕೈಗಾರಿಕೆಗಳ ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳು**
- ಕಚ್ಚಾ ವಸ್ತುಗಳ ಸರಬರಾಜು
- ಶಕ್ತಿ ಸಂಪನ್ಮೂಲಗಳ ಪೂರೈಕೆ
- ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ
- ಮಾರುಕಟ್ಟೆ ಸೌಲಭ್ಯ
- ಬಂಡವಾಳ
- ಕಾರ್ಮಿಕರು ಮತ್ತು ನೀರು ದೊರೆಯುವಿಕೆ
- ಸೂಕ್ತ ವಾಯುಗುಣ
- ಸರ್ಕಾರದ ನೀತಿ ನಿಯಮಗಳು. (ಯಾವುದಾದರೂ ಆರು)

3. **ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳಾವುವು?**
- ಹೂಗ್ಲಿ–ಕೊಲ್ಕತ ಪ್ರದೇಶ
- ಮುಂಬಯಿ–ಪುಣೆ ಪ್ರದೇಶ.
- ಅಹ್ಮದಾಬಾದ್–ವಡೋದರ ಪ್ರದೇಶ.
- ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ.
- ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ.
- ದೆಹಲಿ–ಮೀರತ್ ಪ್ರದೇಶ.
- ವಿಶಾಖಪಟ್ಟಣ–ಗುಂಟೂರು ಪ್ರದೇಶ.
- ಕೊಲ್ಲಂ–ತಿರುವನಂತಪುರ ಪ್ರದೇಶ.

4. **ಭಾರತದ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಹೆಸರಿಸಿ.**
- ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ. ಬರ್ನ್‌ಪುರ
- ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ. ಭದ್ರಾವತಿ
- ಹಿಂದೂಸ್ತಾನ್ ಉಕ್ಕು ಲಿಮಿಟಡ್, ಬಿಲಾಯಿ
- ಹಿಂದೂಸ್ತಾನ್ ಉಕ್ಕು ಲಿಮಿಟೆಡ್, ರೂರ್ಕೆಲ
- ಹಿಂದೂಸ್ತಾನ್ ಉಕ್ಕು ಲಿಮಿಟೆಡ್, ದುರ್ಗಾಪುರ
- ಬೊಕಾರೊ ಉಕ್ಕು ಸ್ಥಾವರ, ಬೊಕಾರೊ
- ಸೇಲಂ ಉಕ್ಕು ಸ್ಥಾವರ, ಸೇಲಂ
- ವಿಶಾಖಪಟ್ಟಣಂ ಉಕ್ಕು ಸ್ಥಾವರ, ವಿಶಾಖಪಟ್ಟಣ
- ಟಾಟಾ ಉಕ್ಕು ಸ್ಥಾವರ, ಕಳಿಂಗ ನಗರ

**5. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳು**
- ಕಬ್ಬಿಣದ ಅದಿರು ಪೂರೈಕೆ.
- ಕೋಕಿಂಗ್ ಕಲ್ಲಿದ್ದಲು ಹಾಗೂ ಜಲವಿದ್ಯುತ್ ಪೂರೈಕೆ.
- ರೈಲು ಸಾರಿಗೆ ಹಾಗೂ ಬಂದರು ಸೌಲಭ್ಯ.
- ನೀರು ಪೂರೈಕೆ.
- ಕಡಿಮೆ ಕೂಲಿಗೆ ದುಡಿಯುವ ನುರಿತ ಕಾರ್ಮಿಕರು
- ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ ಸೌಲಭ್ಯ.

**6. ಅಲ್ಯೂಮಿನಿಯಂ ಬಹುಪಯೋಗಿ ಲೋಹ. ಹೇಗೆ? (ಅಲ್ಯೂಮಿನಿಯಂನ ಉಪಯೋಗಗಳು)**
- ವಿಮಾನ, ಸ್ವಯಂಚಾಲಿತ ವಾಹನಗಳ ತಯಾರಿಕೆಯಲ್ಲಿ ಬಳಸುವರು.
- ರೈಲುಸಾರಿಗೆ, ಹಡಗು ತಯಾರಿಕೆಯಲ್ಲಿ ಬಳಸುವರು.
- ಬಣ್ಣ ತಯಾರಿಕೆಯಲ್ಲಿ ಬಳಸುವರು.
- ಗೃಹಬಳಕೆ ವಸ್ತುಗಳ ತಯಾರಿಕೆ,
- ವಿವಿಧ ಕೈಗಾರಿಕೆಗಳಲ್ಲಿ ಬಳಕೆ
- ವಿದ್ಯುತ್ ಕೇಬಲ್ ತಯಾರಿಕೆ
- ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿಯೂ ಬಳಕೆ ಮಾಡಲಾಗುತ್ತಿದೆ.
- ಆದ್ದರಿಂದ ಇದು ಬಹುಪಯೋಗಿ ಲೋಹ.

**7. ಸಕ್ಕರೆ ಕೈಗಾರಿಕೆಯ ಸ್ಥಾನೀಕರಣ ನಿರ್ಧರಿಸುವ ಪ್ರಮುಖ ಅಂಶಗಳು ಯಾವುವು?**
- ಮೂಲ ಕಚ್ಚಾ ವಸ್ತುವಾದ ಕಬ್ಬು ಸರಬರಾಜು,
- ಸುಲಭ ದರದ ಮತ್ತು ಸಮರ್ಪಕ ಸಾರಿಗೆ ಸೌಲಭ್ಯ,
- ಸರಕಾರದ ಪ್ರೋತ್ಸಾಹ
- ವಿದ್ಯುತ್ ಪೂರೈಕೆ
- ಬಂಡವಾಳ
- ಮಾರುಕಟ್ಟೆ ಸೌಲಭ್ಯಗಳು.

**8. ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ತಿಳಿಸಿ**
- ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಗೆ ನೆರವಾಗುತ್ತವೆ.
- ಅಧಿಕ ಉತ್ಪಾದಕ ಕ್ರಿಯೆಗಳನ್ನು ಹೊಂದಿವೆ.
- ಕಚ್ಚಾವಸ್ತುಗಳಿಗಿಂತ ಬುದ್ಧಿವಂತಿಕೆ ಸಾಮರ್ಥ್ಯದ ಮೇಲೆ ನಡೆಯುತ್ತವೆ.
- ಉದ್ಯೋಗಾವಕಾಶಗಳನ್ನು ಒದಗಿಸುತ್ತವೆ
- ಸಾಮಾಜಿಕ-ಆರ್ಥಿಕ ಬದಲಾವಣೆಯ ಪ್ರಭಾವವುಳ್ಳ ಸಾಧನವಾಗಿವೆ.
- ಭಾರತದಿಂದ ಸಾಫ್ಟ್‌ವೇರ್ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗುತ್ತವೆ.
- ದೇಶಕ್ಕೆ ವಿದೇಶೀ ವಿನಿಮಯವು ಗಳಿಕೆಯಾಗುತ್ತದೆ.

## 11. ಭಾರತದ ನೈಸರ್ಗಿಕ ವಿಪತ್ತುಗಳು

**1. ಆವರ್ತ ಮಾರುತಗಳ ಪರಿಣಾಮಗಳು**
- ಸಾವು ಮತ್ತು ಆಸ್ತಿಗಳಿಗೆ ಹಾನಿಯನ್ನುಂಟುಮಾಡುತ್ತವೆ.
- ಕಟ್ಟಡಗಳಿಗೆ ಧಕ್ಕೆಯುಂಟಾಗುತ್ತದೆ.
- ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳನ್ನು ಅಸ್ತವ್ಯಸ್ತಗೊಳಿಸುತ್ತವೆ.
- ವಿದ್ಯುತ್ ಸರಬರಾಜಿಗೆ ಅಡಚಣೆ ಉಂಟಾಗುತ್ತದೆ.
- ಬೆಳೆಗಳಿಗೆ ಹಾನಿಯಾಗುತ್ತದೆ.
- ಸ್ವಾಭಾವಿಕ ಸಸ್ಯವರ್ಗ ಪ್ರಾಣಿ ಸಂಕುಲಗಳಿಗೆ ಹಾನಿಯುಂಟಾಗುತ್ತದೆ

**2. ಆವರ್ತ ಮಾರುತಗಳ ಮುನ್ನೆಚ್ಚರಿಕಾ ಕ್ರಮಗಳಾವುವು?**
- ಮುನ್ನೆಚ್ಚರಿಕೆಯ ಕಡೆಗೆ ಲಕ್ಷ್ಯಕೊಡಬಹುದು.
- ಸಂಪರ್ಕಮಾದ್ಯಮಗಳು ಬಿತ್ತರಿಸುವ ಎಚ್ಚರಿಕೆಗಳನ್ನು ಗಮನಿಸುವುದು.
- ಜನರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಬೇಕು.
- ಮಾಂಗ್ರೋವ್ ಕಾಡು ಬೆಳೆಸಬೇಕು.
- ಆಳಕ್ಕೆ ಬೇರು ಬಿಡುವ ಮರಗಳನ್ನು ಸಮುದ್ರ ತೀರದಲ್ಲಿ ಬೆಳೆಸಬೇಕು.

**3. ಪ್ರವಾಹಗಳು ಉಂಟಾಗಲು ಕಾರಣಗಳಾವುವು?**
- ಅತ್ಯಧಿಕ ಮಳೆ
- ಹಿಮಕರಗುವಿಕೆ
- ಆವರ್ತಮಾರುತ
- ಮೇಘಸ್ಫೋಟ
- ನದಿ ಪಾತ್ರದಲ್ಲಿ ಹೂಳುತುಂಬುವಿಕೆ
- ಅರಣ್ಯನಾಶ
- ಒಡ್ಡು ಮತ್ತು ಅಣೆಕಟ್ಟುಗಳು ಒಡೆದು ಹೋಗುವುದರಿಂದ
- ಶೀಘ್ರಗತಿಯ ನಗರೀಕರಣ

**4. ಪ್ರವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ.**
- ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು
- ವೇಗವಾದ ನೀರಿನ ಹರಿವು ನಿಯಂತ್ರಣ.
- ಅಣೆಕಟ್ಟುಗಳನ್ನು ನಿರ್ಮಿಸುವುದು
- ಒಡ್ಡುಗಳ ನಿರ್ಮಾಣ.
- ಪ್ರವಾಹಗಳ ಬಗ್ಗೆ ಮುನ್ಸೂಚನೆ ಮತ್ತು ಸಕಾಲಿಕ ಮುನ್ನೆಚ್ಚರಿಕೆ ನೀಡುವುದು.

**5. ಭೂಕುಸಿದ ಪರಿಣಾಮಗಳಾವುವು?**
- ರೈಲುಮಾರ್ಗ, ರಸ್ತೆಗಳಿಗೆ ಅಡಚಣೆ,
- ಜನವಸತಿ ಭೂಗತವಾಗುವುದು
- ಸಸ್ಯವರ್ಗಗಳು ಭೂಗತವಾಗುವುದು.
- ಸಾವು-ನೋವು ಸಂಭವಿಸುತ್ತವೆ
- ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ
- ರಸ್ತೆಗಳಿಗೆ ಅಡಚಣೆ

**6. ಭೂಕಂಪಗಳು ಉಂಟಾಗಲು ಕಾರಣಗಳಾವುವು?**
- ಭೂಫಲಕಗಳ ಚಲನೆ
- ಜ್ವಾಲಾಮುಖಿ
- ಶಿಲಾಸ್ತರಗಳ ಭಂಗ ಮತ್ತು ಮಡಿಕೆ
- ಭೂಕುಸಿತ
- ಅಂತರ್ಗುಹೆ ಮೇಲ್ಛಾವಣಿಯ ಕುಸಿತ
- ಮಾನವ ನಿರ್ಮಿತ ಜಲಾಶಯಗಳ ನೀರಿನ ಭಾರ

**7. ಭೂಕಂಪದ ಪರಿಣಾಮಗಳಾವುವು?**
- ನೆಲದ ಮೇಲಿನ ಬಿರುಕು
- ಕಟ್ಟಡ, ರೈಲು ಮಾರ್ಗ, ರಸ್ತೆ, ವಿದ್ಯುತ್ ಸಂಚಾರ, ಸಂಪರ್ಕ ಮಾದ್ಯಮ ನಾಶ
- ಸೇತುವೆ, ಅಣೆಕಟ್ಟುಗಳ ಒಡೆತ, ಕಾರ್ಖಾನೆಗಳಿಗೆ ಹಾನಿ,
- ಮಾನವ ಮತ್ತು ಜಾನುವಾರುಗಳ ಸಾವು
- ಆಸ್ತಿಗಳಿಗೆ ಹಾನಿ
- ಭೂಕುಸಿತ
- ಅಂತರ್ಜಲ ಮಟ್ಟದಲ್ಲಿ ವ್ಯತ್ಯಾಸ

8. **ಭೂಕಂಪ ಮುನ್ನೆಚ್ಚರಿಕಾ ಕ್ರಮಗಳಾವುವು?**
- ಭೂಕಂಪನಾವಲಯಗಳಲ್ಲಿ ಜನವಸತಿಗಳ ನಿರ್ಮಾಣ ನಿಷೇಧ.
- ಭೂಕಂಪನ ನಿರೋಧಕ ಕಟ್ಟಡಗಳ ನಿರ್ಮಾಣ ಅನುಸರಿಸುವುದು.
- ಉತ್ತಮ ದರ್ಜೆಯ ಕಟ್ಟಡ ನಿರ್ಮಾಣದ ವಸ್ತುಗಳ ಬಳಕೆ
- ಬಹುಮಹಡಿ ಕಟ್ಟಡ ನಿರ್ಮಾಣವನ್ನು ಕೈಬಿಡುವುದು.
- ಅಂತರ್ಜಲಕ್ಕಾಗಿ ಬಾವಿಗಳ ಆಳಕೊರೆತವನ್ನು ನಿಷೇಧಿಸುವುದು.
- ಭೂಕಂಪನ ತೀವ್ರತೆಯುಳ್ಳ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ನಗರ ಬೆಳೆವಣಿಗೆಗೆ ನಿರ್ಬಂಧ.
- ಬಹುದೊಡ್ಡ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣ ನಿಷೇಧ.
- ಅರಣ್ಯನಾಶ ಮತ್ತು ಗಣಿಗಾರಿಕೆಗಳನ್ನು ತಡೆಗಟ್ಟುವುದು.

## 3. ಹಣ ಮತ್ತು ಸಾಲ

1. **ಹಣದ ವಿಕಾಸದ ಹಂತಗಳನ್ನು ವಿವರಿಸಿ.**
- ಸಾಟಿ (ವಸ್ತು) ವಿನಿಮಯ ಪದ್ಧತಿ
- ವಸ್ತು ರೂಪದ ಹಣ
- ಲೋಹದ ಹಣ
- ಕಾಗದದ ಹಣ
- ಬ್ಯಾಂಕ್ ಹಣ
- ಪ್ಲಾಸ್ಟಿಕ್ ಹಣ

2. **ಹಣದ ಕಾರ್ಯಗಳನ್ನು ತಿಳಿಸಿ**
- ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನವಾಗಿದೆ
- ಸರಕುಗಳು ಮತ್ತು ಸೇವೆಗಳ ಮೌಲ್ಯವನ್ನು ನಿರ್ಣಯಿಸುತ್ತದೆ.
- ವಿಳಂಬಿತ ಸಂದಾಯದ ಪ್ರಮಾಣವಾಗಿದೆ.
- ಹಣದ ಬಳಕೆಯಿಂದ ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಹ ಸಾಧ್ಯವಾಗಿದೆ
- ಸಂಪತ್ತಿನ ಸಂಗ್ರಹ ಮಾಡುವುದು ಸರಳ ಸಾಧ್ಯವಾಗಿದೆ.
- ಮೌಲ್ಯ ವರ್ಗಾವಣೆ ಅಥವಾ ಖರೀದಿ ಶಕ್ತಿಯ ವರ್ಗಾವಣೆ ಮಾಡುತ್ತದೆ.
- ಸರಕು-ಸೇವೆಗಳನ್ನು ವರ್ಗಾವಣೆ ಸರಳೀಕರಣಗೊಂಡಿದೆ.

3. **ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳನ್ನು ತಿಳಿಸಿ**
- ನೋಟು ಚಲಾವಣೆಯ ಏಕಸ್ವಾಮ್ಯ ಹೊಂದಿದೆ.
- ಸರ್ಕಾರದ ಬ್ಯಾಂಕು ಆಗಿ ಕಾರ್ಯ ನಿರ್ವಹಿಸುತ್ತದೆ.
- ಬ್ಯಾಂಕುಗಳ ಬ್ಯಾಂಕು ಆಗಿ ಕಾರ್ಯ ನಿರ್ವಹಿಸುತ್ತದೆ.
- ಸಾಲ ಪ್ರಮಾಣದ ನಿಯಂತ್ರಣ ಮಾಡುತ್ತದೆ.
- ವಿದೇಶಿ ವಿನಿಮಯ ಸಂಗ್ರಹ ಮಾಡುತ್ತದೆ
- ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿಗೆ ಸಹಾಯಕವಾಗಿದೆ.
- ಜನರಲ್ಲಿ ಉಳಿತಾಯ ಮನೋಭಾವವನ್ನು ಪ್ರೇರೇಪಿಸುವುತ್ತದೆ.
- ಹಣದ ಪೂರೈಕೆಯನ್ನು ನಿಯಂತ್ರಣ ಮಾಡುತ್ತದೆ

4. **ರಿಜರ್ವ ಬ್ಯಾಂಕಿನ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ.**

**ಅ. ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು**
- ಬ್ಯಾಂಕ್ ಬಡ್ಡಿ ದರವನ್ನು ನಿರ್ಧರಿಸುವುದು.
- ಮುಕ್ತ ಮಾರುಕಟ್ಟೆ ಕಾರ್ಯಾಚರಣೆ
- ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು

**ಬ. ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು**
- ಮಾರ್ಜಿನ್ ಪ್ರಮಾಣದ ಬದಲಾವಣೆ ಮಾಡುವುದು
- ಸಾಲದ ಗರಿಷ್ಠ ಮಿತಿ ನಿಗದಿ ಮಾಡುವುದು
- ವಾಣಿಜ್ಯ ಬ್ಯಾಂಕುಗಳ ಮೇಲೆ ನಿಯಮಿತವಾಗಿ ನೈತಿಕ ಒತ್ತಡ ಹೇರುವುದು
- ನೇರವಾಗಿ ನಿಯಂತ್ರಣ ಕ್ರಮ ಕೈಗೊಳ್ಳುವುದು.

## 4 ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ

1. **ಆಯ-ವ್ಯಯ ಪತ್ರದ ಮೂರು ವಿಧಗಳನ್ನು ವಿವರಿಸಿ**

**1. ಉಳಿತಾಯ ಆಯ-ವ್ಯಯ**
- ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ, ಅದನ್ನು ಉಳಿತಾಯ ಆಯ-ವ್ಯಯ ಎನ್ನುವರು.

**2. ಕೊರತೆಯ ಆಯ-ವ್ಯಯ**
- ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯ-ವ್ಯಯ ಎನ್ನುವರು.

**3. ಸಮತೋಲನ ಆಯ-ವ್ಯಯ**
- ವರಮಾನ ಮತ್ತು ವೆಚ್ಚಗಳೆರಡೂ ಸಮನಾಗಿದ್ದರೆ, ಅದನ್ನು ಸಮತೋಲನ ಆಯ-ವ್ಯಯ ಎನ್ನುವರು.

2. **ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳಾವುವು?**
- ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು
- ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು
- ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು
- ಸಮತುಲಿತ ಪ್ರಾದೇಶಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು
- ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು
- ಸಂಪೂರ್ಣ ಉದ್ಯೋಗ ಸಾಧಿಸುವುದು
- ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು.

3. **ಸರ್ಕಾರವು ಬಂಡವಾಳ ವರಮಾನವನ್ನು ಸಾರ್ವಜನಿಕ ಸಾಲದ ಮೂಲಕ ಹೇಗೆ ಸಂಗ್ರಹಿಸುತ್ತದೆ?**
- ದೇಶದಲ್ಲಿರುವ ಪ್ರಜೆಗಳು
- ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು
- ಉದ್ಯಮ ಸಂಸ್ಥೆಗಳು
- ವಿದೇಶಿ ಸರ್ಕಾರಗಳು
- ವಿದೇಶಿ ಹಣಕಾಸು ಸಂಸ್ಥೆಗಳು
- ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು

4. **ಕೇಂದ್ರ ಸರ್ಕಾರದ ತೆರಿಗೆಯ ವಿಧಗಳನ್ನು ಪಟ್ಟಿ ಮಾಡಿರಿ**

**ಪ್ರತ್ಯಕ್ಷ ತೆರಿಗೆಗಳು**
- ವರಮಾನ ತೆರಿಗೆ
- ಕಂಪನಿ ತೆರಿಗೆ
- ಸಂಪತ್ತಿನ ತೆರಿಗೆ
- ಸ್ಟ್ಯಾಂಪ್ ಶುಲ್ಕ ಇತ್ಯಾದಿ.

**ಪರೋಕ್ಷ ತೆರಿಗೆಗಳು**
- ಕೇಂದ್ರ ಅಬಕಾರಿ ತೆರಿಗೆ
- ಮೌಲ್ಯವರ್ಧಿತ ತೆರಿಗೆ
- ಆಮದು ರಫ್ತು ಸುಂಕಗಳು
- ಸೇವಾ ತೆರಿಗೆ

5. **ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನಗಳಾವುವು?**
- ಭಾರತೀಯ ರಿಜರ್ವ್ ಬ್ಯಾಂಕು ಗಳಿಸುವ ಲಾಭ
- ಭಾರತೀಯ ರೈಲ್ವೆ ಗಳಿಸುವ ಲಾಭ
- ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ
- ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ
- ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ
- ವಿವಿಧ ರೀತಿಯ ಶುಲ್ಕಗಳು, ದಂಡಗಳು

## 1. ಬ್ಯಾಂಕಿನ ವ್ಯವಹಾರಗಳು

**1. ಬ್ಯಾಂಕುಗಳ ಗುಣ ಲಕ್ಷಣಗಳಾವುವು?**

- ಹಣದ ವಹಿವಾಟನ್ನು ಮಾಡುತ್ತವೆ.
- ಬ್ಯಾಂಕು ಒಬ್ಬ ವ್ಯಕ್ತಿಯಾಗಿರಬಹುದು, ಸಂಸ್ಥೆ ಅಥವಾ ಕಂಪನಿ ಆಗಿರಬಹುದು.
- ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತದೆ.
- ಸಾಲಗಳನ್ನು ಕೊಡುವುದು
- ಲಾಭ ಮತ್ತು ಸೇವಾ ಭಾವನೆ ಹೊಂದಿದೆ.
- ಬ್ಯಾಂಕುಗಳು ತಮ್ಮ ಕಾರ್ಯಗಳನ್ನು ನಿರಂತರವಾಗಿ ವಿಸ್ತರಿಸಿಕೊಂಡು ಹೋಗುತ್ತವೆ.
- ಸಂಬಂಧ ಕಲ್ಪಿಸುವ ಕೊಂಡಿ

**2. ಬ್ಯಾಂಕಿನ ಕಾರ್ಯಗಳು / ಬ್ಯಾಂಕುಗಳು ಸಲ್ಲಿಸುವ ಸೇವೆಗಳು / ಬ್ಯಾಂಕು ಖಾತೆ ತೆಗೆಯುವುದರಿಂದ ಆಗುವ ಅನುಕೂಲಗಳು**

- ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು.
- ಸಾಲಗಳನ್ನು ಕೊಡುವುದು.
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
- ಖರ್ಚು ಕಾರ್ಡು ಮತ್ತು ಜಮಾ ಕಾರ್ಡುಗಳನ್ನುಕೊಡುವುದು.
- ಹಣದ ವಹಿವಾಟನ್ನು ಮಾಡುತ್ತವೆ.
- ಹಣದ ಭದ್ರತೆಯನ್ನು ಕಾಪಾಡುತ್ತವೆ.

**3. ಅಂಚೆ ಕಚೇರಿಗಳ ಹಣಕಾಸು ವ್ಯವಹಾರಗಳನ್ನು (ಸೇವೆ) ತಿಳಿಸಿ**

- ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ನೀಡುತ್ತದೆ.
- ಅಂಚೆ ಉಳಿತಾಯ ಖಾತೆಗಳನ್ನು ಆರಂಭಿಸಿದೆ.
- ಕಿಸಾನ್ ವಿಕಾಸ ಪತ್ರಗಳನ್ನು ನೀಡುತ್ತದೆ.
- ಅಂಚೆ ವಿಮೆ ಯೋಜನೆ
- ನಿವೃತ್ತಿವೇತನ ಯೋಜನೆ
- ಹಣವನ್ನು ವರ್ಗಾಯಿಸುವುದು

**4. ಬ್ಯಾಂಕುಗಳ ವಿಧಗಳನ್ನು ತಿಳಿಸಿ**

- ಕೇಂದ್ರ ಬ್ಯಾಂಕು ಅಥವಾ ಭಾರತೀಯ ರಿಜರ್ವ್ ಬ್ಯಾಂಕು
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಭೂ-ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು (ಲೇವಾದೇವಿಗಾರರು ಅಥವಾ ಸಾಹುಕಾರರು)
- ಸಹಕಾರಿ ಬ್ಯಾಂಕುಗಳು

**5. ಬ್ಯಾಂಕು ಖಾತೆ ತೆಗೆಯುವ ಹಂತಗಳು**

- ಯಾವ ವಿಧವಾದ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.
- ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು
- ಪ್ರಸ್ತಾವನೆ ಅರ್ಜಿ ನಮೂನೆಯನ್ನು ತುಂಬುವುದು.
- ಪರಿಚಿತರ ಉಲ್ಲೇಖನವನ್ನು ಕೊಡುವುದು
- ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು
- ಅಧಿಕಾರಿಯ ಒಪ್ಪಿಗೆ ಪಡೆಯುವುದು.
- ಪ್ರಾರಂಭಿಕ ಠೇವಣಿ ಕಟ್ಟುವುದು.

## 2. ಉದ್ಯಮಗಾರಿಕೆ

**1. ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ತಿಳಿಸಿ**

- ಸೃಜನಾತ್ಮಕ
- ಹೊಸ ಪದ್ಧತಿಯನ್ನು ರೂಢಿಗೆ ತರುವುದು.
- ನಾಯಕತ್ವ
- ತಂಡವನ್ನು ಕಟ್ಟುವುದು.
- ಸಮಸ್ಯೆಯ ಪರಿಹಾರ
- ಗುರಿಮುಟ್ಟುವಿಕೆ
- ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.
- ಆತ್ಮವಿಶ್ವಾಸ. (ಯಾವುದಾದರೂ ಆರು)

**2. ಉದ್ಯಮಿಯ ಕಾರ್ಯಗಳು**

- ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
- ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
- ಉತ್ಪಾದಿಸುವ ವಸ್ತುಗಳು, ಮಾರುಕಟ್ಟೆ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ಎಲ್ಲ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
- ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
- ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.

**3. ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವನ್ನು ವಿವರಿಸಿ.**

- ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ.
- ಉದ್ಯೋಗಗಳನ್ನು ಒದಗಿಸುತ್ತಾರೆ.
- ದೇಶದ ಆದಾಯ ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
- ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
- ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.
- ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

**4. ಸ್ವಯಂ ಉದ್ಯೋಗಕ್ಕಾಗಿ ಸಾಲ ನೀಡುವ ಸಂಸ್ಥೆಗಳನ್ನು ಹೆಸರಿಸಿ.**

- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು ಮತ್ತು ರಫ್ತು ಬ್ಯಾಂಕು
- ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಭಾರತೀಯ ಕೈಗಾರಿಕಾ ಹಣಕಾಸು ನಿಗಮ
- ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು
- ರಾಜ್ಯ ಹಣಕಾಸು ನಿಗಮಗಳು

**5. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ**

- ಜಿಲ್ಲಾ ಕೈಗಾರಿಕೆ ಕೇಂದ್ರಗಳು
- ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
- ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
- ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
- ಕೈಗಾರಿಕಾ ಪ್ರದೇಶಗಳು
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ
- ತಾಂತ್ರಿಕ ಸಲಹಾ ಸಂಸ್ಥೆಗಳು (ಯಾವುದಾದರೂ ಆರು)

**6. ಉದ್ಯಮಿಗಳಿಗೆ ಸ್ವಂತ ಉದ್ಯೋಗ ಕೈಗೊಳ್ಳಲು ಇರುವ ಅವಕಾಶಗಳು ಯಾವುವು?**

- ಜಾಹಿರಾತು ಸೇವಾಸಂಸ್ಥೆಗಳು.
- ಮಾರುಕಟ್ಟೆ ಸಲಹಾ ಸಂಸ್ಥೆ.
- ಕೈಗಾರಿಕಾ ಸಲಹಾ ಸಂಸ್ಥೆ.
- ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು.
- ಛಾಯಾಪ್ರತಿ ತೆಗೆಯುವ ಕೇಂದ್ರಗಳು
- ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು.
- ಅಂತರ್ಜಾಲ ಮತ್ತು ಸಂಹವನ ಅಂಗಡಿಗಳು.
- ಕ್ರೆಚ್ ಮತ್ತು ಬ್ಯೂಟಿಪಾರ್ಲರ್ಗಳು. (ಯಾವುದಾದರೂ ಆರು)

# 4 ಅಂಕದ ಪ್ರಶ್ನೋತ್ತರಗಳು

## 7. ಸ್ವಾತಂತ್ರ್ಯ ಹೋರಾಟ

**1. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.**

- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಗ' ಎನ್ನುತ್ತಾರೆ.
- ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.
- ಜನರಲ್ಲಿ ರಾಜಕೀಯ ಎಚ್ಚರವನ್ನು ತರುವ ಪ್ರಯತ್ನ ಮಾಡಿದರು
- ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು.
- ದೇಶದ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತಾಯಿಸಿದರು.
- ಸೈನಿಕ ವೆಚ್ಚ ಕಡಿಮೆ ಮಾಡುವುದು.
- ಉತ್ತಮ ಶಿಕ್ಷಣ ಕೊಡುವುದು, ಮುಂತಾದ ಬೇಡಿಕೆಗಳನ್ನು ಬ್ರಿಟೀಷ್ ಸರ್ಕಾರದ ಮುಂದಿಟ್ಟರು.
- ಬಡತನದ ಬಗ್ಗೆ ಅಧ್ಯಯನ ಮತ್ತು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.
- ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ವಿವರಿಸಿದರು

**2. ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ. (ಬಾಲಗಂಗಾಧರ ತಿಲಕ)**

- ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗಿದೆ.
- ಅರಬಿಂದೋ ಘೋಷ್,ಬಿಪಿನ್‌ಚಂದ್ರ ಪಾಲ್, ಲಾಲ ಲಜಪತ ರಾಯ್ & ಬಾಲಗಂಗಾಧರ್ ತಿಲಕ್ ಪ್ರಮುಖ ತೀವ್ರಗಾಮಿಗಳು
- ತೀವ್ರವಾದಿಗಳು ಬಂಗಾಳ ವಿಭಜನೆಯನ್ನು ವಿರೋಧಿಸಿದರು.
- ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು.
- ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು.
- ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು.
- ಗಣೇಶ, ಶಿವಾಜಿ, ದುರ್ಗಾ ಮುಂತಾದ ಉತ್ಸವಗಳ ಮೂಲಕ ಜನರನ್ನು ಹೋರಾಟಕ್ಕೆ ಪ್ರೇರೇಪಿಸಿದರು .
- ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಆರಂಭಿಸಿದರು.
- ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು .

**3. ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರ ಬಹಳ ಮುಖ್ಯ . ಏಕೆ? ವಿವರಿಸಿ**

- ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು.
- ವಿ.ಡಿ.ಸಾವರ್ಕರ್, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್ ಮುಂತಾದವರು ಕ್ರಾಂತಿಕಾರಿಗಳಲ್ಲಿ ಪ್ರಮುಖರು.
- ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ನಂಬಿದ್ದರು.
- ರಹಸ್ಯ ಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿದರು.
- ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು.
- ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು.
- ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಜೀವಾವಧಿ ಶಿಕ್ಷೆಯನ್ನು ವಿಧಿಸಿತು.
- ಈ ಸಂದರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು.
- ರಾಷ್ಟ್ರೀಯ ಆಂದೋಲನಕ್ಕೆ ಅವರು ಸ್ಫೂರ್ತಿಯ ಚಿಲುಮೆಯಾಗಿದ್ದರು.
- ಭಾರತದ ಸ್ವಾತಂತ್ರ್ಯ ಹೋರಾಟದ ಹಂತಗಳಲ್ಲಿ ಕ್ರಾಂತಿಕಾರಿಗಳ ಹಂತ ವಿಶೇಷವಾದದ್ದು.

## 8 ಗಾಂಧೀಯುಗ ಮತ್ತು ಸ್ವಾತಂತ್ರ್ಯ ಹೋರಾಟ

**1. ಅಸಹಕಾರ ಚಳವಳಿಯನ್ನು ವಿವರಿಸಿ**

- 1920 ರಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಆರಂಭಿಸಿದರು.
- ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ತೊರೆದರು.
- ರಾಷ್ಟ್ರೀಯ ಶಾಲೆಗಳನ್ನು ತೆರೆಯಲಾಯಿತು.
- ನ್ಯಾಯಾಲಯಗಳನ್ನು ಬಹಿಷ್ಕರಿಸಲಾಯಿತು.
- ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು.
- ಪ್ರಾಂತೀಯ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಯನ್ನು ಬಹಿಷ್ಕರಿಸಿದರು.
- ಬ್ರಿಟನ್ ರಾಜಕುಮಾರ ಬರುವ ಕಾರ್ಯಕ್ರಮವನ್ನು ವಿರೋಧಿಸಲಾಯಿತು.
- ಬ್ರಿಟಿಷರು ನೀಡಿದ್ದ ಗೌರವ ಪದವಿಗಳನ್ನು ವಾಪಸ್ಸು ಮಾಡಲಾಯಿತು.
- ಚೌರಿ ಚೌರ ಹಿಂಸಾತ್ಮಕ ಘಟನೆಗಳಿಂದ ನೊಂದು ಗಾಂಧೀಜಿಯವರು ಈ ಚಳುವಳಿಯನ್ನು ಹಿಂತೆಗೆದುಕೊಂಡರು.

**2. ಸವಿನಯ ಕಾನೂನುಭಂಗ ಚಳವಳಿಯನ್ನು ವಿವರಿಸಿ**

- 1930ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ನಿರ್ಣಯದಂತೆ ಕಾನೂನುಭಂಗ ಚಳವಳಿಯನ್ನು ಆರಂಭಿಸಲಾಯಿತು.
- ಇದರ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿತು.
- ಗಾಂಧಿ ಹನ್ನೊಂದು ಅಂಶಗಳುಳ್ಳ ಬೇಡಿಕೆಗಳ ಪತ್ರವನ್ನು ವೈಸ್‌ರಾಯ್‌ಗೆ ಬರೆದರು.
- ವೈಸ್‌ರಾಯ್ ಈ ಮನವಿಗಳನ್ನು ತಿರಸ್ಕರಿಸಿದ್ದರಿಂದ ಕಾನೂನುಭಂಗ ಚಳವಳಿಯನ್ನು ಆರಂಭಿಸಲಾಯಿತು.

- ಗಾಂಧೀಜಿ ತಮ್ಮ ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ದಂಡಿಯವರೆಗೆ ಕ್ರಮಿಸಿದರು.
- ದಂಡಿಯಲ್ಲಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು.
- ಸಾವಿರಾರು ಜನರು ಗಾಂಧಿಜಿಯವರ ಕರೆಗೆ ಸ್ಪಂದಿಸಿ, ಚಳವಳಿಯಲ್ಲಿ ಭಾಗವಹಿಸಿದರು.
- ಈ ಚಳವಳಿಯು ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.

**3. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯರ ಪಾತ್ರ ಮಹತ್ವದ್ದು.. ವಿಷ್ಲೇಶಿಸಿ.**

- 1920 ರಿಂದ 1947ರ ಅವಧಿಯನ್ನು ಗಾಂಧಿಯುಗ ಎಂದು ಕರೆಯಲಾಗಿದೆ.
- ಅಹಿಂಸೆ ಮತ್ತು ಸತ್ಯಾಗ್ರಹವನ್ನು ಹೋರಾಟದ ಪ್ರಮುಖ ತಂತ್ರವನ್ನಾಗಿ ಬಳಸಿದರು.
- 1917ರಲ್ಲಿ ಚಂಪಾರಣ್ ಚಳುವಳಿಯನ್ನು ಆರಂಭಿಸಿದರು.
- 1920ರಲ್ಲಿ ಅಸಹಕಾರ ಚಳವಳಿಯನ್ನು ಆರಂಭಿಸಿದರು.
- 1930ರಲ್ಲಿ ಕಾನೂನುಭಂಗ ಚಳವಳಿಯನ್ನು ಆರಂಭಿಸಿದರು.
- ಸಬರಮತಿ ಆಶ್ರಮದಿಂದ ದಂಡಿಯವರೆಗೆ ಕ್ರಮಿಸಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು.
- ದುಂಡುಮೇಜಿನ ಪರಿಷತ್‌ನಲ್ಲಿ ಭಾಗವಹಿಸಿದರು.
- 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ "ಮಾಡು ಇಲ್ಲವೇ ಮಡಿ" ಎಂಬ ಸಂದೇಶವಿತ್ತರು.
- ಗಾಂಧೀಜಿಯವರ ಹೋರಾಟದ ಫಲವಾಗಿ 1947 ಅಗಸ್ಟ 15ರಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿತು.

**4. ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳನ್ನು ವಿವರಿಸಿ.**

- ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು.
- ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು.
- ತೆಲಂಗಾಣದಲ್ಲಿ ರೈತರು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿದರು.
- ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು.
- ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು.

**<u>ಕಾರ್ಮಿಕ ಬಂಡಾಯ</u>**

- ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು.
- ರೈಲ್ವೆ ಕೂಲಿಗಳು ಹೆಚ್ಚಿನ ಕೂಲಿಗಾಗಿ ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗಿದರು.
- ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು.
- ಕಾಂಗ್ರೆಸ್, ಕಾರ್ಮಿಕ ಸಂಘಟನೆಗಳ ಚಳುವಳಿಗೆ ಬೆಂಬಲ ನೀಡಿತು.
- ಸ್ವಾತಂತ್ರ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದದ್ದು.

**5. ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಬಂಡಾಯಗಳನ್ನು ವಿವರಿಸಿ**

- ಬ್ರಿಟಿಷರ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗಳಿಗೆ ಪ್ರೇರಣೆಯಾದವು.
- ಸಂತಾಲರ ದಂಗೆ, ಕೋಲರ ದಂಗೆ ಮತ್ತು ಮುಂಡ ಚಳುವಳಿ ಪ್ರಮುಖವಾಗಿವೆ.
- ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಪ್ರಮುಖವಾದುದು.
- ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು.
- ಇದರಿಂದ ಅಸಮಾಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿದರು.
- ಜಮೀನ್ದಾರರು ಮತ್ತು ಲೇವಾದೇವಿಗಾರರನ್ನು ಲೂಟಿಮಾಡಲು ನಿರ್ಧರಿಸಿದರು.
- ದಂಗೆಯು ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು.
- ಅನೇಕ ಜಮೀನ್ದಾರರು ಮತ್ತು ಲೇವಾದೇವಿದಾರರು ಪಲಾಯನ ಮಾಡಿದರು.
- ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು.
- ಕೋಲರು ಮತ್ತು ಮುಂಡರು ಬ್ರಿಟಿಷರ ವಿರುದ್ಧ ಹೋರಾಟಗಳನ್ನು ಮಾಡಿದರು.

**6. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಪಾತ್ರವನ್ನು ವಿವರಿಸಿ**

- ಸುಭಾಷ್ ಚಂದ್ರ ಬೋಸ್ 'ನೇತಾಜಿ' ಎಂದು ಜನಪ್ರಿಯರಾಗಿದ್ದರು.
- ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು.
- 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು.
- ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳುವಿಕೆಯನ್ನು ವಿರೋಧಿಸಿದರು.
- ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ಬೋಸರನ್ನು ಬಂಧಿಸಿತು.
- ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿ ಹಿಟ್ಲರ್ ನ ಸಹಾಯವನ್ನು ಯಾಚಿಸಿದರು.
- ಐ.ಎನ್.ಎ. ಯ ಮುಖಂಡತ್ವವನ್ನು ವಹಿಸಿದರು.
- 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು.
- ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು.
- ಆದರೆ, ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು.

**7. ಡಾ. ಬಿ.ಆರ್. ಅಂಬೇಡ್ಕರ್**

- ಎಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು.
- ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಗಳನ್ನು ರೂಪಿಸಿದರು.
- 'ಮಹದ್' ಮತ್ತು 'ಕಾಲಾರಾಂ' ಚಳವಳಿಗಳನ್ನು ರೂಪಿಸಿದರು.
- ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದರು.
- 'ಬಹಿಷ್ಕೃತ ಹಿತಕಾರಣಿ ಸಭಾ' ಸಂಘಟನೆಯನ್ನು ಸ್ಥಾಪಿಸಿದರು.
- 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಪಕ್ಷವನ್ನು ಸ್ಥಾಪಿಸಿದರು.
- 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು.
- ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
- ಸಂವಿಧಾನದಲ್ಲಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆ ಒದಗಿಸಿದರು.
- ಭಾರತದ ಮೊದಲ ಕಾನೂನು ಮಂತ್ರಿಯಾದರು.
- ಅವರ ಜೀವಮಾನದ ಸಾಧನೆಗಾಗಿ 'ಭಾರತರತ್ನ'ವನ್ನು ನೀಡಿ ಗೌರವಿಸಲಾಗಿದೆ.

**8. ಜವಾಹರಲಾಲ ನೆಹರು**

- ➢ ನೆಹರು ಭಾರತದ ಪ್ರಥಮ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು
- ➢ ಕೈಗಾರೀಕರಣ ಮತ್ತು ನವಭಾರತದ ಶಿಲ್ಪಿಯಾಗಿಯಾಗಿದ್ದಾರೆ.
- ➢ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು
- ➢ ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು
- ➢ ಅಲಿಪ್ತ ನೀತಿಯನ್ನು ಪ್ರತಿಪಾದಿಸಿದರು.
- ➢ ಪಂಚಶೀಲ ತತ್ವಗಳ ಮೇಲೆ ವಿದೇಶಾಂಗ ನೀತಿ ರೂಪಿಸಿದರು
- ➢ ಭಾರತದಲ್ಲಿ ಕೈಗಾರಿಕೀಕರಣವನ್ನು ಸಾಧಿಸಿದರು.
- ➢ ಸರ್ದಾರ್ ಪಟೇಲರ ನೆರವಿನಿಂದ ದೇಶಿಯ ಸಂಸ್ಥಾನಗಳ ವಿಲೀನಿಕರಣವನ್ನು ಪೂರ್ಣಗೊಳಿಸಿದರು
- ➢ ಭಾಷಾವಾರು ಪ್ರಾಂತ್ಯಗಳ ರಚನೆ ಮಾಡಿದರು.
- ➢ ಭಾರತವು ಅಣುಶಕ್ತಿಯನ್ನು ಹೊಂದಬೇಕೆನ್ನುವ ಆಶಯಕ್ಕೆ ತಳಹದಿಯನ್ನು ರೂಪಿಸಿದರು

**9. ಬ್ರಿಟಿಷರ ರೌಲೆಟ್ ಕಾಯಿದೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಿತು. ಸ್ಪಷ್ಟಿಕರಿಸಿ. / ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ**

- ➢ ಬ್ರಿಟಿಷ್ ಸರಕಾರ ರೌಲೆತ್ ಕಾಯ್ದೆಯನ್ನು ಮಾರ್ಚ್ 1919ರಲ್ಲಿ ಜಾರಿಗೆ ತಂದಿತು.
- ➢ ಇದರ ಮೂಲಕ ಬ್ರಿಟಿಷರು ಭಾರತೀಯ ರಾಷ್ಟ್ರೀಯವಾದಿಗಳನ್ನು ನಿಯಂತ್ರಿಸಲು ಪ್ರಾರಂಭಿಸಿದರು.
- ➢ ಇದು ಸ್ವಾತಂತ್ರ್ಯ ಹೋರಾಟಗಾರರು ಸಭೆ ಸೇರುವುದನ್ನು, ಸಂಘಟನೆ ಮಾಡುವ ಸ್ವಾತಂತ್ರ್ಯವನ್ನೂ ಕಿತ್ತುಕೊಂಡಿತ್ತು.
- ➢ ಗಾಂಧಿ ಇದನ್ನು ಪ್ರತಿಭಟಿಸುವ ಸಲುವಾಗಿ, 'ಸತ್ಯಾಗ್ರಹ ಸಭಾ' ಸಂಸ್ಥೆಯನ್ನು ಸ್ಥಾಪಿಸಿ ಹೋರಾಟವನ್ನು ಆರಂಭಿಸಿದರು.
- ➢ ಬ್ರಿಟಿಷ್ ಸರ್ಕಾರವು ರೌಲೆತ್ ಕಾಯ್ದೆಯ ಅನುಷ್ಠಾನದ ವಿರುದ್ಧದ ಪ್ರತಿಭಟನೆಗಳನ್ನು ದಮನಿಸಲು ನಿರ್ಧರಿಸಿತ್ತು.
- ➢ ಗಾಂಧಿ 1919 ಏಪ್ರಿಲ್ 6ರಂದು ಒಂದು ಬೃಹತ್ ಹರತಾಳಕ್ಕೆ ಕರೆ ನೀಡಿದರು.
- ➢ 1919 ಏಪ್ರಿಲ್ 13ರಂದು ಜಲಿಯನ್ ವಾಲಾ ಬಾಗ್‌ನಲ್ಲಿ ಜನರು ಬೈಸಾಕೀ ಹಬ್ಬದಂದು ಪ್ರತಿಭಟನಾ ಸಭೆ ಸೇರಿದರು.
- ➢ ಜನರಲ್ ಡಯರ್ ಜಲಿಯನ್‌ವಾಲಾಭಾಗ್ ಹತ್ಯಾಕಾಂಡ ನಡೆಸಿದ ಕಾರಣ 380 ಜನರು ಸತ್ತು ಸಾವಿರಾರು ಜನರು ಗಾಯಗೊಂಡರು.
- ➢ ಈ ಹತ್ಯಾಕಾಂಡವನ್ನು ವಿರೋಧಿಸಿ ರವೀಂದ್ರನಾಥ ಠಾಗೋರ್ ತಮ್ಮ 'ನೈಟ್‌ಹುಡ್' ಪದವಿಯನ್ನು ವಾಪಾಸ್ ಮಾಡಿದರು.
- ➢ ಗಾಂಧೀಜಿ ಅಸಹಕಾರ ಚಳುವಳಿಯನ್ನು ಆರಂಭಿಸಲು ಈ ಪ್ರಕರಣವು ಕಾರಣವಾಯಿತು.

## 20 ನೇ ಶತಮಾನದ ರಾಜಕೀಯ ಆಯಾಮಗಳು

**1. ಪ್ರಥಮ ಮಹಾಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ**

**ಕಾರಣಗಳು**

- ➢ ಅತಿಯಾದ ರಾಷ್ಟ್ರೀಯತೆ
- ➢ ಅತಿಯಾದ ಮಿಲೀಟರಿಕರಣ
- ➢ ಅತಿಯಾದ ಸಾಮ್ರಾಜ್ಯವಾದ
- ➢ ಮೈತ್ರಿಕೂಟಗಳ ರಚನೆ

**ಪರಿಣಾಮಗಳು**

- ➢ ಆಸ್ಟ್ರೋ-ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ಅಸ್ತಿತ್ವ ಕಳೆದುಕೊಂಡವು.
- ➢ ಯುರೋಪಿನ ಭೂಪಟವೇ ಬದಲಾಗಿ ಹೋಯಿತು.
- ➢ 1919ರಲ್ಲಿ ರಾಷ್ಟ್ರಸಂಘ ರಚನೆಯಾಯಿತು.
- ➢ ಸೋತ ರಾಷ್ಟ್ರಗಳೊಳಗೆ ಬೆಳೆದ ಅವಮಾನಕರ ಭಾವನೆಗಳು ಉಗ್ರ ರಾಷ್ಟ್ರೀಯತೆಗೆ ಕಾರಣವಾಯಿತು
- ➢ ಹಿಟ್ಲರ್‌ನಂತಹ ಸರ್ವಾಧಿಕಾರಿಯ ಬೆಳವಣಿಗೆಗೆ ಸಹಾಯವಾಯಿತು

**2.** 'ನಾಜಿ ಸಿದ್ಧಾಂತವು (ಹಿಟ್ಲರ್ ನ ಸರ್ವಾಧಿಕಾರತ್ವ) ಜರ್ಮನಿಯನ್ನು ಹಾಳು ಮಾಡಿತು' ಹೇಗೆ?

- ➢ ಜಗತ್ತಿನಲ್ಲಿ ಆರ್ಯ ಜರ್ಮನ್ ಜನಾಂಗ ಶ್ರೇಷ್ಠವಾದುದು.
- ➢ ಜಗತ್ತನ್ನು ಆಳಲು ಕೇವಲ ಜರ್ಮನ್ನರು ಮಾತ್ರ ಯೋಗ್ಯರು.
- ➢ ಉಳಿದ ಜನಾಂಗಗಳು ಆಳಿಸಿಕೊಳ್ಳಲು ಮಾತ್ರ ಯೋಗ್ಯರು.
- ➢ ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೇ ಕಾರಣ.
- ➢ ಇವರು ಬದುಕಲು ಯೋಗ್ಯರಲ್ಲ ಎಂಬ ಉಗ್ರ ರಾಷ್ಟ್ರೀಯವಾದವು ಜಾರಿಗೆ ಬಂದಿತು.
- ➢ ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೋಬೆಲ್ಸ್' ಎಂಬ ವಿಶೇಷವಾದ ಮಂತ್ರಿಯನ್ನು ನೇಮಕ ಮಾಡಿದ್ದನು.
- ➢ ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು 'ಬೂದು ಅಂಗಿದಳ' ಎಂಬ ಕ್ರೌರ್ಯಪಡೆಯೊಂದನ್ನು ರಚಿಸಿದ್ದನು
- ➢ ಹೊಲೊಕಾಸ್ಟ್ ಮೂಲಕ ಯಹೂದಿಗಳ ಸಾಮೂಹಿಕ ಕಗ್ಗೊಲೆಗಳನ್ನು ನಡೆಸಿದನು.
- ➢ ಜಗತ್ತನ್ನೇ ಗೆಲ್ಲಬೇಕೆಂಬ ಮಹತ್ವಾಕಾಂಕ್ಷೆಯೇ ಎರಡನೆಯ ಮಹಾಯುದ್ಧಕ್ಕೆ ಮುಖ್ಯ ಕಾರಣಗಳಲ್ಲೊಂದಾಯಿತು.

**3. ಎರಡನೆಯ ಮಹಾಯುದ್ಧಕ್ಕೆ ಕಾರಣಗಳು ಹಾಗೂ ಪರಿಣಾಮಗಳಾವುವು?**

**ಕಾರಣಗಳು**

- ➢ ಮೊದಲ ಮಹಾಯುದ್ಧದ ಅವಮಾನಕರ ಒಪ್ಪಂದಗಳು
- ➢ ಯುರೋಪಿನ ದೇಶಗಳಲ್ಲಿನ ಬೆಳೆದ ಉಗ್ರ ರಾಷ್ಟ್ರೀಯವಾದ
- ➢ ಹಿಟ್ಲರ್ ಮತ್ತು ಮುಸೋಲಿನಿಯಂತಹ ಸರ್ವಾಧಿಕಾರಿಗಳ ಏಳಿಗೆ
- ➢ ಎರಡು ವಿರುದ್ಧವಾದ ಶತ್ರುಬಣಗಳು

**ಪರಿಣಾಮಗಳು**

- ➢ ಮಾನವ ಚರಿತ್ರೆಯಲ್ಲೇ ಹೆಚ್ಚಿನ ಸಾವು-ನೋವುಗಳು ಸಂಭವಿಸಿದವು.
- ➢ ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು.
- ➢ ವಿಶ್ವಸಂಸ್ಥೆ ರಚನೆಯಾಯಿತು.
- ➢ ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಹೊಂದಿದವು

**4. ಎರಡನೆಯ ಮಹಾಯುದ್ಧದ ಫಲಿತಾಂಶಗಳಾವುವು?**

- ➢ ಮಾನವ ಚರಿತ್ರೆಯಲ್ಲೇ ಹೆಚ್ಚಿನ ಸಾವು-ನೋವುಗಳು ಸಂಭವಿಸಿದವು.
- ➢ ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು.
- ➢ ರಾಷ್ಟ್ರ ಸಂಘದ ಜಾಗದಲ್ಲಿ ವಿಶ್ವಸಂಸ್ಥೆ ರಚನೆಯಾಯಿತು .
- ➢ ಸೋವಿಯತ್ ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾದವು.
- ➢ ಶೀತಲ ಸಮರಕ್ಕೆ ಇದು ನಾಂದಿಯಾಯಿತು.
- ➢ ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಹೊಂದಿದವು
- ➢ ಬ್ರಿಟನ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ತಮ್ಮ ಹಿಡಿತದಲ್ಲಿದ್ದ ಬಹುತೇಕ ವಸಾಹತುಗಳನ್ನು ಕಳೆದುಕೊಂಡವು.
- ➢ ಅಮೆರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದ ಬೃಹತ್ ದೇಶಗಳ ನಡುವೆ ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

**5. 20 ನೇ ಶತಮಾನದ ಆರಂಭದಲ್ಲಿ ರಷ್ಯಾದ ರಾಜಕೀಯ ಪರಿಸ್ಥಿತಿ ಆಡಳಿತ ವ್ಯವಸ್ಥೆಯನ್ನು ಬದಲಿಸಿತು .ಸಮರ್ಥಿಸಿ .**

- 19ನೆಯ ಶತಮಾನದಲ್ಲಿ ರಷ್ಯಾವನ್ನು ಝಾರ್ ದೊರೆಗಳು ಆಳುತ್ತಿದ್ದರು.
- ಅವರು ತಮ್ಮ ಕೆಳಗಿದ್ದ ಕುಲೀನರು, ಜಮೀನ್ದಾರರು ರೈತರನ್ನು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು.
- ಝಾರ್ ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು.
- 1905ರಲ್ಲಿ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿದ್ದು ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧವನ್ನು ಎಬ್ಬಿಸಿತು.
- ಇದರಿಂದಾಗಿ ಅನೇಕ ದಂಗೆಗಳು ನಡೆದವು.
- ಕಾರ್ಮಿಕರು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು.
- ಕಾರ್ಖಾನೆಗಳ ಕಾರ್ಮಿಕರು ಮತ್ತು ಹಳ್ಳಿಗಳ ರೈತರು ಶಸ್ತ್ರಗಳನ್ನು ಹಿಡಿದು ಹೋರಾಡಿದರು.
- ಲೆನಿನ್ ರೈತರು ಮತ್ತು ಕಾರ್ಮಿಕರಿಗೆ ಮಾರ್ಗದರ್ಶನ ನೀಡಿದರು.
- ಮುಷ್ಕರಗಳ ತೀವ್ರತೆ ಹೆಚ್ಚಾಗಿ ರಷ್ಯಾದ ಕೊನೆಯ ದೊರೆ ಎರಡನೆಯ ನಿಕೋಲಸ್‌ನು ದೇಶ ತ್ಯಜಿಸಿ ಓಡಿಹೋದನು.
- 1917ರಲ್ಲಿ ಕ್ರಾಂತಿ ಸಂಭವಿಸಿ ಲೆನಿನ್ ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು.

## 1. ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

### (ಮೂರು/ನಾಲ್ಕು ಅಂಕದ ಪ್ರಶ್ನೋತ್ತರಗಳು )

**1. ಭಾರತದ ಎದುರಿಸುತ್ತಿರುವ ಸಮಸ್ಯೆಗಳು ಯಾವುವು?**

- ನಿರುದ್ಯೋಗ
- ಭ್ರಷ್ಟಾಚಾರ
- ತಾರತಮ್ಯ
- ಪ್ರಾಂತೀಯ ಅಸಮಾನತೆ
- ಕೋಮುವಾದ
- ಭಯೋತ್ಪಾದಕತೆ
- ಕಾರ್ಪೋರೇಟ್ ತಂತ್ರಗಾರಿಕೆ

**2. ನಿರುದ್ಯೋಗಕ್ಕೆ ಕಾರಣಗಳಾವುವು?**

- ಮಿತಿಮೀರಿದ ಜನಸಂಖ್ಯೆ
- ಹೆಚ್ಚಾದ ತಂತ್ರಜ್ಞಾನದ ಬಳಕೆ
- ನೈಸರ್ಗಿಕ ಸಂಪನ್ಮೂಲಗಳ ಕೊರತೆ
- ಕೃಷಿಯ ಮೇಲಿನ ಅಧಿಕ ಅವಲಂಬನೆ
- ಗೃಹ ಕೈಗಾರಿಕೆಗಳ ನಾಶ
- ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ

**3. ನಿರುದ್ಯೋಗವನ್ನು ಹೋಗಲಾಡಿಸಲು ಕ್ರಮಗಳನ್ನು ತಿಳಿಸಿ.**

- ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡಿಕೆ
- ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ನೀಡುವುದು
- ಸಹಾಯಧನ ನೀಡುವ ಮೂಲಕ ಸ್ವಯಂ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು.
- ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುವುದು.
- ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲಾ ಒಂದು ವೃತ್ತಿಯಲ್ಲಿ ತೊಡಗುವಂತೆ ಪ್ರೇರೇಪಿಸುವುದು.
- ವೃತ್ತಿ ಶಿಕ್ಷಣವನ್ನು ನೀಡುವುದು.

**4. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಕ್ರಮಗಳನ್ನು ತಿಳಿಸಿ**

- ಪ್ರಬಲ ರಾಜಕೀಯ ಇಚ್ಛಾಶಕ್ತಿ ಅತ್ಯಗತ್ಯ.
- ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ.
- ಒಳ್ಳೆಯ ರಾಜಕೀಯ ನಾಯಕತ್ವ,
- ಉತ್ತಮ ಅಧಿಕಾರಿ ವರ್ಗ
- ಲೋಕಪಾಲ, ಲೋಕಾಯುಕ್ತರಂತಹ ಸಂಸ್ಥೆಗಳು,
- ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರಗಳನ್ನು ಅಳವಡಿಸುವುದು
- ಕಛೇರಿಯ ಕಾರ್ಯನಿರ್ವಹಣೆಯ ವೇಗವನ್ನು ಹೆಚ್ಚಿಸುವುದು
- ಭ್ರಷ್ಟಾಚಾರದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವುದು.

**5. ಭಯೋತ್ಪಾದನೆ ಪ್ರಸ್ತುತ ಜಗತ್ತಿನಲ್ಲಿ ಅಮಾನವೀಯ ಕ್ರಿಯೆ. ಏಕೆ? (ಭಯೋತ್ಪಾದನೆಯ ಪರಿಣಾಮಗಳು)**

- ವ್ಯಕ್ತಿಗಳಿಗೆ ಮತ್ತು ಸ್ವತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ .
- ಉಗ್ರಗಾಮಿತ್ವ ಮಾನಸಿಕ ವೇದನೆಯನ್ನು ನೀಡುತ್ತದೆ .
- ಸಾಮಾಜಿಕ ಸಂಸ್ಕೃತಿಗೆ, ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ .
- ಭಯದ ವಾತಾವರಣ ಸೃಷ್ಟಿಸುತ್ತದೆ.
- ವಿಧ್ವಂಸಕ ಕೃತ್ಯಕ್ಕೆ ಎಡೆ ಮಾಡಿಕೊಡುತ್ತದೆ.
- ಸಾವು ನೋವು ಉಂಟು ಮಾಡುವುದಾಗಿದೆ.
- ಹಿಂಸೆಯ ಕೃತ್ಯಗಳು ಕಾನೂನು ಬಾಹಿರ ಹಾಗೂ ಸಮಾಜದ್ರೋಹಿ ಎನಿಸುವಂತಹವು.

**6. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ನಿಮ್ಮ ಸಲಹೆಗಳೇನು?**

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ.
- ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ
- ಬಾಲ್ಯವಿವಾಹ ನಿಷೇಧಕಾಯ್ದೆ ರೂಪಿಸಿದೆ.
- ವರದಕ್ಷಿಣೆ ನಿಷೇಧ ಕಾಯ್ದೆ ರೂಪಿಸಿದೆ.
- ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಕಾರ್ಯಕ್ರಮ ರೂಪಿಸಿದೆ
- ಮಹಿಳೆಯರ ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡಲಾಗುತ್ತದೆ.
- ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಲಾಗಿದೆ
- ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಯನ್ನು ನೀಡಲಾಗಿದೆ.
- ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ನೀಡಲಾಗುತ್ತದೆ.

**7. ಕಾರ್ಪೋರೇಟ್ ತಂತ್ರಗಾರಿಕೆಯನ್ನು ವಿವರಿಸಿ.**

- ಕಾರ್ಪೋರೇಟ್ ತಂತ್ರಗಾರಿಕೆಯ ಪ್ರಮುಖ ಉದ್ದೇಶ ಲಾಭವನ್ನು ಪಡೆಯುವುದಾಗಿರುತ್ತದೆ.
- ವ್ಯಕ್ತಿಯ ಜೀವನ, ಸಮಾಜ ಮತ್ತು ರಾಷ್ಟ್ರಗಳ ಮೇಲೆ ನಕಾರಾತ್ಮಕವಾದ ಬೆಳವಣಿಗೆ ಉಂಟಾಗುತ್ತದೆ.
- ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲೆ ಪ್ರಭಾವ ಬೀರುತ್ತವೆ.
- ಕಾರ್ಪೋರೇಟ್ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಕಾಶ ಕಲ್ಪಿಸಲಾಗಿದೆ.
- ಸಮಾಜದಲ್ಲಿ ಸುಸ್ಥಿರ ಜಾಗೃತಿಯನ್ನು ಮಾಡಿಸಿದಾಗ ಕಾರ್ಪೋರೇಟ್ ತಂತ್ರಗಾರಿಕೆ ಹೆಚ್ಚು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

**8. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?**

- ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆಗೆ ಕಾರಣವಾಗಿದೆ.
- ಭಯದ ವಾತಾರವಣವನ್ನು ಸೃಷ್ಟಿಸುತ್ತದೆ.
- ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆಯನ್ನು ಸೃಷ್ಟಿಸುತ್ತದೆ.
- ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುತ್ತದೆ.
- ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ.
- ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
- ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆಗಳಿಗೆ ಕಾರಣವಾಗುತ್ತದೆ.
- ದೇಶದ ಹಿತಾಸಕ್ತಿಗಿಂತ ಮತೀಯ ಗುಂಪುಗಳ ಹಿತಾಸಕ್ತಿ ಹೆಚ್ಚಿನದು ಎಂದು ಪರಿಗಣಿಸುತ್ತದೆ.
- ಇದರಿಂದ ದೇಶದ ಏಕತೆಗೆ ದಕ್ಕೆಯಾಗುತ್ತದೆ.

**9. ಕೋಮುವಾದವನ್ನು ನಿಯಂತ್ರಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.**

- ಏಕರೂಪ ನಾಗರಿಕ ಸಂಹಿತೆ
- ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವಿಕೆ
- ಜಾತ್ಯತೀತ ಮನೋಭಾವಕ್ಕೆ ಪ್ರಾಶಸ್ತ್ಯ ನೀಡುವುದು.
- ಸಂಕುಚಿತ ವಿಭಾಗೀಯ ಚಿಂತನೆಗಳಿಂದ ರಾಷ್ಟ್ರೀಯ ಚಿಂತನೆಗೆ ಹೆಚ್ಚು ಒತ್ತು ನೀಡುವುದು.
- ಭಾರತದ ಎಲ್ಲಾ ಮತಗಳು ಜನರಲ್ಲಿ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು.
- ಮತೀಯ ಮೂಲಭೂತವಾದವನ್ನು ತಡೆಗಟ್ಟಬೇಕು.

## 5. ಜಾಗತಿಕ ಸಂಸ್ಥೆಗಳು

**1. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು ಯಾವುವು?**

- ಸಾಮಾನ್ಯ ಸಭೆ
- ಭದ್ರತಾ ಸಮಿತಿ
- ಆರ್ಥಿಕ ಹಾಗೂ ಸಾಮಾಜಿಕ ಸಮಿತಿ
- ದತ್ತಿ ಸಮಿತಿ
- ಅಂತರರಾಷ್ಟ್ರೀಯ ನ್ಯಾಯಾಲಯ
- ಸಚಿವಾಲಯ

**2. ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು ಯಾವುವು?**

- ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು
- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು
- ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು
- ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳುವುದು.
- ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳಿಗೆ ಮನ್ನಣೆ ಒದಗಿಸುವುದು
- ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

**3. ಭದ್ರತಾ ಸಮಿತಿಯ ರಚನೆ ಮತ್ತು ಕಾರ್ಯಗಳನ್ನು ತಿಳಿಸಿ.**

**ಭದ್ರತಾ ಸಮಿತಿಯ ರಚನೆ**

- ಇದರಲ್ಲಿ 15 ಮಂದಿ ಸದಸ್ಯರಿರುತ್ತಾರೆ.
- ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಬ್ರಿಟನ್, ಫ್ರಾನ್ಸ್ ಹಾಗೂ ಚೈನಾ ಖಾಯಂ ಸದಸ್ಯತ್ವ ಹೊಂದಿದ ರಾಷ್ಟ್ರಗಳು
- ಇವುಗಳು ವಿಟೋ ಅಧಿಕಾರವನ್ನು ಹೊಂದಿವೆ.
- 10 ಹಂಗಾಮಿ ಸದಸ್ಯರನ್ನು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತದೆ.

**ಭದ್ರತಾ ಸಮಿತಿಯ ಕಾರ್ಯಗಳು**

- ವಿಟೋ ಅಧಿಕಾರವನ್ನು ಹೊಂದಿವೆ.
- ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಭದ್ರತಾ ಸಮಿತಿ ಯತ್ನಿಸುತ್ತದೆ.
- ಅಂತರರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ಶಾಂತಿಪಾಲನಾ ಪಡೆಯನ್ನು ನಿಯೋಜಿಸುತ್ತದೆ.
- ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುತ್ತದೆ.
- ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಯ ಆಯ್ಕೆಗೆ ಹೆಸರು ಸೂಚಿಸುವುದು

**4. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಮುಖ್ಯ ಕಾರ್ಯಗಳು**

- ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ವಿಷಯಗಳ ಅಧ್ಯಯನ ಹಾಗೂ ವರದಿ ಮಾಡುವಿಕೆ.
- ನಿರಾಶ್ರಿತರು, ವಸತಿ ಸಮಸ್ಯೆಗಳ ನಿವಾರಣೆ
- ಮಾನವ ಹಕ್ಕುಗಳ ಬಗ್ಗೆ ಶಿಫಾರಸ್ಸು ಮಾಡುತ್ತದೆ.
- ಮೂಲಭೂತ ಸ್ವಾತಂತ್ರ್ಯಗಳ ಬಗೆಗೆ ಶಿಫಾರಸ್ಸು ಮಾಡುತ್ತದೆ.
- ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನ ಸಂಘಟಿಸುವುದು.
- ವಿಶೇಷ ಪ್ರಾವಿಣ್ಯತೆಯ ಅಂಗ ಸಂಸ್ಥೆಗಳ ಕಾರ್ಯಗಳನ್ನು ಸಮನ್ವಯ ಮಾಡುವುದು.

**5. ವಿಶ್ವದ ಆರೋಗ್ಯ ಸುಧಾರಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರವನ್ನು ವಿವರಿಸಿ.**

- ಪ್ರಪಂಚದ ಮಾನವರ ಆರೋಗ್ಯ ಸುಧಾರಿಸಲು ಸ್ಥಾಪನೆಗೊಂಡಿದೆ.
- ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ತೊಡೆದು ಹಾಕಲು ಯತ್ನಿಸುತ್ತಿದೆ.
- ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಮುಕ್ತಿಗೊಳಿಸಲು ಪ್ರಯತ್ನಿಸುತ್ತದೆ.
- ಸಿಡುಬು ರೋಗವನ್ನು ನಿವಾರಿಸುವಲ್ಲಿ ಯಶಸ್ಸು ಕಂಡಿದೆ.
- ಜನಸಂಖ್ಯಾ ಸ್ಫೋಟ ಹೋಗಲಾಡಿಸಲು ಪ್ರಯತ್ನ
- ಹಸಿವು, ಪೌಷ್ಟಿಕತೆಯ ಕೊರತೆ ಹೋಗಲಾಡಿಸಲು ಪ್ರಯತ್ನಿಸುತ್ತದೆ.

**6. ವಿಶ್ವಸಂಸ್ಥೆ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದ ಸಾಧನೆಗಳು ಯಾವುವು?**

- ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ (ಗ್ಯಾಟ್) ಜಾರಿಗೆ
- ವಿಶ್ವಬ್ಯಾಂಕ್, ಐ.ಎಮ್.ಎಫ್ ನಂತಹ ವಿತ್ತೀಯ ಸಂಸ್ಥೆಗಳ ಸ್ಥಾಪನೆ
- ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್ ಗಳ ಸ್ಥಾಪನೆ
- 1948ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ
- ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದೆ.
- ಸಾಮ್ರಾಜ್ಯಶಾಹಿತ್ವವನ್ನು ಇಲ್ಲವಾಗಿಸಿದೆ.
- ವಸಾಹತುಶಾಹಿತ್ವ ಇಲ್ಲವಾಗಿಸಿದೆ.

**7. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳಾವುವು?**

- ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು
- ಸ್ವಾತಂತ್ರ್ಯದ ಸಂರಕ್ಷಣೆ
- ಬಡತನ ನಿರ್ಮೂಲನ
- ವಿಶ್ವಶಾಂತಿ ನೆಲೆಗೊಳಿಸುವಿಕೆ
- ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆ
- ಪರಸ್ಪರ ಸದಸ್ಯರಾಷ್ಟ್ರಗಳ ಮೈತ್ರಿಯನ್ನು ಬಲಪಡಿಸುತ್ತದೆ.

**8. ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳಾವುವು?**
- ಆಹಾರ ಮತ್ತು ಕೃಷಿ ಸಂಸ್ಥೆ
- ವಿಶ್ವ ಆರೋಗ್ಯ ಸಂಸ್ಥೆ
- ಯುನೆಸ್ಕೋ
- ಯುನಿಸೆಫ್
- ಐ.ಎಮ್.ಎಫ್
- ಐ.ಬಿ.ಆರ್.ಡಿ
- ಅಂತರರಾಷ್ಟ್ರಿಯ ಕಾರ್ಮಿಕ ಸಂಘ.
- ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ.
- ವಿಶ್ವ ವ್ಯಾಪಾರ ಸಂಘ.

**9. ಜಾಗತಿಕ ಶಾಂತಿಸ್ಥಾಪನೆಯಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾದುದು. ಸಮರ್ಥಿಸಿ. (ಶಾಂತಿಸ್ಥಾಪನೆಯ ಕಾರ್ಯಗಳು)**
- ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ
- ಸುಯೆಜ್‌ಕಾಲುವೆ ಬಿಕ್ಕಟ್ಟು * ಇರಾನ್ ಸಂಘರ್ಷ
- ಇಂಡೋನೇಷ್ಯಾ ಸಮಸ್ಯೆ * ಕಾಶ್ಮೀರ ಸಮಸ್ಯೆ
- ಪ್ಯಾಲೆಸ್ಟೈನ್ ಸಮಸ್ಯೆ * ಕೊರಿಯಾ ಬಿಕ್ಕಟ್ಟು
- ಹಂಗೇರಿ ಸಮಸ್ಯೆ * ಕಾಂಗೋ ಸಮಸ್ಯೆ
- ಅರಬ್–ಇಸ್ರೇಲ್ ಸಮಸ್ಯೆ * ನಮೀಬಿಯಾ ಸಮಸ್ಯೆ
- ಅಫ್ಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ.
- ಮೂರನೆಯ ಮಹಾಯುದ್ಧ ನಡೆಯದಂತೆ ತಡಿದಿದ್ದು ಪ್ರಮುಖ ಸಾಧನೆಯಾಗಿದೆ
- ಅಣ್ವಸ್ತ್ರ ಹಾಗೂ ನಿಶ್ಶಸ್ತ್ರೀಕರಕ್ಕೆ ಪ್ರಯತ್ನ ಮಾಡುತ್ತಿದೆ.
- ವಿಶ್ವ ಶಾಂತಿಯ ನೆಲೆಯಲ್ಲಿ ವಿಶ್ವ ಸಂಸ್ಥೆ ಪ್ರಮುಖ ಪಾತ್ರ ನಿರ್ವಹಿಸಿದೆ.

**10. ವಿಶ್ವಸಂಸ್ಥೆಯ ಸಾಧನೆಗಳನ್ನು ವಿವರಿಸಿ.**

✓ **ಶಾಂತಿಸ್ಥಾಪನೆಯ ಕಾರ್ಯಗಳು**
- ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡುತ್ತಿದೆ.
- ರಾಷ್ಟ್ರ–ರಾಷ್ಟ್ರಗಳ ನಡುವಿನ ಅನೇಕ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ.

✓ **ಆರ್ಥಿಕ ಹಾಗೂ ಹಣಕಾಸಿನ ಸಾಧನೆ**
- ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸುತ್ತಿದೆ.
- ವಿಶ್ವಸಂಸ್ಥೆಯ ಪ್ರಗತಿ ಯೋಜನೆ ರೂಪಿಸಿದೆ.

✓ **ಸಾಮಾಜಿಕ ಸಾಧನೆಗಳು**
- 1948ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ಮಾಡಿದೆ.
- ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದೆ.
- ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಇತ್ಯಾದಿಗಳನ್ನು ಇಲ್ಲವಾಗಿಸುವಲ್ಲಿ ವಿಶ್ವಸಂಸ್ಥೆಯ ಪಾತ್ರ ಗಮನಾರ್ಹ.

## 5. ಭಾರತದ ಅರಣ್ಯ ಸಂಪತ್ತು

**1. ಅರಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.**
- ಜಾನುವಾರುಗಳಿಗೆ ಮೇವು ಮತ್ತು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.
- ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ.
- ಮರುಭೂಮೀಕರಣವನ್ನು ತಡೆಯುತ್ತವೆ,
- ಮಣ್ಣಿನ ಫಲವತ್ತತೆಯ ವೃದ್ಧಿಗೆ ನೆರವಾಗುತ್ತವೆ.
- ವಾಯುಗುಣದ ಸಮತೋಲನವನ್ನು ಕಾಪಾಡುತ್ತವೆ.
- ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

**2. ಅರಣ್ಯ ಎಂದರೇನು? ಭಾರತದಲ್ಲಿ ಕಂಡುಬರುವ ಅರಣ್ಯಗಳ ವಿಧಗಳಾವುವು?**
- ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ' (ಕಾಡು) ಎನ್ನುವರು.

✓ **ಅರಣ್ಯಗಳ ವಿಧಗಳು**
- ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು
- ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.
- ಕುರುಚಲು ಸಸ್ಯ ಮತ್ತು ಹುಲ್ಲುಗಾವಲು
- ಮರುಭೂಮಿ ಸಸ್ಯವರ್ಗ
- ಪರ್ವತ ಕಾಡುಗಳು
- ಮ್ಯಾಂಗ್ರೋವ್ ಕಾಡುಗಳು

**3. ಭಾರತದಲ್ಲಿ ಅರಣ್ಯ ಸಂರಕ್ಷಣಾ ಕ್ರಮಗಳನ್ನು ತಿಳಿಸಿ. / ಕಾಡುಗಳನ್ನು ಹೇಗೆ ಸಂರಕ್ಷಿಸಬಹುದು?**
- ಅರಣ್ಯ ನಾಶ ನಿಯಂತ್ರಣ.
- ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟವುದು.
- ಕಾಡ್ಗಿಚ್ಚು ನಿಯಂತ್ರಣ.
- ಅರಣ್ಯ ಅತಿ ಕ್ರಮಣದ ತಡೆ.
- ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ.
- ಮರಗಳ ಕಳ್ಳಸಾಗಣೆ ತಡೆ.
- ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು.
- ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವುದು.
- ಅರಣ್ಯ ಬೆಳೆಸಲು ಪ್ರೋತ್ಸಾಹ ನೀಡುವುದು.

**4. ಉಷ್ಣ ವಲಯದ ನಿತ್ಯ ಹರಿದ್ವರ್ಣದ ಕಾಡುಗಳು ಹಾಗೂ ಎಲೆ ಉದುರಿಸುವ ಕಾಡುಗಳ ವ್ಯತ್ಯಾಸಗಳಾವುವು?**

| **ಉಷ್ಣ ವಲಯದ ನಿತ್ಯ ಹರಿದ್ವರ್ಣದ ಕಾಡುಗಳು** | **ಉಷ್ಣ ವಲಯದ ಲೆ ಉದುರಿಸುವ ಕಾಡುಗಳು** |
|---|---|
| ➤ 250 ಸೆಂ.ಮೀ.ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ. | ➤ ವರ್ಷದಲ್ಲಿ 100–200 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ. |
| ➤ ಮರಗಿಡಗಳು ಯಾವುದೇ ಒಂದೇ ಅವಧಿಯಲ್ಲಿ ಎಲೆಗಳನ್ನು ಉದುರಿಸುವುದಿಲ್ಲ. | ➤ ಮರಗಳು ವಸಂತಋತು ಮತ್ತು ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ |
| ➤ ಪ್ರಮುಖ ಮರಗಳೆಂದರೆ – ತೇಗ, ಬೀಟೆ, ಎಬೋನಿ, ಮಹೊಗನಿ, ಗುರ್ಜಾನ್, ಚಂಪ ಮುಂತಾದವು. | ➤ ಪ್ರಮುಖ ಮರಗಳೆಂದರೆ – ತೇಗ, ಸಲೆ, ಶ್ರೀಗಂಧ, ಕೆಂದಾಳ ಮುಂತಾದವು. |
| ➤ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ, ಈಶಾನ್ಯ ರಾಜ್ಯಗಳು, ಅಂಡಮಾನ್–ನಿಕೋಬರ್ ದ್ವೀಪಗಳಲ್ಲಿ ಹಂಚಿಕೆಯಾಗಿವೆ. | ➤ ಘಟ್ಟಗಳ ಪೂರ್ವ ಇಳಿಜಾರು, ಛೋಟಾನಾಗಪುರ ಪ್ರಸ್ಥಭೂಮಿ, ಹಿಮಾಲಯದ ಪಾದ ಭಾಗಗಳಲ್ಲಿ ಹಂಚಿಕೆಯಾಗಿವೆ |

**5. ಅರಣ್ಯ ನಾಶಕ್ಕೆ ಕಾರಣಗಳಾವುವು?**
- ಕೃಷಿ ಕ್ಷೇತ್ರದ ವಿಸ್ತರಣೆ
- ರಸ್ತೆ ಮತ್ತು ರೈಲು ಮಾರ್ಗಗಳು
- ನೀರಾವರಿ ಯೋಜನೆಗಳ ನಿರ್ಮಾಣ
- ಕೈಗಾರಿಕೀಕರಣ
- ನಗರೀಕರಣ
- ಅತಿಯಾಗಿ ಮೇಯಿಸುವಿಕೆ
- ಕಾಡ್ಗಿಚ್ಚು

## ಭೂಗೋಳ 7. ಭಾರತದ ಭೂ ಸಂಪನ್ಮೂಲಗಳು

**1. ಭಾರತದಲ್ಲಿ ತೋಟಗಾರಿಕೆಯ ಮಹತ್ವ ಕುರಿತು ವಿವರಿಸಿ. (ಎರಡು/ಮೂರು ಅಂಕ)**
- ಸಮರ್ಪಕ ಭೂಬಳಕೆ ಮತ್ತು ಸಮರ್ಪಕ ನೈಸರ್ಗಿಕ ಸಂಪನ್ಮೂಲಗಳ ಬಳಕೆ.
- ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಒದಗಿಸುವುದು.
- ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸುತ್ತದೆ.
- ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ.
- ಆಹಾರ ಭದ್ರತೆಗೆ ನೆರವಾಗುತ್ತದೆ.

**2. ದೇಶದ ಕೃಷಿಯ ಮೇಲೆ ಪುಷ್ಪ ಕೃಷಿಯು ಮಹತ್ವದ ಪಾತ್ರವಹಿಸುತ್ತದೆ. ಸಮರ್ಥಿಸಿ (ಎರಡು ಅಂಕ)**
- ಇದು ರೈತರ ಆದಾಯ ಗಳಿಕೆಗೆ ಸಹಾಯಕವಾಗಿದೆ.
- ಉದ್ಯೋಗಾವಕಾಶ ಒದಗಿಸುತ್ತದೆ.
- ಮಹಿಳೆಯರಿಗೆ ವೃತ್ತಿ ಅವಕಾಶ ಕಲ್ಪಿಸುತ್ತದೆ.
- ದೇಶದ ರಫ್ತು ವ್ಯಾಪಾರದ ವೃದ್ಧಿಗೆ ನೆರವಾಗುತ್ತದೆ.

**3. ಭೂಬಳಕೆ ಎಂದರೇನು? ಭಾರತದ ಭೂಬಳಕೆಯ ಮಾದರಿಗಳಾವುವು?**
- ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು.


**ಭಾರತದ ಭೂಬಳಕೆಯ ಮಾದರಿಗಳು**
- ನಿವ್ವಳ ಸಾಗುವಳಿ ಪ್ರದೇಶ
- ಅರಣ್ಯ ಪ್ರದೇಶ
- ಕೃಷಿಗಾಗಿ ದೊರೆಯದ ಭೂಮಿ
- ಪಾಳುಭೂಮಿ
- ಬಳಕೆಯಾಗದ ಕೃಷಿ ಯೋಗ್ಯಭೂಮಿ.
- ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ.


**4. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿಯ ಪಾತ್ರವನ್ನು ವಿವರಿಸಿ. (ವ್ಯವಸಾಯದ ಪ್ರಾಮುಖ್ಯತೆ)**
- ವ್ಯವಸಾಯವು ಮಾನವನ ಅತ್ಯಂತ ಪ್ರಮುಖ ಹಾಗೂ ಪ್ರಾಚೀನವಾದ ವೃತ್ತಿಗಳಲ್ಲಿ ಒಂದಾಗಿದೆ.
- ಭಾರತವು ಕೃಷಿ ಪ್ರಧಾನವಾದ ದೇಶ.
- ದೇಶದ ಶೇ.65ರಷ್ಟು ಜನಸಂಖ್ಯೆ ಕೃಷಿಯನ್ನು ಆಧರಿಸಿದೆ.
- ದೇಶದ ಆರ್ಥಿಕಾಭಿವೃದ್ಧಿಯು ಕೃಷಿಯ ಪ್ರಗತಿಯನ್ನಾಧರಿಸಿದೆ.
- ಜನರು ಮತ್ತು ಜಾನುವಾರುಗಳಿಗೆ ಆಹಾರವನ್ನು ಪೂರೈಸುತ್ತದೆ.
- ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ.
- ದೇಶದ ತೃತೀಯ ವೃತ್ತಿಗಳಿಗೆ ನೆರವಾಗುತ್ತದೆ.
- ಕೈಗಾರಿಕೆಗಳ ಪ್ರಗತಿಗೂ ನೆರವಾಗುವುದು.
- ದೇಶದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೂ ಪ್ರಭಾವ ಬೀರುತ್ತದೆ.


**5. ಭಾರತದಲ್ಲಿ ರೂಢಿಯಲ್ಲಿರುವ ಕೃಷಿಯ ವಿಧಗಳು ಯಾವುವು?**
- ಜೀವನಾಧಾರಿತ ಬೇಸಾಯ
- ಸಾಂದ್ರ ಬೇಸಾಯ
- ವಾಣಿಜ್ಯ ಬೇಸಾಯ
- ಮಿಶ್ರಣ ಬೇಸಾಯ
- ನೆಡುತೋಪು ಬೇಸಾಯ
- ಒಣ ಬೇಸಾಯ
- ಆರ್ದ್ರ ಬೇಸಾಯ
- ನೀರಾವರಿ ಬೇಸಾಯ


**6. ಭೂಬಳಕೆಯನ್ನು ನಿರ್ಧರಿಸುವ ಅಂಶಗಳಾವುವು? / ಭೂಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು**
- ಭೂ ಮೇಲ್ಮೈ ಲಕ್ಷಣ
- ವಾಯುಗುಣ
- ಮಣ್ಣು
- ಜನಸಾಂದ್ರತೆ
- ಸಾಮಾಜಿಕ ಅಂಶಗಳು
- ಆರ್ಥಿಕ ಮತ್ತು ತಾಂತ್ರಿಕ ಅಂಶಗಳು


**7. ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಏಕೆ?**
- ಮೇಲ್ಮೈ ಲಕ್ಷಣ
- ಮಣ್ಣು
- ವಾಯುಗುಣ
- ಭೂಹಿಡುವಳಿಯ ಗಾತ್ರ
- ನೀರಿನ ಪೂರೈಕೆ
- ರೈತರ ಆರ್ಥಿಕ ಪರಿಸ್ಥಿತಿ
- ತಂತ್ರಜ್ಞಾನ
- ಇವುಗಳಿಂದ ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ






- ✓ ನಕಾಶೆಯಲ್ಲಿ ಗುರ್ತಿಸುವ ಸ್ಥಳಗಳನ್ನು ಪರೋಕ್ಷಾಗಿ ಕೇಳಬಹುದು, ಅವುಗಳನ್ನು ಗಮನಿಸಿ.
- ✓ ಉದಾ: **ಭಾರತದ ಹೆಬ್ಬಾಗಿಲು (ಮುಂಬೈ)**
- ✓ ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲ ಅಧ್ಯಾಯದಲ್ಲಿ ಬರುವ ನಕಾಶೆಗಳನ್ನು ಗಮನಿಸಿ
- ✓ ಬೇರೆ ಸಾಧ್ಯತೆಗಳನ್ನೂ ಗಮನಿಸುವುದು.




Seven Steps to Success 1) Make a commitment to grow daily. 2) Value the process more than events. 3) Don't wait for inspiration. 4) Be willing to sacrifice pleasure for opportunity. 5) Dream big. 6) Plan your priorities. 7) Give up to go up.

# ವೈಶಿಷ್ಟ್ಯಗಳು

* “ಉತ್ತೀರ್ಣ”ವನ್ನು ಪರಿಷ್ಕರಿಸಿ “ಸವಿಮಿತ್ರ” ಎಂದು ಹೆಸರಿಸಲಾಗಿದೆ.
* **Average** ಕಲಿಕೆಯ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ.
* ಎಲ್ಲ ವಿಧದ (ವಿಶೇಷ ಕಾಳಜಿಯ) ಮಕ್ಕಳಿಗೂ ಬಳಸಬಹುದು.
* 50 ರಿಂದ 60 ಅಂಕಗಳನ್ನು ಪಡೆಯುವಂತೆ ರಚಿಸಲಾಗಿದೆ.
* ಮಂಡಳಿಯ ಮಾದರಿ ಪ್ರಶ್ನೆಪತ್ರಿಕೆಯನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ.
* 1,2,3,4 ಅಂಕಗಳ ಪ್ರಶ್ನೋತ್ತರಗಳನ್ನು ಪ್ರತ್ಯೇಕವಾಗಿ ರಚಿಸಲಾಗಿದೆ.
* ಒಂದು ಅಂಕದ ಉತ್ತರಗಳನ್ನು ಪ್ರಮುಖ ಅಂಶಗಳ ರೂಪದಲ್ಲಿ ನೀಡಲಾಗಿದೆ.
* 2,3,4 ಅಂಕದ ಪ್ರಶ್ನೆಗಳಿಗೆ ಪಾಯಿಂಟ್ ರೂಪದಲ್ಲಿ ಉತ್ತರ ನೀಡಲಾಗಿದೆ.
* ಪ್ರತೀ ಪ್ರಶ್ನೆಗಳಿಗೆ ಸರಳ ಉತ್ತರ ನೀಡಲಾಗಿದೆ.
* ಬಹು ನಿರೀಕ್ಷಿತ ಸ್ಥಳಗಳನ್ನೊಳಗೊಂಡ ನಕಾಶೆಗಳನ್ನು ನೀಡಲಾಗಿದೆ.

ರಚನೆ

ವಸಂತಕುಮಾರ(ವಾಸು) ಶ್ಯಾಗೋಟಿ

ಸರಕಾರಿ ಪ್ರೌಢಶಾಲೆ ಹದಲಿ, ಗದಗ